ಶ್ರೀ ವಾಟಾಳ್ ನಾಗರಾಜ್.—ಶ್ರೀಮತಿ ನಾಗರತ್ನಮ್ಮನವರು ಈ ರೀತಿ ಹೇಳುತ್ತಾರೆ ಎಂದು ನಾನು ಅಂದುಕೊಂಡಿರಲಿಲ್ಲ. ಅವರು ಅಧ್ಯಕ್ಷರ ಸ್ಥಾನದಲ್ಲಿ ಸೀಟುಭರ್ತಿ ಕುಳಿತಿರುತ್ತಿದ್ದರು. ಆಗ ಈ ರೀತಿ ನಡೆಯುತ್ತಿತ್ತು. ಅವರೇ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೩ ಮಂತ್ರಿಗಳಿಗೆ ೩ ಮಂತ್ರಿಗಳಿರುತ್ತಿದ್ದರು. ಈಗ ೧೧ರಲ್ಲಿ ೫ ಜನ ಇದ್ದಾರೆ. ಹೋಲಿಕೆ ಮಾಡಿ.

ಶ್ರೀ ವಾಟಾಳ್ ನಾಗರಾಜ.—ಒಂದು ಸಲಹೆಯನ್ನು ಅಧ್ಯಕ್ಷರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಆ ಕಡೆ ೧೭೯ ಪ್ಲಸ್ ೬ ಜನ ಇಂಡಿಪೆಂಡೆಂಟ್ಸ್ ಸೇರಿಸಿದರೆ ೧೮೫ ಆಗುತ್ತದೆ. ನಮ್ಮಲ್ಲೂ ಶೇಕಡ ವಾರು ತೆಗೆದುಕೊಳ್ಳಿ. ಕಾಂಗ್ರೆಸ್ ಕಡೆಯೆಲ್ಲ ಬರೀ ಖಾಲಿ. ಅದೂ ಮೂರನೆಯ ದಿವಸಕ್ಕೆ ಸಭಾಧ್ಯಕ್ಷರು ಅವರಿಗೆ ತೆರೆಮರೆಯಲ್ಲಿ ತಿಳಿವಳಿಕೆ ನೀಡಿದರೆ ಒಳ್ಳೆಯದು. ಬಹಿರಂವಾಗಿ ಹೇಳಿದರೆ ಅರ್ಥವಾಗುತ್ತದೆಯೋ ಇಲ್ಲವೋ ಇದು ಅತ್ಯಂತ ಗಂಭೀರ ಪರಿಸ್ಥಿತಿಯಾಗುತ್ತದೆ.

೧೯೯೦-೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಡಿ.ಬಿ. ಚಂದ್ರೇಗೌಡ.—ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಕೇವಲ ಮೂರು ತಿಂಗಳಲ್ಲಿ ಎರಡು ಬಾರಿ ರಾಜ್ಯಪಾಲರ ಭಾಷಣವನ್ನು ನಡೆಸಿದೆ. ಇದು ಮೊದಲನೆಯ ಆಯವ್ಯಯ. ನಾನು ಹಿಂದಿನ ಸಾರಿ ಬಳಸಿದ ಭಾಷೆಯನ್ನೇ ಇಲ್ಲಿ ಬಳಸುವುದಕ್ಕೆ ನನಗೆ ಇಚ್ಛೆ ಇಲ್ಲ ಇದು ಒಂದು ಅಪೂರ್ಣವಾದಂಥ ಮಂತ್ರಿ ಮಂಡಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಕೇಂದ್ರದಲ್ಲಿ ಇದ್ದ ಹಾಗೆ.

ಶ್ರೀ ಡಿ.ಬಿ. ಚಂದ್ರೇಗೌಡ.—ನಾನು ಚರ್ಚೆ ಮಾಡುತ್ತಿರುವುದು ಈ ಮಂತ್ರಿ ಮಂಡಲದ್ದು, ಕೇಂದ್ರದ್ದಲ್ಲ. ಕೇಂದ್ರದ್ದು ಬಂದಾಗ ಅದನ್ನು ಮಾತಾಡೋಣ. ಇದು ಒಂದು ಅಪೂರ್ಣವಾದಂಥ ಮಂತ್ರಿಮಂಡಲ. ಇದು ನನ್ನ ಮಾತಲ್ಲ. ಇದು ಮಾನ್ಯ ಮುಖ್ಯಮಂತ್ರಿಗಳ ಮಾತು. ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ. ಈ ಮಂತ್ರಿಮಂಡಲ ರಾಜ್ಯದ ಎಲ್ಲಾ ಜವಾಬ್ದಾರಿಯನ್ನು ಹೊರುವುದಕ್ಕೆ ಸಮರ್ಥವಾಗಿಲ್ಲ. ಇದನ್ನು ಸಾಧ್ಯವಾದಷ್ಟು ಬೇಗ ವಿಸ್ತರಣೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಆ ಪಟ್ಟಿಯಲ್ಲಿ ನೀವು ಇದ್ದೀರೋ ಇಲ್ಲವೋ ನನಗಂತೂ ಗೊತ್ತಿಲ್ಲ. ಆ ರೀತಿ ಪಟ್ಟಿಯಲ್ಲಿದ್ದರೆ ನಿಮ್ಮ ಪರವಾಗಿ ಮತ್ತೊಮ್ಮೆ ರೆಕಮೆಂಡ್ ಮಾಡುತ್ತೇನೆ, ಸಾಧ್ಯವಾದಷ್ಟು ಬೇಗ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ಬೂಟಾಸಿಂಗ್‌ಗೆ ಸೀಟ್ ಸಿಕ್ಕಿದ್ದರೆ ಪಜೀತಿ ಬೇರೇನೆ ಆಗುತ್ತಿತ್ತು. ಅವರಲ್ಲಿ ಎರಡು-ಮೂರು ಗುಂಪಾದರೂ ಆಗುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರಾಂ ಜೇಠ್ಮಲಾನಿಯನ್ನು ತಂದಾಗ ಎರಡು-ಮೂರು ಗುಂಪು ಆಗಿತ್ತೇ ?

ಶ್ರೀ ವಾಟಾಳ್ ನಾಗರಾಜ್.—ಜೇಠ್ಮಲಾನಿಯನ್ನು ತಂದು ಹೆಗಡೆ ಅವರ ಪರಿಸ್ಥಿತಿ ಇಲ್ಲಿ ಬಂತು. ನೀವು ಬೂಟಾರವರನ್ನು ತಂದಿದ್ದರೆ ಅವರ ಪರಿಸ್ಥಿತಿ ಇದೇ ರೀತಿ ಆಗುತ್ತಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಗುರುಪಾದಸ್ವಾಮಿಯನ್ನು ಕಳುಹಿಸಿದರೆ, ನೀವು ಹೇಳುವ ಪರಿಸ್ಥಿತಿಯೇನಾದರೂ ಆಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್.—ನೀವು ಮೂರು-ನಾಲ್ಕು ಗುಂಪಿನವರು ಎಷ್ಟು ಬೇಗ ಸರ್ಕಾರದ ಕಾಲನ್ನು ಎಳೆಯಬೇಕು ಎಂದು. ತವಕದಲ್ಲಿ ಕಾದಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಅಪೂರ್ಣವಾದಂಥ ಮಂತ್ರಿಮಂಡಲ ಇಡೀ ರಾಜ್ಯದ ನಾಲ್ಕು ಕೋಟಿ ಕನ್ನಡಿಗರಿಗೆ ಸಮರ್ಥವಾದಂಥ ಜನರ ಅಪೇಕ್ಷೆಯನ್ನು ಒಳಗೊಂಡಂಥ ಮತ್ತು ಯಾವ ಜನ ಇವರಿಗೆ ಮತವನ್ನು ಕೊಟ್ಟರೋ ಆ ಮತದಾರರ ಅಭೀಷ್ಟೆಯನ್ನು ನೆರವೇರಿಸತಕ್ಕಂಥ ಪೂರ್ಣವಾದಂಥ ಒಂದು ಆಯವ್ಯಯವನ್ನು ಮಂಡನೆ ಮಾಡಲಿಲ್ಲ ಎಂದು ನನ್ನ ಅನ್ನಿಸಿಕೆ. ಈ ಮಾತನ್ನು ಹೇಳುವಾಗ ಇದಕ್ಕೆ ಬೇಕಾದಂಥ ಸಾಕ್ಷಿ ಪುರಾವೆಗಳನ್ನು ಒದಗಿಸುವುದು ಕೂಡಾ ನನ್ನ ಕರ್ತವ್ಯವಾಗುತ್ತದೆ. ಆ ದೃಷ್ಟಿಯಿಂದ ಆಯವ್ಯಯದ ಮೇಲೆ ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಮಾಡುತ್ತೇನೆ. ರಾಜ್ಯಪಾಲರ ಮೊದಲ ಭಾಷಣದಲ್ಲಿ ಆಗಲೀ ಅಥವಾ ಎರಡನೇ ಭಾಷಣದಲ್ಲಿ ಆಗಲೀ ರಾಜ್ಯ ಬಯಸಿದಂಥ ಒಂದು ನೀತಿ ನಿರೂಪಣೆಯನ್ನು ಅದರಲ್ಲಿ ಮಾಡಲಿಲ್ಲ ಎನ್ನತಕ್ಕಂಥ ಆರೋಪವನ್ನು ನಾನು ಇಲ್ಲಿ

ಮಾಡಿದೆ. ಆದರೆ ಈ ಆರೋಪವನ್ನು ಮಾಡಿದಾಗಲೂ ಕೂಡಾ ನನ್ನ ಕೆಲವು ನಿರೀಕ್ಷೆಗಳು ಇದ್ದವು. ಆರ್ಥಿಕ ಅಭಿವೃದ್ಧಿಗೆ ಸಂಬಂಧಪಟ್ಟಹಾಗೆ ಏನಾದರೂ ಪ್ರಮುಖವಾದಂಥ ವಿಷಯಗಳನ್ನು ಕುರಿತು ಪ್ರಸ್ತಾಪಮಾಡಬಹುದು, ಹೊಸ ಸಲಹೆಗಳನ್ನು ಕೊಡಬಹುದು, ಹೊಸ ಹೊಸದಾದಂಥ ಕಾರ್ಯಕ್ರಮಗಳು ಬರಬಹುದು, ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿದಂಥ ಜನಕ್ಕೆ ಏನಾದರೂ ಪರಿಹಾರ ಸಿಗಬಹುದು, ರೈತರು ನೆಮ್ಮದಿಯ ನಿಟ್ಟುಸಿರನ್ನು ಬಿಡಬಹುದು ಅಥವಾ ರಾಜ್ಯದ ವಿಭಿನ್ನವಾದಂಥ ಬೇರೆ ಬೇರೆ ವರ್ಗದ ಜನಕ್ಕೆ ಏನಾದರೂ ಒಂದು ಹೊಸ ಆಸೆ ಚಿಗುರಬಹುದು ಎನ್ನತಕ್ಕಂಥ ನನ್ನ ನಂಬಿಕೆಗಳೆಲ್ಲಾ ಈ ಆಯವ್ಯಯವನ್ನು ನೋಡಿದ ಮೇಲೆ ನುಚ್ಚು ನೂರಾಗಿದೆ ಎಂದು ಹೇಳದೆ ವಿಧಿ ಇಲ್ಲ. ಸಾಂಪ್ರದಾಯಿಕವಾದಂಥ ಆದಾಯ ಮತ್ತು ವೆಚ್ಚ ಇವನ್ನು ಹಾಕಿ ಒಂದು ಸಾಂಪ್ರದಾಯಿಕವಾದಂಥ ಆಯವ್ಯಯವನ್ನು ಇಲ್ಲಿ ಮಂಡನೆ ಮಾಡಿದ್ದಾರೆ.

ನಾನು ಮೊದಲೇ ಹೇಳಿದ ಹಾಗೆ ಎರಡೂ ಭಾಷಣಗಳಲ್ಲಿ ನೀತಿ ನಿರೂಪಣೆಗಳಲ್ಲಿ ಏನು ಬರಬೇಕಾಗಿದೆ ಅದು ಬರದೇ, ಇನ್ನೂ ರಹಸ್ಯವಾಗಿ ಉಳಿದಿದೆ. ಆ ರಹಸ್ಯವನ್ನು ಯಾವಾಗ ಭೇದಿಸುತ್ತಾರೆ ಎಂದು ಶಬರಿ ಶ್ರೀರಾಮನ ಬರುವಿಕೆಯನ್ನು ಕಾಯುತ್ತಿದ್ದ ಹಾಗೆ ಕಾಯುತ್ತಿದ್ದೇವೆ. ನಾವು ಅಷ್ಟೇ ಅಲ್ಲ ರಾಜ್ಯದ ಜನತೆ ಕೂಡ ಕಾಯುತ್ತಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಶಬರಿಯು ಭಕ್ತಿಯಿಂದ ರಾಮನನ್ನು ಕಾಯುತ್ತಿದ್ದಳು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ಸಹ ಭಕ್ತಿಯಿಂದ ಕಾಯುತ್ತಿದ್ದೇವೆ. ಶಾಸನ ಸಭೆಗಳಲ್ಲಿ ಎಂದಾದರೂ ಭಕ್ತಿ ಇಲ್ಲದೆ ನಡೆದುಕೊಂಡ ಪಕ್ಷದಲ್ಲಿ ತಾವು ಹೇಳಬೇಕು. ನಮಗೆ ಏನು ಭಾವನೆ ಅಂದರೆ ತಮ್ಮಂತಹ ಅನುಭವ ಮಂತ್ರಿಗಳು ಇದ್ದರೆ ಸ್ವಲ್ಪ ಭಕ್ತಿ ಹೆಚ್ಚು ಆಗುತ್ತಿತ್ತು ಅದು ಆಗಲಿಲ್ಲ, ನಮಗೆ ನಿರಾಸೆ ಅಷ್ಟೇ. ಅಭಿವೃದ್ಧಿಯ ದಿಕ್ಕು ಹಾಗೂ ಆದ್ಯತಾನುಗುಣವಾಗಿ ಕಾರ್ಯಕ್ರಮಗಳ ರೂಪುರೇಷೆಗಳು ಸ್ಪಷ್ಟವಾಗಿ ಹೊರ ಬಂದಿಲ್ಲ. ಹಿಂದಿನ ಸರ್ಕಾರದ ಸಾಧನೆಗಳನ್ನು ಮುಚ್ಚಿಡುವುದಕ್ಕೆ ಸಾಕಷ್ಟು ಪ್ರಯತ್ನ ನಡೆದಿದೆ. ಆದರೆ ಆ ಪ್ರಯತ್ನದ ಫಲ ಕೊಟ್ಟಿಲ್ಲ. ನಿಮ್ಮಿಂದ ಸಾಧ್ಯ ಆಗಿಲ್ಲ. ಮೂಲಭೂತವಾಗಿ ಭಾಷಣದ ಪ್ರಾರಂಭದಲ್ಲಿ ಮಾನ್ಯ ರಾಜಶೇಖರಮೂರ್ತಿಯವರು ಅಂತರಾಷ್ಟ್ರೀಯ ಅಲ್ಲ, ವಿಶ್ವದ ಮಾನ್ಯತೆಯನ್ನು ಪಡೆದಂತಹ ಎರಡು ಮಾತುಗಳನ್ನು ಹೇಳಿದ್ದಾರೆ. ರಷ್ಯಾದ ಶ್ರೀಮಾನ್ ಗೋರ್ಬಚೇವ್ ಅವರು ಬಳಸಿದಂತಹ ಬದಲಾವಣೆ ಜಗತ್ತಿಗೆ ಅವರು ಕೊಟ್ಟಂತಹ ಎರಡು ಮಾತು, ಬದಲಾವಣೆಯ ಜಗತ್ತಿನ 'ಗ್ಲಾಸ್‌ನಾಸ್ಟ್' ಮತ್ತು 'ಪೆರಿಸ್ಟ್ರೋಯಿಕ'ಗಳ ಹಿನ್ನಲೆ ಎಂಬ ಪದವನ್ನು ಬಳಸಿದ್ದಾರೆ. ಆರ್ಥಿಕ ಕಾರ್ಯಕ್ರಮ, ರಾಜಕೀಯ ದೀಕ್ಷೆ ಎಂಬ ಎರಡು ಪದಗಳನ್ನು ಕೊಟ್ಟರು. ಆದರೆ ಅದನ್ನು ಹೇಳಿದಂತಹ ವಿಶ್ವದ ಮಹಾನ್ ಪುರುಷರ ಹೆಸರನ್ನು ಕೈಬಿಟ್ಟರು. ಗೋರ್ಬಚೇವ್ ಹೆಸರನ್ನು ಉದ್ಧರಿಸಿದ್ದಾರೆ. ಈ ವಿಚಾರದ ಪ್ರಸ್ತಾಪಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಅವರು ಪ್ರಸ್ತಾಪ ಮಾಡಿರುವ ಕಾರಣಕ್ಕಾಗಿ ಹೇಳಿದೆ. ಈ ಪದಗಳನ್ನು ಬಳಕೆ ಮಾಡುವಾಗ ಪೆರಿಸ್ಟ್ರೋಯಿಕ್ ಈ ವಿಕೇಂದ್ರೀಕೃತ ವ್ಯವಸ್ಥೆಗೆ ಪೂರಕವಾದಂತಹ ಆರ್ಥಿಕ ಶಕ್ತಿಯನ್ನು ತುಂಬತಕ್ಕ ಒಂದು ಕಾರ್ಯಕ್ರಮ ಈ ಕಾರ್ಯಕ್ರಮ ಜನರ ಬವಣೆಯ ಪ್ರತಿಬಿಂಬ. ಸಾಧಾರಣವಾಗಿ ಯಾವ ಜನ ಶೋಷಣೆಗೆ ಸಿಕ್ಕಿದ್ದರು ಅವರಿಗೆ ಸಾಮಾಜಿಕವಾಗಿ ನ್ಯಾಯ ದೊರೆಯತಕ್ಕ ಮತ್ತು ಅದಕ್ಕಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಿಗೊಳಿಸತಕ್ಕ ಕಾಯಕ. ಆದರೆ ಇಲ್ಲಿ ಸಮಾಜದ ದುರ್ಬಲರಿಗೆ, ನೊಂದವರಿಗೆ, ಕೆಳಗಡೆ ಇರತಕ್ಕ ಜನಕ್ಕೆ ಎಲ್ಲಿಯೂ ಒಂದು ಕಡೆ ಅವರಿಗೆ ಪರಿಹಾರ ಸೂಚನೆ ಮಾಡತಕ್ಕ ಇಲ್ಲವೇ ಅವರ ದುಃಖವನ್ನು ಉಪಶಮನ ಮಾಡತಕ್ಕ, ಕಣ್ಣೀರು ಒರೆಸತಕ್ಕ ಒಂದೇ ಒಂದು ಕಾರ್ಯಕ್ರಮ ಈ ಒಂದು ಆಯವ್ಯಯದಲ್ಲಿ ಇಲ್ಲ. ಆದರೆ ಅಭೂತಪೂರ್ವ ಮತ್ತು ಭಾರೀ ಬಹುಮತವನ್ನು ಕಾಂಗ್ರೆಸ್ ಪಕ್ಷ ಪಡೆದು ಮತ್ತೆ ಅಧಿಕಾರಕ್ಕೆ ಬಂತು ಎನ್ನುವ ಮಾತನ್ನು ಆಡಿದ್ದಾರೆ. ಇಷ್ಟು ಅಭೂತಪೂರ್ವ ಜಯವನ್ನು ಕೊಟ್ಟ ಜನಕ್ಕೆ ಕೆಲಸ ಮಾಡುವುದಕ್ಕೆ ನಿಮಗೆ ಏನು ತೊಂದರೆ ಅಥವಾ ಕೆಲಸ ಮಾಡುವುದಕ್ಕೆ ಏಕೆ ಹೋಗುವುದಿಲ್ಲ, ಇದು ಮುಖ್ಯವಾದಂತಹ ಪ್ರಶ್ನೆ. ಇದನ್ನು ಮಾತಿನಲ್ಲಿ ಹೇಳಿದ್ದೀರಿ.

> “ಜನತೆ ನಮ್ಮಲ್ಲಿರಿಸಿದ ವಿಶ್ವಾಸಕ್ಕೆ ಪಾತ್ರರಾಗುವಂಥ ರೀತಿಯಲ್ಲಿ ಸರ್ವ ಪ್ರಯತ್ನಗಳನ್ನು ಮಾಡುತ್ತೇವೆಂಬ ಆಶ್ವಾಸನೆಯನ್ನು ನಾನು ಈ ಸಂದರ್ಭದಲ್ಲಿ ಅವರಿಗೆ ನೀಡುತ್ತೇನೆ.”

ಆದರೆ ಈ ಮಾತಿನಂತೆ ನಡೆದುಕೊಳ್ಳತಕ್ಕಂಥ ಪ್ರಯತ್ನ ಆಯವ್ಯಯದಲ್ಲಿ ಪ್ರಬುದ್ಧವಾಗಿ ಹೊರ ಬಂದಿಲ್ಲ ಎನ್ನುವಂಥಾದ್ದು ನನ್ನ ಮೊದಲನೆಯ ಆಪಾದನೆ. ನಮ್ಮ ಯೋಜನಾ ಇತಿಹಾಸದ ಘಟ್ಟವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ.

> “ರಾಜ್ಯದ ಮುಂದಿದ್ದ ಬೇಡಿಕೆಗಳಿಗೆ ಹೋಲಿಸಲಾಗಿ ಸಂಪನ್ಮೂಲಗಳ ಕೊರತೆ ಬಹುವಾಗಿ ಬೆಳೆಯುತ್ತಾ ಹೋಯಿತು. ಇನ್ನಾದರೂ ಈ ಪ್ರವೃತ್ತಿಯನ್ನು ಬದಲಾಯಿಸಿ

ಜನ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯದ ಸಂಪನ್ಮೂಲಗಳನ್ನು ರೂಢಿಸ ಬೇಕಾಗಿದೆ.''

ಹೀಗೆ ನಿಮ್ಮ ಈ ಭಾಷೆಗೆ ಧ್ವನಿ ಕೊಡತಕ್ಕಂಥ ಈ ಭಾಷೆಗೆ ಅರ್ಥಕೊಡತಕ್ಕಂಥ, ಈ ಭಾಷೆಗೆ ಆರ್ಥಿಕ ಸಹಾಯವನ್ನು ಕೊಡತಕ್ಕಂಥ ಪೂರಕ ಯೋಜನೆಗಳು ಏನು ಎನ್ನುವುದನ್ನು ಇಲ್ಲಿ ಪ್ರತಿಪಾದನೆ ಮಾಡಿಲ್ಲ. ''ಜನಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯದ ಸಂಪನ್ಮೂಲಗಳನ್ನು ರೂಢಿಸ ಬೇಕಾಗಿದೆ'' ಸರ್ವಾಂಗೀಣ ಅಭಿವೃದ್ಧಿ ಅಂದಾಗ ಇದು ವ್ಯಾಪಕವಾದಂಥ ಪದ ಬಳಿಕೆ. ಈ ವ್ಯಾಪಕ ಪದ ಬಳಕೆಯೊಳಗೆ ನಿಮ್ಮ ಆಲೋಚನೆ ಪ್ರತಿಬಿಂಬ ಆಗಬೇಕು, ಪ್ರತಿಧ್ವನಿಯಾಗಬೇಕು. ಅದು ಕೈಗನ್ನಡಿಯಾಗದಿದ್ದರೆ ಆ ಮಾತಿನ ಅರ್ಥ ಕಳೆದುಕೊಳ್ಳುತ್ತದೆ. ಆದುದರಿಂದಲೇ ಇದಕ್ಕೆ ಒಂದು ಮಾತಿನಲ್ಲಿ ಹೇಳಬೇಕು ಅಂದರೆ, ಇದು ಒಂದು ಅಮೂರ್ತವಾದಂಥ ಶೈಲಿ. ಈ ಶೈಲಿಗೆ ಮುಂದಾದರೂ ರೂಪ ಕೊಡತಕ್ಕಂಥ ಪ್ರಯತ್ನವನ್ನು ಹಣಕಾಸಿನ ಸಚಿವರು ಮಾಡುತ್ತಾರೆಂದು ನನ್ನ ಒಂದು ಅನಿಸಿಕೆ ಮಾನ್ಯ ಅಧ್ಯಕ್ಷರೆ, ಅವರು ಒಂದು ಮಾತು ಹೇಳಿದ್ದಾರೆ. ''ಜನಕಲ್ಯಾಣಕ್ಕೇ ಮುಡಿಪಾದಂಥ ನಿರ್ದೇಶನವನ್ನು ಆಡಳಿತಕ್ಕೆ ನೀಡಬೇಕಾಗುತ್ತದೆ. ಜನ ಸಮುದಾಯದ ಪ್ರತಿಯೊಬ್ಬರಿಗೂ ಅಭಿವೃದ್ಧಿಯ ಫಲವು ದೊರಕುವಂತೆ ಇನ್ನೂ ಸಂಪದ್ಭರಿತ ಸಮಾಜವನ್ನು ಸಮಾನತೆಯ ನೆಲೆಗಟ್ಟಿನ ಮೇಲೆ ನಿರ್ಮಾಣ ಮಾಡಲು ನಾನು ಕಂಕಣ ಬದ್ಧನಾಗಿದ್ದೇನೆ.'' ಎಂದು ಹೇಳಿದ್ದಾರೆ. ಜನ ಸಮುದಾಯದ ಪ್ರತಿಯೊಬ್ಬರಿಗೂ ಸಮಾನತೆಯ ಮೇಲೆ ಅಭಿವೃದ್ಧಿಯ ಫಲ ದೊರಕುವಂತೆ ಮಾಡುವ ನಿರ್ಮಾಣ ಕಾರ್ಯವನ್ನು ಮಾನ್ಯ ಅರ್ಥ ಮಂತ್ರಿಗಳು ಹಮ್ಮಿಕೊಂಡಿದ್ದಾರೆ. ಭಾಷೆಯೇನೋ ಚೆನ್ನಾಗಿದೆ, ಭಾವನೆಗಳೂ ಚೆನ್ನಾಗಿದ್ದಾವೆ. ಆದರೆ ಕಾರ್ಯರೂಪದಲ್ಲಿ ಬರುವಾಗ ಕಂಕಣ ಬದ್ಧತೆ ಬರೀ ಮಾತಾಗಿ ಉಳಿಯುತ್ತದೆ. ಮತ್ತೆ ಫೋಕಲ್ ಪಾಯಿಂಟ್ ಏನೆಂದರೆ, ಒಟ್ಟಾರೆ ಶ್ರೀಸಾಮಾನ್ಯರ ಅಭಿವೃದ್ಧಿಯನ್ನೇ ಗುರಿಯಾಗಿಟ್ಟುಕೊಂಡು ಈ ಆಯವ್ಯಯವನ್ನು ಮಂಡನೆ ಮಾಡಿದ್ದೇನೆ. ಎಂದು ಹೇಳಿದ್ದಾರೆ. ನಾನು ವಿವರಗಳಿಗೆ ಹೋಗುವುದಕ್ಕೆ ಮುಂಚೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಅರ್ಥಮಂತ್ರಿಗಳು ಪ್ಯಾರಾ ೧೨ರಲ್ಲಿ ''ಶ್ರೀಸಾಮಾನ್ಯನೇ ಯೋಜನೆಯ ಕೇಂದ್ರ ಬಿಂದುವಾಗಬೇಕೆಂಬುದು ಈ ಸರ್ಕಾರದ ಉದ್ದೇಶ'' ಎಂದು ಹೇಳಿದ್ದಾರೆ.

''ಯೋಜನಾ ಗುರಿಗಳು, ಬೆಳವಣಿಗೆ ಗತಿ, ತಲಾವಾರು ವರಮಾನ, ಆಂತರಿಕ ಉತ್ಪಾದನೆ ಮುಂತಾದ ಯೋಜನಾ ಶಬ್ದ ಜಾಲದಲ್ಲಿ ನಾವು ಯಾವುದಕ್ಕೆ ಹೆಚ್ಚು ಮಹತ್ವ ನೀಡಬೇಕೋ ಅದನ್ನೇ ಮರೆಯುವ ಸಾಧ್ಯತೆ ಇದೆ. ಯಾರಿಗಾಗಿ ಈ ಯೋಜನೆಯನ್ನು ಉದ್ದೇಶಿಸಲಾಗಿದೆಯೋ, ಆ ವ್ಯಕ್ತಿಗಿಂತ ಹೆಚ್ಚಾಗಿ ಅಂಕಿಅಂಶಗಳೇ ಪ್ರಧಾನವಾಗುತ್ತವೆ. ಈ ಹಿಂದೆ ಏನೇ ನಡೆದಿರಲಿ, ಶ್ರೀಸಾಮಾನ್ಯನೇ ಯೋಜನೆಯ ಕೇಂದ್ರ ಬಿಂದುವಾಗ ಬೇಕೆಂಬುದು ಈ ಸರ್ಕಾರದ ಉದ್ದೇಶ.''

ಎನ್ನುವಂಥ ಮಾತನ್ನು ಹೇಳಿ, ಸಾಮಾಜಿಕ ನ್ಯಾಯ ಎನ್ನುವಂಥ ಮಾತನ್ನು ಹೇಳಿ ಮುಂದೆ ಅದರ ಸ್ಥಿತಿಗತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

೭ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷಕ್ಕೆ ಬಂದರೂ ತನ್ನ ಗುರಿಯನ್ನು ಮುಟ್ಟುವುದರಲ್ಲಿ ಅಸಮರ್ಥವಾಯಿತು ಎನ್ನುವ ಮಾತನ್ನು ಒಪ್ಪಿಕೊಂಡಿದ್ದೀರಿ. ಇದರ ಬಗ್ಗೆ ಸ್ವಲ್ಪಮಟ್ಟಿಗೆ ಕಾರಣವನ್ನು ಹೇಳಿದ್ದೀರಿ. ೮೩ ರಿಂದ ೮೮ರವರೆಗೆ ರಾಜ್ಯದಲ್ಲಿದ್ದಂಥ ಭೀಕರ ಬರಗಾಲ ಈ ಬರಗಾಲಕ್ಕೆ ತುತ್ತಾದಂಥ ಜನಕ್ಕೆ ಕೇಂದ್ರ ಸರ್ಕಾರದಿಂದ ಯಾವುದೇ ರೂಪದ ಅನುದಾನ ಬಾರದೇ ಇದ್ದುದು ಸುಮಾರು ೧೬೩ ಕೋಟಿ ರೂಪಾಯಿಗಳಷ್ಟು ಸಹಾಯಧನವನ್ನು ಕೊಟ್ಟು, ಇದನ್ನು ಯೋಜನೆಯ ಮುಂಗಡವಾಗಿ ಪರಿವರ್ತನೆ ಮಾಡಿ, ಅದರ ಮರುಪಾವತಿಯ ಜವಾಬ್ದಾರಿಯನ್ನು ನಮ್ಮ ಕುತ್ತಿಗೆಗೆ ಕಟ್ಟಿದ್ದಾರೆ. ಒಂದು ಕಡೆ ಭೀಕರ ಕ್ಷಾಮ, ಮತ್ತೊಂದು ಕಡೆ, ಅನುದಾನವಾಗಿ ಕೊಟ್ಟಿರುವಂಥ ಹಣವನ್ನು ತೀರಿಸತಕ್ಕ ಕೆಲಸ ಸಾಮಾಜಿಕ ನ್ಯಾಯಕ್ಕಾಗಿ ನಾನ್‌ಪ್ಲಾನ್ ಎಕ್ಸ್‌ಪೆಂಡೀಚರ್ ಹೆಚ್ಚಿದ್ದು ಹೀಗೆ ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲಿ, ಹಿಂದಿನ ಸರ್ಕಾರದ್ದು ಯಾವುದೇ ಅಪರಾಧ ಇಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಆದರೆ, ನಿಮ್ಮ ಆದ್ಯತೆಗಳಲ್ಲಿ ಮುಖ್ಯವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿಯನ್ನು ಆಯ್ದುಕೊಂಡಿದ್ದೀರಿ. ನೀರಾವರಿಗೆ ಆದ್ಯತೆ ಎನ್ನುವಾಗ ಆಶ್ಚರ್ಯದ ಸಂಗತಿ ಹೊರಬಿದ್ದುದ್ದು, ನಿಮ್ಮ ಪುಸ್ತಕದಲ್ಲಿ ನನಗೆ ಎಲ್ಲೂ ಲೆಕ್ಕ ಸಿಕ್ಕಲಿಲ್ಲ, ಕಾವೇರಿ ಜಲಾನಯನ ಪ್ರದೇಶಕ್ಕೆ ಎಷ್ಟು ಹಣ ಮೀಸಲಿಟ್ಟಿದ್ದೀರಿ ? ಎಂಬುದರ ಬಗ್ಗೆ ಈ ಪುಸ್ತಕದಲ್ಲಿ ಇಲ್ಲ. ಒಟ್ಟಾರೆ ಓದುವಾಗ ಹಿಂದಿನ ಸರ್ಕಾರ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ, ಉತ್ತರ ಕನ್ನಡ ಜಿಲ್ಲೆಯ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕಡಿಮೆ ಮಾಡಿತ್ತು ಎನ್ನುವಂಥ ಅರ್ಥ ಬರುವ ಹಾಗೆ ಹೇಳಿದ್ದೀರಿ. ಕಾವೇರಿ ಯೋಜನೆಗಳಿಗೆ ೧೯೬೩ ರಿಂದ ೮೩ರವರೆಗೆ ೩೧೦ ಕೋಟಿ ಖರ್ಚು ಮಾಡಿದ್ದರೆ, ೧೯೮೩–೮೮ನೇ

ಇಸವಿವರೆಗೆ ಸುಮಾರು ೩೨೦ ಕೋಟಿ ರೂಪಾಯಿಗಳನ್ನು ಹಿಂದಿನ ಸರ್ಕಾರ ಖರ್ಚುಮಾಡಿದೆ. ೧೯೮೯-೯೦ನೇ ಆಯುವ್ಯಯದಲ್ಲಿ ಸರಿಸುಮಾರು ೧೭೦ ಕೋಟಿ ರೂಪಾಯಿಗಳನ್ನು ಕಾವೇರಿ ಜಲಾನಯನ ಪ್ರದೇಶಗಳಿಗೆ ಮೀಸಲಿಟ್ಟಿತ್ತು. ನನ್ನ ಮಾಹಿತಿ ಪ್ರಕಾರ ೧೯೮೯ನೇ ನವೆಂಬರ್ ಕೊನೆಯಲ್ಲಿ ೫೦.೦೫ ಕೋಟಿಯಷ್ಟು ಹಣವನ್ನು ಇಡಲಾಗಿತ್ತು. ಈ ಸಾರಿ ಆಯುವ್ಯಯದಲ್ಲಿ ಈ ಭಾಗದ ಜನ ಶಿಕ್ಷೆಗೆ ಅರ್ಹರು ಎನ್ನುವಂಥ ಭಾವನೆಯಿಂದಲೋ ಏನೋ ಕಾವೇರಿ ಜಲಾನಯನಕ್ಕೆ ಇಷ್ಟು ಹಣ ಇಟ್ಟಿದ್ದೇವೆ ಎನ್ನುವಂಥ ಒಂದೇ ಒಂದು ಶಬ್ದವನ್ನು ಇದರಲ್ಲಿ ಹೇಳಿಲ್ಲ. ನಾನು ತಮ್ಮ ಕಾರ್ಯದರ್ಶಿಯವರನ್ನು ಕೂಡ ಸಂದರ್ಶನ ಮಾಡಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ, ನನಗೆ ಉತ್ತರ ಸಿಗಲಿಲ್ಲ. ನಾನು ಈ ಮಾತನ್ನು ಅಪಾದನೆಗಾಗಿ ಹೇಳುತ್ತಿಲ್ಲ. ಒಟ್ಟಾರೆ ರಾಜ್ಯದ ನೀರಾವರಿ ಪ್ರದೇಶಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಆಯುವ್ಯಯ ಮಂಡನೆ ಮಾಡುವಾಗ ಕಾವೇರಿ ಜಲಾನಯನ ಪ್ರದೇಶಕ್ಕೆ ಎಷ್ಟು ಹಣ ಇಟ್ಟಿದ್ದೀರಿ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಪ್ರತಿ ವರ್ಷವೂ ಇದನ್ನು ಪ್ರತಿಪಾದನೆ ಮಾಡಿಕೊಂಡು ಬಂದಿದ್ದಾರೆ. ಆದರೆ, ತಾವು ಮಾತ್ರ ಹೇಳಿಲ್ಲ, ಅದನ್ನು ಹೇಳಿದ್ದರೆ ಚೆನ್ನಾಗಿತ್ತು. ನೀರಾವರಿಗೆ ಭಾರಿ ಹಣವನ್ನು ಕೊಟ್ಟಿದ್ದೇವೆಂದರೆ ಯಾವುದಕ್ಕೆ ಕೊಟ್ಟಿದೇವೆ ಎನ್ನುವುದನ್ನು ಹೇಳಬೇಕು. ಒಂದು ದೃಷ್ಟಿಯಿಂದ ನಮ್ಮ ಸರ್ಕಾರ ಕೆಳಗೆ ಬಿದ್ದಿದ್ದು ನೀರಾವರಿಗೆ ೩೦೦ ಕೋಟಿ ಕೊಡಲಿಲ್ಲ ಎನ್ನುವ ಕಾರಣಕ್ಕೆ. ನೀರಾವರಿಗೆ ಹೆಚ್ಚು ಹಣ ಕೊಡಬೇಕೆನ್ನುವ ವಿಚಾರದಲ್ಲಿ ಎರಡು ಅಭಿಪ್ರಾಯಗಳು ಒಂದು ಸರ್ಕಾರ ಬಿದ್ದು ಹೋಗಿರುವಂಥ ಪ್ರಕಾರ ಹಳೆಯದೇನೂ. ಅಲ್ಲ ಇದು ನಮ್ಮ ನೆನಪಿನಲ್ಲಿ ಹಸಿರಾಗಿದೆ.

೨-೫೫ ಪಿ. ಎಂ.

ಆದರೆ, ನೀವು ಕೊಟ್ಟಿದ್ದಾದರೂ ಎಷ್ಟು? ೨೧೨.೩೩ ಕೋಟಿ ರೂಪಾಯಿಗಳು. ಶೇಕಡಾವಾರು ತೆಗೆದುಕೊಂಡರೆ ೧೮.೫೪ ಬರುತ್ತದೆ ಶ್ರೀಮಾನ್ ಎಸ್.ಆರ್.ಬೊಮ್ಮಾಯಿಯವರು ಅಂದಿನ ಮುಖ್ಯಮಂತ್ರಿಯವರು ತಮ್ಮ ಆಯುವ್ಯಯ ಮಂಡನೆ ಮಾಡಿದಾಗ ನೀರಾವರಿಗೆ ೨೧೯.೪೦ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದು ಶೇಕಡಾವಾರು ೨೦.೧೩ ಆಗುತ್ತದೆ. ಅಂದರೆ ನಮ್ಮ ಸರ್ಕಾರ ಅಥವಾ ಹಿಂದಿನ ಸರ್ಕಾರ ಕಳೆದ ಸಾಲಿಗೆ ಕೊಟ್ಟಂಥ ನೀರಾವರಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರಿಸುಮಾರು ಶೇಕಡಾ ಎರಡರಷ್ಟು ಹಣವನ್ನು ತಾವು ಕಡಿಮೆ ಮಾಡಿದ್ದೀರಿ. ದುಮಾಷ ಇದು ೧೧೪೦ ಕೋಟಿ ರೂಪಾಯಿ ರಾಜ್ಯದ ಯೋಜನಾ ವೆಚ್ಚಕೆ ಹೋಲಿಕೆ ಮಾಡಿದರೆ ಇದು ೨೦ ಬರುತ್ತದೆ. ಆದರೆ ನಾವು ಕರ್ನಾಟಕದಲ್ಲಿ ರತಕ್ಕ ೮೨೨ ಕೋಟಿ ರೂಪಾಯಿಗಳಿಗೆ ಹೋಲಿಕೆ ಮಾಡಿದರೆ ಸರಾಸರಿ ಇನ್ನೂ ಹೆಚ್ಚು ಹೋಗುತ್ತದೆ. ಆದರೆ ನೀವು ಹೇಳಿರತಕ್ಕಂಥ ನೀರಾವರಿ ಆದ್ಯತೆ ಬರೀ ಬಾಯಿ ಮಾತಿನ ಆದ್ಯತೆಯಾಗಿದೆಯೋ ಹೊರತು ಕಳೆದ ವರ್ಷಕ್ಕಿಂತಲೂ ಹೆಚ್ಚು ಕೊಟ್ಟಿಲ್ಲ ಎನ್ನುವುದಕ್ಕೆ ಇದೊಂದು ಸಾಕ್ಷಿ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ನಮ್ಮ ಆರ್ಥಿಕ ಸ್ಥಿತಿಗತಿ ಗಮನದಲ್ಲಿ ಇಟ್ಟುಕೊಂಡು ನಮ್ಮ ಬಂಡವಾಳ ಹೂಡಿಕೆ ಜಾಬಿನಲ್ಲಿ ಹೆಚ್ಚು ಮಾಡುವುದಕ್ಕೆ ನಮ್ಮಲ್ಲಿ ಸಾಮರ್ಥ್ಯ ಇಲ್ಲ, ಅದಕ್ಕಾಗಿ ಸುಮಾರು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗಳನ್ನು ೨.೦೦೧ನೇ ಇಸವಿಯೊಳಗೆ ಪೂರ್ಣಗೊಳಿಸಬೇಕು, ಎರಡೂವರೆ ಸಹಸ್ರ ಕೋಟಿ ರೂಪಾಯಿ ಬೇಕು ಇಷ್ಟು ಹಣವನ್ನು ಒದಗಿಸುವುದು ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳಿದ್ದೀರಿ. ಹಾಗೇಯೇ ಯಾವರೀತಿ ಹಣ ತರಬೇಕೆಂದು ಎನ್ನುವ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದೀರಿ. ಅದು ವಿದೇಶಗಳಿಂದ ಸಾಲ ತಂದು ಅಥವಾ ಎನ್ ಆರ್.ಐ. ಇನ್‌ವೆಸ್ಟ್‌ಮೆಂಟ್ ಯಾರು ಕೊಡುವುದು ಇದ್ದರೆ ತಂದು ಪ್ರಾಜೆಕ್ಟ್‌ಗಳನ್ನು ಪೂರ್ಣ ಮಾಡಲಿಕ್ಕೆ ಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ: ಎನ್.ಆರ್.ಐ. ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಹೊರ ದೇಶದಿಂದ ಸಾಲ ತಂದು ಮಾಡುತ್ತೀರಿ. ಇದೇ ಮಾನದಂಡ ಕಾವೇರಿ ಜಲಾಯನ ಪ್ರದೇಶಗಳಿಗೂ ಬಳಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆ ಕಾರಣ ಏನು? ಕಾವೇರಿ ಜಲಾನಯನ ಪ್ರದೇಶಗಳಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಕೊಡುತ್ತಾ ಬಂದಿದ್ದೀರಿ ಮುಖ್ಯ ಕಾರಣ ಪೊಲಿಟಿಕಲ್ ಕಂಪಲ್‌ಷನ್, ಇದರಲ್ಲಿ ಏನು ಪೊಲಿಟಿಕಲ್ ಕಂಪಲ್‌ಷನ್ ಇದೆ. ಇವು ಯೋಜನಾ ಆಯೋಗ ಕ್ಲಿಯರ್ ಮಾಡದೇ ಇರತಕ್ಕ ಪ್ರಾಜೆಕ್ಟ್‌ಗಳು ಹಾಗೆ ಯೋಜನಾ ಆಯೋಗ. ಕೇಂದ್ರ ಅನುಮತಿ ಕೊಡದೇ ಇರುವ ಕಾರಣ ನಾವು ನಮ್ಮ ಯೋಜನೆಯನ್ನು ವ್ಯಾಪ್ತಿಯ ಹೊರಗೆ ಇಟ್ಟು ಈ ಕಾವೇರಿ ಕಬಿನಿ ಜಲಾನಯನ ಪ್ರದೇಶಗಳನ್ನು ಪೂರೈಸಿಬಿಡಬೇಕು ಏತಕ್ಕೆ ತುರ್ತು ಪೂರೈಸಬೇಕು ಹಾಗೆ ಪೂರೈಸದೇ ಇದ್ದರೆ ಬಹುಶ: ಇದಕ್ಕೆ ಸಂಬಂಧಪಟ್ಟ ವ್ಯಾಜ್ಯವನ್ನು ಮುಂದೆ ಟ್ರಿಬ್ಯುನಲ್‌ಗೆ ಹಾಕಬಹುದು. ಒಮ್ಮೆ ಟ್ರಿಬ್ಯುನಲ್‌ಗೆ ಹೋದರೆ ಅಲ್ಲಿಂದ ಆಚೆಗೆ ಒಂದು ರೂಪಾಯಿ ಈ ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡುವುದು ಅಸಾಧ್ಯವಾಗುತ್ತದೆ ಇದು ಒಂದು.

ಕೇಂದ್ರ ಸರಕಾರ ಕ್ಲಿಯರ್ ಮಾಡದೇ ಇರತಕ್ಕಂಥ ಕಾವೇರಿ ಜಲಾನಯನ ಪ್ರದೇಶಗಳ ನೀರಾವರಿ ಅಭಿವೃದ್ಧಿ ಕಾರ್ಯ ಸಾಧ್ಯವಾಗದಿದ್ದರೆ ಹೊರ ದೇಶಗಳಿಂದ ಸಾಲ ತಂದು ಇದಕ್ಕೆ ಇನ್‌ವೆಸ್ಟ್ ಮಾಡುವುದಕ್ಕೆ ಕೇಂದ್ರ ಸರಕಾರ ಪರವಾನಗಿ ಕೊಡುವುದಿಲ್ಲ ಎನ್ನತಕ್ಕಂಥಾದ್ದನ್ನು ನಾವು ಸಾಧಾರಣವಾದ ತಿಳುವಳಿಕೆಯಿಂದ ಅರ್ಥ ಮಾಡಿಕೊಳ್ಳಬಹುದು. ಒಂದು ವೇಳೆ ಹಾಗೆ ಕೊಡುವುದಾದರೂ ಯಾರು ಈ ಅಂತರ ರಾಜ್ಯ ಜಲ ವಿವಾದದ ವ್ಯಾಪ್ತಿಗೆ ಬರುತ್ತಾರೆ ಎಂದರೆ ಯಾವ ರಾಜ್ಯಗಳು ಬರುತ್ತವೆ ಅವರು ಇಂತಹ ಪ್ರಯತ್ನಕ್ಕೆ ಖಂಡಿತವಾಗಿ ಪ್ರತಿರೋಧವನ್ನು ವ್ಯಕ್ತ ಮಾಡುತ್ತೇವೆ. ಇದನ್ನು ನಾವೆಲ್ಲರೂ ಗಮನದಲ್ಲಿಡಬೇಕು. ಇದು ನನ್ನ ಅನಿಸಿಕೆಯಾಗಿದೆ. ನಾವು ಈಗ ಹಮ್ಮಿಕೊಂಡಿರತಕ್ಕಂತಹ ಈ ಒಂದು ಜಲಾಯನ ಯೋಜನಾ ಪ್ರದೇಶಗಳಲ್ಲಿರತಕ್ಕಂತಹ ನೀರಾವರಿ ಕಾರ್ಯಗಳು ಏನು ಇವೆ ಇವು ನಿಮ್ಮ ಅವಧಿಯಲ್ಲಿ ಮುಗಿಯದಿದ್ದರೆ ಆ ಭಾಗದಿಂದ ಬಂದಂತಹ ನೀವು ಅಲ್ಲಿಯ ಜನಕ್ಕೆ ಮತ್ತು ಇಡೀ ರಾಜ್ಯದ ಜನಕ್ಕೆ ವಿಶೇಷವಾದಂತಹ ಉತ್ತರವನ್ನು ಕೊಡಬೇಕಾಗುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ನೀರಾವರಿಗೆ ಖರ್ಚು ಮಾಡಿದರೂ ಕೂಡ ಅಚ್ಚುಕಟ್ಟು ವ್ಯಾಪ್ತಿಗೆ ಒಳಪಟ್ಟಿರತಕ್ಕಂಥಾದ್ದು ಒಟ್ಟಾರೆ ಲೆಕ್ಕದಲ್ಲಿ ಹೇಳುವುದಾದರೆ ೨೯,೦೦೦ ಹೆಕ್ಟೇರ್‌ಗಳು ಮಾತ್ರ. ಸುಮಾರು ೧,೪೧,೦೦೦ ಹೆಕ್ಟೇರ್ ಭೂಮಿಯಲ್ಲಿ ೨೯,೦೦೦ ಹೆಕ್ಟೇರ್‌ಗಳು ಮಾತ್ರ ನೀರಾವರಿಗೆ ಒಳಪಟ್ಟಿವೆ. ಉಳಿದದ್ದನ್ನು ನೀರಾವರಿ ವ್ಯಾಪ್ತಿಗೆ ತರತಕ್ಕಂತಹ ಕಾರ್ಯವನ್ನು ನಾವು ಈ ಲೆಕ್ಕದಲ್ಲಿ ಮರೆತಿದ್ದೇವೆ. ನಾವು ಖರ್ಚು ಮಾಡುವಂತಹ ಹಣ ಇದುವರೆಗೆ ನೀರಾವರಿಯ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಕಾರ್ಯಕ್ಕೆ ಬಳಕೆಯಾಗದೆ ಇರುವ ಕಾರಣದಿಂದಾಗಿ ಇಂತಹ ಪರಿಸ್ಥಿತಿ ಉಂಟಾಗಿದೆ. ಇದರಿಂದಾಗಿ ನಮ್ಮ ಲೆಕ್ಕ ಎಷ್ಟು ಇತ್ತು ಎಷ್ಟು ಮೇಲಕ್ಕೆ ಹೋಗಬೇಕೆಂದು ಇತ್ತು ಅಷ್ಟು ಮೇಲಕ್ಕೆ ಹೋಗುವುದಕ್ಕೆ ಸಾಧ್ಯವಾಗಿಲ್ಲ. ನೀರಾವರಿಗೆ ಹೆಚ್ಚಿನ ಗಮನ ಕೊಟ್ಟಿದ್ದೇವೆ, ಅಣೆಕಟ್ಟನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದೇವೆ, ನಾಲೆ ನಿರ್ಮಾಣಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ನಾನು ಹೇಳುವುದಿಲ್ಲ, ನೀವು ಕೊಟ್ಟಿರತಕ್ಕಂತಹ ಆರ್ಥಿಕ ಸಮೀಕ್ಷೆಯಲ್ಲಿ ಈ ಮಾತನ್ನು ಹೇಳಿದ್ದೀರಿ ಅದನ್ನು ಓದುತ್ತೇನೆ. ೧೯೮೯-೯೦ ರ

> ಆರ್ಥಿಕ ಸಮೀಕ್ಷೆಯ ಪುಟ ೪೩ ರಲ್ಲಿ "ನೀರಾವರಿ ಯೋಜನೆಗಳ ಸಿಂಹಪಾಲನ್ನು ಶೇಖರಣೆಯ ಯೋಜನೆಗಳು ಮತ್ತು ಮೂಲನಾಲೆಗಳ ರಚನೆ ಮೇಲೆ ಅದರಲ್ಲಿಯೂ ಕೃಷ್ಣಾ ಮೇಲ್ದಂಡೆ ಯೋಜನೆಗೆ (ಹಂತ-೧) ನೀಡಲಾಗಿದೆ. ಈ ಕಾರಣದಿಂದ ನೀರಾವರಿ ಸಾಮರ್ಥ್ಯದ ಸೃಜನೆಯ ಪ್ರಗತಿಯಲ್ಲಿ ನೀರಾವರಿಯಿಂದ ಉಂಟಾಗುವ ಪ್ರತಿಫಲದಲ್ಲಿ ಇದು ಸಂಪೂರ್ಣವಾಗಿ ವ್ಯಕ್ತವಾಗಿಲ್ಲ"

ಎನ್ನುವಂತಹ ಮಾತನ್ನು ಹೇಳಿದ್ದೀರಿ. ಒಟ್ಟು ಲೆಕ್ಕಮಾಡುವಾಗ ಇದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದರೂ ಕೂಡ ಪ್ರತಿಫಲ ವ್ಯಕ್ತವಾಗಿಲ್ಲವಲ್ಲ ಎಂಬ ಸಂಶಯವನ್ನು ಇಟ್ಟುಕೊಳ್ಳಬಾರದೆಂದು ನಾನು ನೀರಾವರಿ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇರುವ ಕಾರಣ ಒತ್ತಿ ಹೇಳುತ್ತಿದ್ದೇನೆ. ಹಾಕಿಕೊಂಡಿರತಕ್ಕಂತಹ ನೀರಾವರಿ ಯೋಜನೆಗೆ ಮತ್ತು ೧೯೯೦-೯೧ ರಲ್ಲಿ ಪ್ರತಿಧ್ವನಿಯಾಗಿರತಕ್ಕಂತಹ ಈ ಒಂದು ಅಂಕಿ ಸಂಖ್ಯೆಗಳನ್ನು ನೋಡಿದರೆ ಶೇಕಡವಾರು ಇಲ್ಲಿ ಹೊಂದಾಣಿಕೆಯಾಗಿಲ್ಲ ಮತ್ತು ಇದಕ್ಕೆ ಕೊಟ್ಟಿರತಕ್ಕಂತಹ ಹಣ ತೀರಾ ಕಡಿಮೆ ಎನ್ನತಕ್ಕಂತಹ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಗ್ರಾಮೀಣ ಅಭಿವೃದ್ಧಿಯ ಮತ್ತೊಂದು ಆದ್ಯತೆಯ ಭಾಗ ವಿದ್ಯುಚ್ಛಕ್ತಿ. ಇವತ್ತು ಬದುಕಿನ ಎಲ್ಲಾ ಹಂದರಗಳಲ್ಲೂ ಕೂಡ ವಿದ್ಯುಚ್ಛಕ್ತಿ ಪ್ರವೇಶ ಮಾಡಿದೆ. ಎಷ್ಟು ದೂರ ಇದು ಪ್ರವೇಶ ಮಾಡಿದೆ ಎಂದು ಹೇಳಿದರೆ ವಿದ್ಯುಚ್ಛಕ್ತಿ ಎಷ್ಟು ಕಡಿಮೆಯಾಗುತ್ತದೆಯೋ ರೈತನ ಉತ್ಪಾದನಾ ಸಾಮರ್ಥ್ಯ ಕೂಡ ಅಷ್ಟೇ ಕಡಿಮೆಯಾಗುತ್ತದೆ.

ನಾವು ನೀರಾವರಿಯ ಮೇಲೆ ಮತ್ತು ವಿದ್ಯುಚ್ಛಕ್ತಿಯ ಮೇಲೆ ಹಾಕಿರತಕ್ಕ ಹಣವನ್ನು ಹೋಲಿಕೆ ಮಾಡಿ ನೋಡಿದರೆ ಪ್ರಗತಿಯ ದೃಷ್ಟಿಯಿಂದ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಲೆಕ್ಕ ಹಾಕಿದರೆ ಸೃಜಿಸಲಾದ ನೀರಾವರಿ ಬಾಬಿನಲ್ಲಿ ೮೭-೮೮ರ ಸಾಲಿನಲ್ಲಿ ೧೨.೮೭ ಲಕ್ಷ ರೂಪಾಯಿ. ೮೮-೮೯ರ ಸಾಲಿನಲ್ಲಿ ೧೨.೮೦ ಲಕ್ಷ ರೂಪಾಯಿ. ನಿರೀಕ್ಷಿಸಲಾದ ಸಾಧನೆ ೧೩.೧೬. ಇಲ್ಲಿ ನಾವು ಬಹಳ ಮುಖ್ಯವಾಗಿ ನೋಡಬೇಕಾದುದು ಅಂತರ್ಜಲ. ನಮ್ಮ ಅಂತರ್ಜಲದ ಸಾಧನೆ ೭.೭೬ ಮಾತ್ರ. ಇದಕ್ಕೆ ಮುಖ್ಯ ಕಾರಣ ವಿದ್ಯುಚ್ಛಕ್ತಿ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತು ರಾಜ್ಯದ ಅಥವಾ ದೇಶದ ಅಭಿವೃದ್ಧಿಯಾಗಬೇಕಾದರೆ ನಾವು ವಿದ್ಯುಚ್ಛಕ್ತಿಯನ್ನು ಎಷ್ಟರಮಟ್ಟಿಗೆ ಅವಲಂಬಿಸಿದ್ದೇವೆ, ಎಷ್ಟರಮಟ್ಟಿಗೆ ಹೊಂದಿಕೊಂಡಿದ್ದೇವೆ ಎಂಬುದು ಬಹಳ ಪ್ರಮುಖವಾದುದು. ತಾವು ಕೊಟ್ಟಿರತಕ್ಕ ಅಂಕಿಅಂಶಗಳಿಂದ ಈ ವಿಚಾರ ನಮಗೆ ಪ್ರತಿಬಿಂಬಿತವಾಗುತ್ತದೆ. ಅಂದಮೇಲೆ ವಿದ್ಯುಚ್ಛಕ್ತಿಯು ಎರಡನೇ ನಿಯಮ ನಮಗೆ ಬಹಳ ಮುಖ್ಯವಾದುದು. ಇದಕ್ಕೆ ನೀವು ೨೭೬ ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಶೇಕಡಾವಾರು ೨೪.೧೧

ನಾನು ಇತ್ತೀಚಿನದನ್ನು ಮಾತ್ರ ಹೇಳುತ್ತೇನೆ. ಬಹಳ ಹಿಂದಕ್ಕೆ ನಾನು ಹೋಗುವುದಿಲ್ಲ. ಕಳೆದವರ್ಷ ನಾವು ೨೭೫.೧೭ ಕೋಟಿ ಕೊಟ್ಟಿದ್ದೇವೆ. ಶೇಕಡಾವಾರು ೨೬.೪೬ ಆದಂತಾಯಿತು. ಇಲ್ಲಿಯೂ ಕೂಡ ನಿಮ್ಮದು ಶೇಕಡ ೨ರಷ್ಟು ಕಡಿಮೆ ಹಣವನ್ನು ಕೊಟ್ಟಂತಾಯಿತು. ಗ್ರಾಮೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ಎಂದರೆ ವಿದ್ಯುಚ್ಛಕ್ತಿ ಮತ್ತು ನೀರಾವರಿ. ನಾನು ವಿದ್ಯುಚ್ಛಕ್ತಿಯ ಆಳವಾದ ವಿವರಗಳಿಗೆ ಹೋಗುವುದಿಲ್ಲ. ಆದರೆ ಕರ್ನಾಟಕ ಪವರ್ ಪ್ರಾಜೆಕ್ಟ್ಸ್‌ಗೆ ಸಂಬಂಧಪಟ್ಟಂತೆ ಹೊರಡಿಸಿರತಕ್ಕ ಪುಸ್ತಕದಿಂದ ಆಯ್ದ ಕೆಲವು ಭಾಗಗಳನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

> "Energy gets 24.11% on the total outlay or the year 1990. This we consider is very low. States like Tamilnadu, Maharastra and U.P......"

ತಮಿಳ್ನಾಡಿನವರು ೪೫ಕ್ಕೆ ಏರಿದ್ದಾರೆ. ನಾವು ಇನ್ನೂ ೨೪ರಲ್ಲೇ ಇದ್ದೇವೆ. ಅಂದಮೇಲೆ ನಮ್ಮ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಹೇಗೆ ಸಾಧ್ಯವಾಗುತ್ತದೆಂಬುದನ್ನು ನಮ್ಮ ಮಾನ್ಯ ಹಣಕಾಸಿನ ಸಚಿವರು ವಿಷದವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಸಮೀಕ್ಷೆಗಳಲ್ಲಿ ಹೀಗೆ ಹೇಳಿದೆ.

> "At least I am not sure whether with the meagre allocation of 276 crores of rupees made for the power there will be much progress in the generation schemes and transmission and distribution lines......"

ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಆಫ್ ಲೈನ್ಸ್‌ಗೆ ಸಂಬಂಧಪಟ್ಟಂತೆ ಲಾಸ್‌ನಲ್ಲಿ ನಮ್ಮ ಕರ್ನಾಟಕ ರಾಜ್ಯ ಪ್ರಥಮ ಸ್ಥಾನದಲ್ಲಿದೆ ಕಾರಣವೇನು ಎನ್ನುವುದು ಗೊತ್ತಿಲ್ಲ. ಆ ಕಾರಣಕ್ಕೆ ನಾನು ಹೋಗುವುದಿಲ್ಲ. ನೀವು ಬ್ರೇಕ್ ಸಿಸ್ಟಮ್‌ನ್ನು ದಕ್ಷಿಣ ಭಾರತದಲ್ಲಿ ಬಹಳ ವ್ಯವಸ್ಥಿತವಾಗಿ ಮಾಡಬೇಕು. ಕಲ್ಪಾಕಮ್ ಪ್ರಾಜೆಕ್ಟ್ ಇದೆ, ರಾಮಗೊಂಡಮ್ ಪ್ರಾಜೆಕ್ಟ್ ಇದೆ, ನೈವೇಲಿ ಪ್ರಾಜೆಕ್ಟ್ ಇದೆ. ಈ ಮೂರು ಪ್ರಾಜೆಕ್ಟ್‌ಗಳು ಕೇಂದ್ರಸರ್ಕಾರದ ಪೂರ್ಣ ಉಸ್ತುವಾರಿ ಜವಾಬ್ದಾರಿಯಿಂದ ನಡೆಯುತಕ್ಕಂಥ ಪ್ರಾಜೆಕ್ಟ್‌ಗಳು. ಇದಕ್ಕೆ ಬ್ರೇಕ್ ಸಿಸ್ಟಮ್ ಇದೆ. ಆದರೆ ನಮಗೆ ಬರಬೇಕಾದ ಪಾಲು ಈ ಬ್ರೇಕ್‌ನಿಂದ ಎಷ್ಟು ಬಂದಿದೆ. ಅದನ್ನು ಪಡೆಯಲು ಅಷ್ಟು ಸಮರ್ಥರಾಗಿದ್ದೇವೆಯೋ ಎನ್ನುವುದನ್ನು ನೋಡಬೇಕು. ನೀವು ಈಗ ಕೈಗಾ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳುವುದಕ್ಕೆ ಪರ ಮತ್ತು ವಿರೋಧ ನಡೆಯುತ್ತಿದೆ. ಪರ ಮತ್ತು ವಿರೋಧದ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಕೈಗಾ ಪ್ರಾಜೆಕ್ಟ್ ಕರ್ನಾಟಕದಲ್ಲಿ ಆಗಬೇಕು ಎನ್ನುವ ಒಂದು ಕಾರಣವನ್ನು ಬಿಟ್ಟರೆ ಅಲ್ಲಿ ಉತ್ಪತ್ತಿಯಾಗತಕ್ಕಂಥ ಎಲ್ಲಾ ವಿದ್ಯುಚ್ಛಕ್ತಿಯನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಫೀಡ್ ಮಾಡುತ್ತಾರೆಯೋ? ನಮ್ಮ ರಾಜ್ಯದ ಪಾಲು ಎಷ್ಟು ಎನ್ನುವುದು, ಈ ಸದನಕ್ಕೆ ವಿವರಗಳನ್ನು ಕೂಡ ಕೊಡಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರಾಜ್ಯವು ಬಹಳ ವರ್ಷಗಳಿಂದ ವಿದ್ಯುಚ್ಛಕ್ತಿಯ ಕೊರತೆಯಿಂದ ನೊಂದಿದೆ. ಇದು ಎಂಟನೆಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷ. ಆದ್ದರಿಂದ ಇಲ್ಲಿ ಏನಾದರೂ ಒಂದು ಹೊಸ ನಂಬಿಕೆ, ವಿಶ್ವಾಸ ಬರತಕ್ಕಂಥ ಕಾರ್ಯವನ್ನು ನಿಮ್ಮಿಂದ ನೋಡಬೇಕಾಗಿದೆ. ಎಲ್ಲಾ ಪ್ರಯತ್ನ ಮಾಡಿ ಎಂಟನೆಯ ಪಂಚವಾರ್ಷಿಕ ಯೋಜನೆ ಮುಗಿಯುವ ಹೊತ್ತಿಗೆ ನೀವು ಎಷ್ಟು ಗುರಿಯನ್ನು ತಲುಪುತ್ತೀರಿ ಎನ್ನುವ ಚಿತ್ರವನ್ನು ಕೊಡಬೇಕು. ಪ್ರಯತ್ನಗಳು ಕುಂಠಿತವಾದ ಪಕ್ಷದಲ್ಲಿ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇದು ಪವರ್ ಕಥೆ ಒಂದು ಕಡೆ ಕಾವೇರಿಗೆ ಕಣ್ಣೀರು ಸುರಿಸಿ ಕೃಷಿ ಅಭಿವೃದ್ಧಿ ಯೋಜನೆಗಳನ್ನು ಕೃಷ್ಣಾರ್ಪಣ ಮಾಡಿ. ನಮ್ಮ ವಿದ್ಯುಚ್ಛಕ್ತಿಯನ್ನು ಎಷ್ಟರಮಟ್ಟಿಗೆ ಗಮನಿಸಬೇಕಾಗಿತ್ತೋ ಅಷ್ಟನ್ನು ಗಮನಿಸದೆ ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ, ವಿದ್ಯುಚ್ಛಕ್ತಿಗೆ ಮತ್ತು ನೀರಾವರಿಗೆ ಹೇಗೆ ಆದ್ಯತೆಯನ್ನು ಕೊಡುತ್ತೀರೆಂಬುದನ್ನು ದಯವಿಟ್ಟು ತಿಳಿಸಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ನನಗೆ ತಿಳಿದುಕೊಳ್ಳಲಾಗಲಿಲ್ಲ.

ಇನ್ನು ಎಕನಾಮಿಕ್ ಸರ್ವೆ ಇದು ನಿಮ್ಮದು ನಮ್ಮದಲ್ಲ. ರಾಜ್ಯವು ನಾಲ್ಕು ವರ್ಷಗಳ ಕಾಲ ಸತತವಾದ ಬರಗಾಲವನ್ನು ಎದುರಿಸಿ ಕೇಂದ್ರ ಸರ್ಕಾರದಿಂದ ಒಂದು ರೂಪಾಯಿ ಅನುದಾನವನ್ನು ಪಡೆಯದೆ ಆರ್ಥಿಕ ಪರಿಸ್ಥಿತಿಯನ್ನು ಕಾಯ್ದುಕೊಂಡು ಕಾಪಾಡಿಕೊಂಡು ಬಂದಿದ್ದೇವೆ. ೪.೯ರಷ್ಟು ಇದು ಅವರಿಗೆ ಗೊತ್ತಾಗುತ್ತದೆ. ನಿಮಗೆ ಗೊತ್ತಾಗದಿದ್ದರೂ, ಇದು ನಮ್ಮಿಂದ ಪಡೆದುಕೊಂಡದ್ದು. ೪.೯ ಪರ್ಸೆಂಟ್ ಎಕನಾಮಿಕ್‌ಗ್ರೋತ್. ದಯವಿಟ್ಟು ನೀವು ಓದಿ. ನಾವು ಓದಿದ್ದೇವೆ.

ಇನ್ನು ೨೦ಅಂಶಗಳ ಕಾರ್ಯಕ್ರಮದಲ್ಲಿ ನಮಗೆ ಎಂಟನೆಯ ಸ್ಥಾನ ಬಂದಿತ್ತು ಎನ್ನುವ ಮಾತನ್ನು ಹೇಳಿದೆ. ೧೯೮೬-೮೭ರಲ್ಲಿ ಕರ್ನಾಟಕ ಪ್ರಥಮಸ್ಥಾನದಲ್ಲಿತ್ತು ಎನ್ನುವುದನ್ನು ನಾವು ಮರೆಯು ವಂತಿಲ್ಲ. ಪ್ರಥಮಸ್ಥಾನ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿ ಇದ್ದಂಥ ಕಾಲದಲ್ಲಿ. ಈ ಪ್ರಥಮಸ್ಥಾನ ೧೯೮೮ಕ್ಕೆ ಕಡಿಮೆಯಾಗಿದ್ದರೆ ಅದು ನಿಮ್ಮ ಆಳ್ವಿಕೆಯೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಏಪ್ರಿಲ್ ೨೧ಕ್ಕೆ ರಾಜ್ಯಪಾಲರ ಆಡಳಿತವನ್ನು ಈ ರಾಜ್ಯಕ್ಕೆ ತಂದು ನಮ್ಮ ಕೈಯಿಂದ ನಿಮ್ಮ ಕೈಗೆ ವಹಿಸಿಕೊಂಡಮೇಲೆ ಬಂದಿರುವ ಅದರ ಫಲ ಏನಾಗಿದೆ ಎನ್ನುವುದನ್ನು ದಯವಿಟ್ಟು ನೋಡಿ. ಒಂದುಸಾವಿರದ ನಲವತ್ತು ಕೋಟಿ ರೂಪಾಯಿ ಯೋಜನೆಯ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದು ಈಗ ೮೪೦ ಕೋಟಿ ರೂಪಾಯಿಗಳಿಗೆ ಇಳಿದಿದೆ ಎಂದರೆ ಇದಕ್ಕೆ ರಾಜ್ಯಪಾಲರ ಆಳ್ವಿಕೆಯೇ ಕಾರಣವೆಂದರೆ ತಾವು ಒಪ್ಪಿಕೊಳ್ಳಬೇಕು.

ಶ್ರೀ ಜಿ. ರಾಜೂ ಗೌಡ.—ತಮ್ಮ ಕಾಲದಲ್ಲಿ ೧೫ ರೂಪಾಯಿಯ ಚೆಕ್ ಬೌನ್ಸ್ ಆಗಿತ್ತು. ಶ್ರೀ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ, ೮ನೇ ಸ್ಥಾನಕ್ಕೆ ಹೋಗಿದ್ದು.

ಶ್ರೀ ವಿನಯಕುಮಾರ್ ಸೊರಕೆ.—ನೀವು ಇದ್ದಾಗ ಓಲ್ಡ್ ಏಜ್ ಪೆನ್‌ಷನ್ ಕೂಡ ಕೊಟ್ಟಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಫೆಬ್ರವರಿ ಮಾರ್ಚಿನಲ್ಲಿ ಸರ್ಕಾರಕ್ಕೆ ಎಷ್ಟು ಹಣ ಬಂತು, ಹಾಗೂ ಏಪ್ರಿಲ್ ಮೇ ನಲ್ಲಿ ಎಷ್ಟು ಬಂತು ಎಂಬುದನ್ನು ನೋಡಿ, ಯಾವುದೇ ಸರ್ಕಾರವಾಗಲಿ, ಯಾವುದೇ ಟ್ರಜರಿಯಾಗಲಿ, ಯಾರ ಸ್ವಂತ ಆಸ್ತಿಯಲ್ಲ. ಅದು ದೇಶದ ಸ್ವತ್ತು. ಪ್ರತಿಯೊಂದು ರೂಪಾಯಿಗೂ ಈ ಸದನದಲ್ಲಿ ಲೆಕ್ಕ ಕೊಡಬೇಕಾಗಿದೆ. ನಿಮ್ಮ ಸಂಖ್ಯೆ ೧೪೬ ಇದ್ದರೆ ಲೆಕ್ಕ ತಪ್ಪಿಸಿಕೊಳ್ಳಲು ಆಗುವುದಿಲ್ಲ ಹಾಗೆ ಲೆಕ್ಕ ಕೊಡುವಾಗ ೨೨ನೇ ಡಿಸೆಂಬರ್ ೧೯೮೯ರಲ್ಲಿ ಅರ್ಥ ಸಚಿವರು ಒಂದು ಪತ್ರವನ್ನು ಈ ಸಭೆಯ ಮುಂದೆ ಇಟ್ಟರು. ಆರಂಭ ಶುಲ್ಕ ಮೈನಸ್ ೧೦ ಕೋಟಿ ಇತ್ತು. ನಮ್ಮ ದೇಶದ ಡಿಪಾಸಿಟ್ ೧೭೬ ಕೋಟಿ ಮೈನಸ್ ೧ ಕ್ಕೆ ಬಂದರೆ ಎಲ್ಲಿಂದ ಬಂತು ದುಡ್ಡು? ಈಗ ಫೆಬ್ರವರಿ ಲೆಕ್ಕ ಮೈನಸ್ ೮ ಆಗಿದ್ದು ಮಾರ್ಚಿಗೆ ಎಷ್ಟಾಗುತ್ತದೆ ಎಂಬುದನ್ನು ಹೇಳಿ, ಲೆಕ್ಕ ಆಗ ಸರಿಹೋಗುತ್ತದೆ. ಆದ್ದರಿಂದ ಚೆಕ್ ಬೌನ್ಸ್ ಆಗುವುದು ಹೊಸದೇನಲ್ಲ. ನಿಮ್ಮ ಮನೆಯಲ್ಲೂ ಒಂದು ದಿವಸ ಚೆಕ್ ಕೊಟ್ಟು ರಾತ್ರಿ ಯಾರಾದರೂ ಬಂದು ಗಂಟು ಹೊಡೆದು ಕೊಂಡು ಹೋದರೆ ಆಗ ಬೆಳಿಗ್ಗೆ ಚೆಕ್ ಕ್ಯಾಷ್ ಆಗದೆ ಇರಬಹುದು. ಆದರೆ ಇಲ್ಲಿ ಹಾಗಾಗುವುದಿಲ್ಲ. ಈಗ ಮೂರು ತಿಂಗಳಿನಿಂದ ಎಷ್ಟು ಜನರಿಗೆ ಓಲ್ಡ್ ಏಜ್ ಪೆನ್‌ಷನ್ ನಿಲ್ಲಿಸಿದ್ದೀರೆಂಬುದನ್ನು ಹೇಳಿ.

ಶ್ರೀ ಎಲ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೆ, ಅವರು ಮಾಡಿರುವುದನ್ನು ತಾವು ಸರಿಪಡಿಸಬೇಕಾಗಿದೆ. ಅದನ್ನು ಸರಿಪಡಿಸುತ್ತಿದ್ದಾರೆ.

ಶ್ರೀ ಡಿ. ಚಂದ್ರೇಗೌಡ.—ನೀವು ಏತಕ್ಕೆ ಆ ಕ್ರೆಡಿಟ್ ತೆಗೆದುಕೊಳ್ಳುತ್ತೀರಿ. ಸುದೈವದಿಂದ ಇಲ್ಲಿ ಕುಳಿತಿದ್ದೀರಿ, ಕುಳಿತುಕೊಳ್ಳಿ. ಇದು ನಿರಂತರವಾದ ಕ್ರಿಯೆ.

ಶ್ರೀ ಟಿ. ಎಂ. ಮಂಜುನಾಥ್ ನಾವು ಏನಾದರೂ ಸಲಹೆಕೊಡುತ್ತೀರೆಂದು ನಾವು ಗಂಭೀರವಾಗಿ ಕುಳಿತುಕೊಂಡಿದ್ದೇವೆ. ನೀವು ಕೇಂದ್ರದಲ್ಲಿ ಅಧಿಕಾರದಲ್ಲಿರತಕ್ಕವರು.

ಶ್ರೀ ಡಿ. ಬಿ. ಚಂದ್ರೇಗೌಡ.—ಕೇಂದ್ರ ಸರ್ಕಾರದಲ್ಲಿ ತಮ್ಮ ಸರ್ಕಾರ ಇದೆ ಎಂಬ ತಿಳುವಳಿಕೆ ನಿಮಗೆ ಈಗ ಬಂದಿದೆ. ಎರಡು ವರ್ಷದ ಹಿಂದೆ ಇದು ಬಂದಿದ್ದರೆ ನಮ್ಮ ರಾಜ್ಯ ಸುಭಿಕ್ಷೆಯಾಗುತ್ತಿತ್ತು.

ಶ್ರೀ. ಟಿ. ಎಂ. ಮಂಜುನಾಥ್.—ಒಂದು ಸಣ್ಣ ರಾಜ್ಯದ ಆಡಳಿತವನ್ನು ನಡೆಸಲು ನಾಲ್ಕು ವರ್ಷಗಳವರೆಗೆ ಅಧಿಕಾರ ಕೊಟ್ಟರೆ. ಅದನ್ನು ಮಾಡುವುದಕ್ಕೆ ಬೊಮ್ಮಡ ಹೊಡೆದುಕೊಂಡರು. ಈಗ ಮೂರು ತಿಂಗಳಿಗೆ ಪುನಃ ಪಜೀತಿ ಶುರುವಾಗಿದೆ. ಮೂರು ತಿಂಗಳಿಗೆ ಕಿತ್ತಾಡುತ್ತಿದ್ದೀರಿ, ಇನ್ನು ಆರು ತಿಂಗಳಿಗೆ ಏನು ಮಾಡುತ್ತೀರೋ ನೋಡೋಣ.

ಶ್ರೀ ಡಿ. ಬಿ. ಚಂದ್ರೇಗೌಡ.—ಯಾವುದೋ ಮಗು ಚಿಕ್ಕ ವಯಸ್ಸಿನಲ್ಲಿ ಗೊಣ್ಣೆ ಸುರಿಸಿದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ. I qoute ;

"The growth in the State's economy during 1988–89 has been much better than expected. As per the latest available estimates, the overall growth during the 7th Plan works out to 4.9%"

ಬರಗಾಲದಂತಹ ವೇಳೆಯಲ್ಲಿ ಈ ಸಾಧನೆ ಸಮಾಧಾನಕರ ಅಲ್ಲವೋ. ಬರಗಾಲದಿಂದ ಎಷ್ಟು ನಷ್ಟವಾಗಿದೆ ಎಂಬ ಒಂದು ಅಂದಾಜನ್ನು ಸರ್ಕಾರ ಹೊರಡಿಸಿರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ೩ನೇ ಪಂಚವಾರ್ಷಿಕ ಯೋಜನೆಯ ಈ ಪುಸ್ತಕದಲ್ಲಿ ಏನು ಹೇಳುತ್ತಾರೆಂದರೆ ಮೂರು ವರ್ಷಗಳ ತೀವ್ರ ಬರಗಾಲದಿಂದ ಒಟ್ಟಾರೆ ಉಂಟಾದ ನಷ್ಟ ಈ ರಾಜ್ಯಕ್ಕೆ ಎಷ್ಟಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಚೆಕ್ ಬೌನ್ಸ್ ಆಯಿತು ಅನ್ನಬೇಡಿ, ನಷ್ಟ ಎಷ್ಟಾಯಿತು ಎಂಬುದನ್ನು ತಿಳಿದುಕೊಳ್ಳಿ. ಸರ್ಕಾರದ ಒಂದು ಅಂದಾಜಿನ ಪ್ರಕಾರ ೧೯೬೫ ರಿಂದ ೧೯೬೭ರ ಅವಧಿಯಲ್ಲಿ ಕೃಷಿ ಉತ್ಪಾದನೆಯಲ್ಲಿ ಆದಂತಹ ನಷ್ಟ ೧೧೯೬ ಕೋಟಿ ರೂಪಾಯಿಗಳು, ಕೈಗಾರಿಕಾ ಕ್ಷೇತ್ರದಲ್ಲಿ ೧೬.೦೫ ಕೋಟಿ ರೂಪಾಯಿಗಳು, ವಿದ್ಯುಚ್ಛಕ್ತಿ ಆದಾಯದಲ್ಲಿ ಆದ ನಷ್ಟ ೨೧೫ ಕೋಟಿ ರೂಪಾಯಿಗಳು, ತೆರಿಗೆಯಲ್ಲಿ ಆದಂತಹ ನಷ್ಟ ೨೧೩ ಕೋಟಿ ರೂಪಾಯಿಗಳು. ಈ ಎರಡು ಬಾಬಿನಿಂದ ೪೭೮ ಕೋಟಿ ರೂಪಾಯಿಗಳ ನಷ್ಟವಾಗಿದೆ. ಇಷ್ಟು ದೊಡ್ಡ ಪ್ರಮಾಣದ ನಷ್ಟವನ್ನು ಸರಿದೂಗಿಸಿಕೊಂಡು ೩ನೇ ಪಂಚವಾರ್ಷಿಕ ಯೋಜನೆಯಲ್ಲಿ ೪.೯ರಷ್ಟು ಸಾಧನೆಯಾಗಿದೆ. ಇದು ಒಂದು ಅದ್ಭುತ ಇದನ್ನು ನೀವು ಒಪ್ಪಲೇಬೇಕಾಗುತ್ತದೆ. ಗ್ರಾಮಾಭಿವೃದ್ಧಿಗೆ ನಿಮ್ಮ ಆಯವ್ಯಯದಲ್ಲಿ ಏನು ಕೊಟ್ಟಿದ್ದೀರಿ ಎಂದು ಅಂದಾಜು ಮಾಡಿದ್ದೇನೆ. ಸುಮಾರು ನೀವು ಕೊಟ್ಟಿರತಕ್ಕದ್ದು ನೀರಾವರಿ, ಕೃಷಿ ಎಲ್ಲಾ ಸೇರಿದರೆ ಶೇಕಡ ೩೫ರಷ್ಟಾಗುತ್ತದೆ. ೧೯೬೬-೬೭ರಲ್ಲಿ ೬.೭ ಕೋಟಿ ರೂಪಾಯಿನ ಬಡ್ಜೆಟ್ ಅಲೋಕೇಷನ್ ಇತ್ತು. ನೀವು ಈಗ ೮೫ ಕೋಟಿರೂಪಾಯಿ ಕೊಟ್ಟಿದ್ದೀರಿ. ಆದರೆ ಎರಡು ವರ್ಷಗಳ ಹಣದುಬ್ಬರವನ್ನು ಲೆಕ್ಕ ಹಾಕಿದರೆ ಏಳೂವರೆ ಪರ್ಸೆಂಟ್‌ನಂತೆ ೮೫ರಲ್ಲಿ ೨೦ ಹೋದರೆ ನೀವು ಕೊಟ್ಟಿರುವುದು ೬೫ ಕೋಟಿ ರೂಪಾಯಿ ಮಾತ್ರ.

ಒಬ್ಬ ಮಾನ್ಯ ಸದಸ್ಯರು.—ತಾವು ಈ ಸಭೆಗೆ ಆರ್ಥಿಕ ಸಮೀಕ್ಷೆಯನ್ನು ನೀಡುತ್ತಿರುವುದು ಸಂತೋಷ. ಆದರೆ ತಾವು ಏನು ಇನ್‌ಕಂ ಅಂಡ್ ಎಕ್ಸ್‌ಪೆಂಡಿಚರ್ ಮೇಲೆ ಕಂಪೇರ್ ಮಾಡಿ ಹಿಂದಿನ ಸರ್ಕಾರ ಎಷ್ಟು ಇಟ್ಟಿತ್ತು ಎಂದು ಹೇಳುತ್ತಿದ್ದೀರಿ. ಹಾಗೆಯೇ ಡೆಫಿಸಿಟ್ ಎಷ್ಟಿತ್ತು, ಈ ಸರ್ಕಾರ ಎಷ್ಟು ಡೆಫಿಸಿಟ್ ತೋರಿಸಿದೆ ಆದರ ಮೇಲೆ ಕಂಪೇರ್ ಮಾಡಿ ಸಭೆಗೆ ಬೆಳಕು ಚೆಲ್ಲಬೇಕೆಂದು ಕೋರುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅಷ್ಟು ಬೇಗ ಏತಕ್ಕೆ ತಾಳ್ಮೆ ಕಳೆದುಕೊಳ್ಳುತ್ತೀರಿ? ನಾನು ಇನ್ನೂ ಭಾಷಣ ಮುಗಿಸಿಲ್ಲ. ಸ್ವಲ್ಪ ಕಾಯಿರಿ. ಲಿಫ್ಟ್ ಇರಿಗೇಷನ್ ಬಗ್ಗೆ ತಾವು ಒಂದು ಮಾತು ಹೇಳಿದ್ದೀರಿ ಏತ ನೀರಾವರಿ ಬಗ್ಗೆ, ಪುಟ್ಟಸ್ವಾಮಿಗೌಡರು ಹೇಳಿದ ಮಾತಿಗೂ ರಾಜಶೇಖರ ಮೂರ್ತಿಯವರು ಹೇಳಿರತಕ್ಕ ಮಾತಿಗೂ ಅರ್ಥವ್ಯತ್ಯಾಸ ಗೊತ್ತಾಗಲಿಲ್ಲ. ನದಿಗಳು ಪೂರ್ವದಿಂದ ಪಶ್ಚಿಮಕ್ಕೂ, ಪಶ್ಚಿಮದಿಂದ ಪೂರ್ವಕ್ಕೂ ಹರಿಯುತ್ತವೆ ಎಂದು ಹೇಳಿದ್ದಾರೆ. ಇದು ನಮಗೆ ಯಾರಿಗೂ ತಿಳಿಯುವುದಿಲ್ಲವೆ? ನದಿಗಳು ಆ ಪ್ರಕಾರ ಹರಿಯುತಕ್ಕದ್ದು ನಿಜ. ವಿಶೇಷವಾಗಿ ಜಲೋಪಯೋಗಿಯಾಗದೆ ಇರತಕ್ಕ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಇವೆ. ಉದಾಹರಣೆಗೆ ಮಲೆನಾಡಿನಲ್ಲಿ ಸುಮಾರು ೩೨ ಇಂಥ ನದಿಗಳು ಹರಿಯುತ್ತವೆ. ಇಲ್ಲಿ ಏತ ನೀರಾವರಿ ಮಾಡಿ ಅಂಥ ಕೇಳುವ ಉದ್ದೇಶ ಇರುವುದರಿಂದ ಎರಡು ನಿಗಮಗಳನ್ನು ಮಾಡಿದ್ದೀರಿ. ಇದಕ್ಕೆ ೪೦೦ ಜನ ಇಂಜಿನಿಯರುಗಳನ್ನು ನೇಮಿಸಿದ್ದೀರಿ. ಅವರು ಏನಾದರು? ಏನು ಕೆಲಸ ಮಾಡುತ್ತಿದ್ದಾರೆ? ಅವರಿಗೆ ಎಷ್ಟು ಸಂಬಳ ಕೊಡುತ್ತಿದ್ದೀರಿ? ಈ ರೀತಿ ಎಷ್ಟು ದಿನ ಕೊಡುತ್ತೀರಿ? ಅವರಿಗೆ ಏನಾದರೂ ಕೆಲಸ ಕೊಡುತ್ತಿದ್ದೀರಾ?

೩.೨೫ ಪಿ.ಎಂ.

ಮಲೆನಾಡು ಪ್ರದೇಶದಲ್ಲಿ ಜನ ಬದುಕುವುದಕ್ಕೆ ಸಾಧ್ಯವಿದ್ದರೆ ಏತ ನೀರಾವರಿ ಒಂದೇ ಮಾರ್ಗ. ಕಾರಣ ಏನು? ಅಲ್ಲಿರತಕ್ಕ ಪ್ರದೇಶಗಳನ್ನು ಮುಳುಗಿಸುತ್ತೀರಿ. ಯಾರಾದರೂ ಪ್ರೈವೇಟಾಗಿ ಏತ ನೀರಾವರಿಯನ್ನು ಮಾಡಿಕೊಳ್ಳುತ್ತೇನೆ ಎಂದರೆ ನಮ್ಮ ನೀರನ್ನು ಉಪಯೋಗಿಸಬೇಕಾದರೂ ಮಾನ್ಯ ಪುಟ್ಟಸ್ವಾಮಿ ಗೌಡರ ಅನುಮತಿ ಬೇಕು. ಅವರು ತಿರುಗಬೇಕು. ಅಕ್ಟೋಬರ್, ನವೆಂಬರ್‌ನಲ್ಲಿ ಒಂದು ನೀರು ಕೊಡಿ ನಮ್ಮ ಮಲೆನಾಡಿಗೆ ಸಾಕು. ನೀವು ಬೆಳೆಯುವ ಎರಡರಷ್ಟು ಬೆಳೆಯನ್ನು ಬೆಳೆಯುತ್ತೇವೆ. ಆದ್ದರಿಂದಲೇ ಈ ಏತ ನೀರಾವರಿಯನ್ನು ಮಾಡಿಕೊಡಿ ಎಂದು ನಾವು ಒತ್ತಾಯ ಮಾಡುತ್ತಿದ್ದೇವೆ. ದಯಮಾಡಿ ಆದರ ಬಗ್ಗೆ ಸ್ವಲ್ಪ ನೀವು ಪುಟ್ಟಸ್ವಾಮಿ ಗೌಡರು ರಾಜಶೇಖರ ಮೂರ್ತಿಗಳ ಜೊತೆ ಸಹಕರಿಸಿದರೆ ಹೊಸ ಕಾರ್ಯಕ್ರಮ ಆಗುತ್ತದೆ. ರೈತರ ಕಾರ್ಯಕ್ರಮ ಎಂದು ಹೇಳುವಾಗ ಹೊಸ ಹೆಸರಾದರೂ ಕೊಟ್ಟಿದ್ದೀರಾ? ಎಲ್ಲಾ ಹಳೆಯದೇ ಇಲ್ಲಿ ಹೇಳಿದ್ದೀರಿ. ನಿಮ್ಮದು ಎನ್ನಿಸಿಕೊಳ್ಳುವುದಕ್ಕೆ ಹೊಸ ಹೆಸರಾದರೂ ಕೊಟ್ಟಿದ್ದೀರಾ? ಆದ್ದರಿಂದ ನನ್ನ ಸಲಹೆ ಏನೆಂದರೆ ಈ ನೀರಾವರಿಗಳಿಗೆ ಹೊರಗಡೆ ದೇಶದಿಂದ ಸಾಲ ತರುತ್ತೀರಿ. ಅದನ್ನು ಬಡ್ಡಿಸಹಿತ ಮರುಪಾವತಿ

ಮಾಡುತ್ತೀರಿ. ತಮ್ಮಲ್ಲಿ short of ideas. ಈಗಿರತಕ್ಕ ವ್ಯವಸ್ಥೆಯಲ್ಲಿ ಏನಾದರೂ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಾ? ಇರಿಗೇಷನ್ ಬಾಂಡ್ಸ್ ಕೊಡುವ ಕಾರ್ಯಕ್ರಮವನ್ನು ನಿಮ್ಮ ಸರ್ಕಾರ ಮಾಡಿತ್ತು. ಇದು ನಮ್ಮ ಕಾರ್ಯಕ್ರಮವಲ್ಲ, ಇರಿಗೇಷನ್ ಬಾಂಡ್ಸ್ ಬಗ್ಗೆ ಮೊನ್ನೆ ಜನವಾಣಿ ಕಾರ್ಯಕ್ರಮವಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಆದರೆ ಅದನ್ನು ಯಾವ ರೂಪದಲ್ಲಿ ಮಾಡುತ್ತೀರಿ? ಬಾಂಡ್ಸ್ ಪಡೆದು ಬಡ್ಡಿ ಸಮೇತ ಹಣ ವಾಪಸ್ ಕೊಡುತ್ತೀರೋ ಏನು ಮಾಡುತ್ತೀರಿ? ಅದಕ್ಕಿಂತ ಸುಲಭವಾದ ಮಾರ್ಗ ನನಗೆ ತಿಳಿದಿದೆ. ಕಿಸಾನ್ ವಿಕಾಸ್ ಪತ್ರ ಎಂದು ನಿಮ್ಮ ಸರ್ಕಾರವೇ ಮಾಡಿತ್ತು. ಏನದು? ಎಕರೆಗೆ ೫೦೦ ರೂಪಾಯಿಗಳನ್ನು ರೈತರಿಂದ ವಸೂಲು ಮಾಡಿ. ಕೇಂದ್ರ ಸರ್ಕಾರ ಹಣದ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ. ನೀವು ತೆಗೆದುಕೊಳ್ಳಬೇಕಾಗಿಲ್ಲ. ಅದರಲ್ಲಿ ೧೦೦ಕ್ಕೆ ೭೫ರಷ್ಟು ಭಾಗವನ್ನು ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡಬೇಕು. ಕಿಸಾನ್ ವಿಕಾಸ್ ಪತ್ರ ಎಂದು ಕೊಡುವಂಥ ಯೋಜನೆಯಲ್ಲಿ ಈ ಸೌಲಭ್ಯ ಇದೆ. ಇದನ್ನು ವಿಚಾರ ಮಾಡಿ. ರೈತರು ಜಮಖಂಡಿಯಲ್ಲಿ ಒಂದು ಬ್ಯಾರೇಜ್ ಕಟ್ಟಿದರು. ಆರ್ಥಿಕವಾಗಿ ಆಗಲೀ ಅಥವಾ ಬೇರೆ ಯಾವುದೇ ರೀತಿಯಲ್ಲಾಗಲೀ ನಿಮ್ಮ ಸಹಾಯ ಸಹಕಾರ ಇಲ್ಲದೆ ೧೦ ಕೋಟಿ ರೂಪಾಯಿನ ಪ್ರಾಜೆಕ್ಟ್ ಕಟ್ಟಿದರು. ಕಿಸಾನ್ ವಿಕಾಸ್ ಪತ್ರ ಕೇಂದ್ರ ಸರ್ಕಾರದ ಯೋಜನೆ. ಈ ಯೋಜನೆಯಲ್ಲಿ ಎಕರೆಗೆ ೧ ಸಾವಿರ ರೂಪಾಯಿನಂತೆ ೧ ಲಕ್ಷ ಎಕರೆಗೆ ೧೦೦ ಕೋಟಿ ರೂಪಾಯಿ ಬರುತ್ತದೆ. ಅದರಲ್ಲಿ ಶೇಕಡ ೭೫ರಷ್ಟು ಹಣವನ್ನು ನಿಮಗೇ ರಾಜ್ಯ ಸರ್ಕಾರಕ್ಕೆ ಖರ್ಚು ಮಾಡುವುದಕ್ಕೆ ಕೊಡುತ್ತಾರೆ. ಮರುಪಾವತಿ ಜವಾಬ್ದಾರಿಯನ್ನು ಅವರೇ ತೆಗೆದುಕೊಳ್ಳುತ್ತಾರೆ. ಇಂಥ ಆಲೋಚನೆ ಮಾಡಿದರೆ ಏನಾದರೂ ಪರಿಹಾರ ಆದೀತು ಎಂದು ನಾನಾದರೂ ಭಾವನೆ ಮಾಡುತ್ತೇನೆ. ಇನ್ನು ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಸ್ವಲ್ಪ ನೋಡೋಣ. ಬಜೆಟ್ ಭಾಷಣವನ್ನು ನೀವು ಪ್ರಾರಂಭ ಮಾಡಿರುವುದು ಬಹಳ ವಿಚಿತ್ರವಾಗಿದೆ. ನೀವು ಗ್ಲಾಸ್‌ನಾಸ್ಟ್ ಅಂಡ್ ಪೆರಿಸ್ಟ್ರೋಯಿಕಾ ಎಂದು ಪ್ರಾರಂಭ ಮಾಡಿದ್ದೀರಿ. ತಮ್ಮ ಮಾತು ನನಗೆ ಕೆಲವು ಶಂಕೆಗಳಿಗೆ ಎಡೆಮಾಡಿಕೊಡುತ್ತದೆ. ನಿಮ್ಮ ಭಾಷಣವನ್ನೇ ಈ ಬಗ್ಗೆ ಓದುವುದು ಒಳ್ಳೆಯದು. ಸಾರ್ವಜನಿಕ ಉದ್ದಿಮೆಗಳ ಬಗ್ಗೆ ತಾವು ಮಾತನಾಡುತ್ತಾ ಕೊನೆಯಲ್ಲಿ ತಾವು ಒಂದು ಮಾತನ್ನು ಹೇಳಿದ್ದೀರಿ. ''ಅಗತ್ಯವಾದಲ್ಲಿ ಹೊರಗಿನವರನ್ನು ನೇಮಿಸಲು ಹಿಂಜರಿಯುವುದಿಲ್ಲ'' ಬಹಳ ಸಂತೋಷ. ನಿಮ್ಮ ಅಧಿಕಾರಿಗಳಿಗೆ ಯೋಗ್ಯತೆ ಇಲ್ಲದಿದ್ದರೆ ಹೊರಗಿನವರಿಗೆ ವಹಿಸಲಿ. ಅಂತಹದ್ದರಿಂದ ಅನುಕೂಲ ಆದರೆ ಸರಿ. ಮುಂದೆ ತಾವು ''ತೀರ ಹದಗೆಟ್ಟ ಕೆಲವು ಸಂದರ್ಭಗಳಲ್ಲಿ ಖಾಸಗಿಯವರಿಗೆ ವಹಿಸಿಕೊಡಬೇಕಾಗಿಯೂ ಬರಬಹುದು'' ಆರ್ಥಿಕ ಕಾರ್ಯಕ್ರಮದಲ್ಲಿ ಪ್ರೈವೆಟೈಸೇಷನ್ ಅಲ್ಲ ಅದು. ಈ ಮಾತಿನಿಂದ ನಮಗೆ ಏನು ಅರ್ಥವಾಗುತ್ತದೆ ಎಂದರೆ ಏನಾದರೂ ಒಳಗಡೆ ಒಪ್ಪಂದ ಆಗಿದೆಯೋ ಏನೋ ಎನ್ನುವ ಸಂಶಯವಾಗುತ್ತದೆ. ಈ ಸಂಶಯವನ್ನು ನಿವಾರಣೆ ಮಾಡಿ ಎಂದು ನಾನು ಹೇಳುತ್ತೇನೆ. ಇವತ್ತು ಬಂಡವಾಳಶಾಹಿಗಳು ಹೊರಗಡೆ ಕಾತರದಿಂದ ಕಾಯುತ್ತಿದ್ದಾರೆ. ಇಂತಹವರಿಗೆ ಬಹಿರಂಗ ಆಹ್ವಾನವನ್ನು ಕೊಟ್ಟಿದ್ದೀರಿ. ಈ ಮಾತನ್ನು ಆಯವ್ಯಯದಲ್ಲಿ ಹೇಳಿದ್ದುದು ಇಂತಹದ್ದನ್ನೇ ಕಾಯುತ್ತಾ ಇರುವ ಬಂಡವಾಳ ಶಾಹಿಗಳಿಗೆ ಬಹಿರಂಗ ಆಹ್ವಾನವನ್ನು ತಾವು ಕೊಟ್ಟಿದ್ದೀರಿ. ಕಾಂಗ್ರೆಸ್‌ನ ಸಮಾಜವಾದಕ್ಕೇನಾದರೂ ತಿಲಾಂಜಲಿಯನ್ನು ಕೊಡಬೇಕೆಂದು ಮಾಡಿದ್ದೀರಾ? ಅಥವಾ ಮೊದಲಿನಿಂದ ಬಂದಿರತಕ್ಕ ಸಮಾಜವಾದಕ್ಕೂ, ರಾಜೀವಗಾಂಧಿಯವರ ಸಮಾಜವಾದಕ್ಕೂ, ಕರ್ನಾಟಕದ ಕಾಂಗ್ರೆಸ್ ಸಮಾಜವಾದಕ್ಕೂ ದ್ವಂದ್ವ ಇದೆಯೇ? ಇಲ್ಲವೇ ನಿಮ್ಮ ನಿಲುವಿನಲ್ಲಿ ಏನಾದರೂ ದೋಷ ಇದೆಯೋ? ಒಟ್ಟಿನಲ್ಲಿ ಬಂಡವಾಳಶಾಹೀ ನಿಲುವು ಎನ್ನುವ ಅಭಿಪ್ರಾಯಕ್ಕೆ ನಾವು ಬರುವುದಕ್ಕೆ ಕಾರಣವಾಗುತ್ತದೆ ಭದ್ರಾವತಿ ಉಕ್ಕು ಕಾರ್ಖಾನೆಯನ್ನು ಕೇಂದ್ರದ ಸ್ಟೀಲ್ ಅಥಾರಿಟಿಗೆ ವಹಿಸುವುದಕ್ಕೆ ನಾವು ಏಕೆ ಪ್ರಯತ್ನಪಟ್ಟೆವು? ಬಂಡವಾಳವಾಹಿಗಳು ಇಲ್ಲಿಗೆ ಬರುವುದಕ್ಕೆ ಸಾಧ್ಯವಿಲ್ಲವೆಂದೇನೂ ಅಲ್ಲ. ಸಾರ್ವಜನಿಕ ಸಂಸ್ಥೆಗಳು ಖಾಸಗಿಯವರಿಗೆ ಹೋಗಬಾರದು ಎಂದು ಕೇಂದ್ರ ಸರ್ಕಾರಕ್ಕೆ ಒತ್ತಡ ತರುವುದಕ್ಕೆ ಪ್ರಯತ್ನ ಮಾಡಿದೆವು. ಇದರ ಕೀರ್ತಿಯನ್ನು ತಾವು ರಾಜೀವಗಾಂಧಿಯವರಿಗೆ ಕೊಟ್ಟಿದ್ದೀರಿ. ಕೊಡಿ ಸಂತೋಷ.

ಶ್ರೀ ಎ.ಬಿ. ಜಕನೂರ್.—ತಾವು ಸಕ್ಕರೆ ಕಾರ್ಖಾನೆಯನ್ನು ಕೋಡೇಸ್‌ನವರಿಗೆ ಕೊಡಲಿಲ್ಲವೆ?

ಶ್ರೀ ಡಿ.ಬಿ. ಚಂದ್ರೇಗೌಡ.—ಆ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ನೀವು ಆ ಫೀಲ್ಡ್‌ನಲ್ಲಿ ಇದ್ದೀರಿ. ಈಗ ನಾವು ಇಲ್ಲಿ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಮಾತನಾಡುತ್ತಿದ್ದೇವೆ. ತಾವು ಒಂದಕ್ಕೊಂದಕ್ಕೆ ಮಿಕ್ಸ್ ಮಾಡಬೇಡಿ. ನಿಮ್ಮ ಕೈಯಲ್ಲಿ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲವೆಂದರೆ ಕೇಂದ್ರ ಸರ್ಕಾರಕ್ಕೆ ವಹಿಸಿ. ಹಾಗೆ ವಹಿಸುವುದಕ್ಕೆ ಆಗುವುದಿಲ್ಲವೆಂದರೆ ದಯಮಾಡಿ ನನ್ನ ಸಲಹೆಯನ್ನು ತೆಗೆದುಕೊಳ್ಳಿ, ಈ ಬಗ್ಗೆ ಒಂದು ಸಮಿತಿಯನ್ನು ಮಾಡಿ ಅದರಲ್ಲಿ ತಜ್ಞರನ್ನು ಸದಸ್ಯರನ್ನಾಗಿ ಹಾಕಿ. ಇದಕ್ಕೆ ಅಧಿಕಾರಿಗಳನ್ನು ಹಾಕುವುದು ಬೇಡ. ಆ ಸಮಿತಿಗೆ ಸಾಧ್ಯವಾದಷ್ಟು ನಿಖರ ಟೈಮ್ ಬಾಂಡ್

ಪ್ರೋಗ್ರಾಮ್ ಹಾಕಿ ವರದಿಯನ್ನು ಕೊಡಲಿ. ಆಮೇಲೆ ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ಇಂತಹ ನಿರ್ಧಾರವನ್ನು ನೇರವಾಗಿ ತೆಗೆದುಕೊಳ್ಳುವುದರಿಂದ ಮೂಲಭೂತ ಸಿದ್ಧಾಂತಕ್ಕೆ ಕೊಡಲಿಪೆಟ್ಟು ಬೀಳುತ್ತದೆಂದು ನಾನು ಹೇಳುತ್ತೇನೆ.

ಇನ್ನೊಂದು ಮಾತು, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಹೇಳಿದ್ದಾರೆ ಬಹಳ ಸಂತೋಷ. ಇದು ತಮ್ಮದೆಂದು ಹೇಳುವುದಕ್ಕಿಂತಲೂ ಯೋಜನಾ ಆಯೋಗದ ಕೂಸು ಎಂದು ಹೇಳಿದರೆ ಸರಿ ಅನಿಸುತ್ತದೆ. ಯೋಜನಾ ಆಯೋಗದವರೇ ಈ ಕೀರ್ತಿಯನ್ನು ಅದರಲ್ಲೂ ರಾಮಕೃಷ್ಣ ಹೆಗಡೆಯವರಿಗೆ ಕೊಟ್ಟರೆ ಅಪಚಾರ ಅನಿಸಿಕೊಳ್ಳುವುದಿಲ್ಲ. ಕಾರಣ ಯೋಜನಾ ಆಯೋಗದವರೇ ಇದನ್ನು ಮಾಡಿದ್ದುದು. ಆದರೆ ಹಣ ಹೇಗೆ ಒದಗಿಸಿಕೊಳ್ಳುತ್ತೀರಿ ? ಮತ್ತು ಹಣವನ್ನು ಯಾವ್ಯಾವ ಬಾಬಿಗೆ ಖರ್ಚು ಮಾಡುತ್ತೀರಿ ಎನ್ನುವ ವಿವರ ನಮಗೆ ಬೇಕು. ಮಾಡಿದ್ದೇವೆಂದರೆ ನಮಗೆ ಸಮಾಧಾನವಾಗುವುದಿಲ್ಲ. ಈ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಬಳ್ಳಾರಿಯನ್ನು ಸೇರಿಸಬೇಕೇ ಬೇಡವೆ ಅನ್ನುವುದು ಒಂದು. ಒಂದು ಕಾಲಕ್ಕೆ ಕರ್ನಾಟಕ ಏಕೀಕರಣ ಆದ ಕಾಲದಲ್ಲಿ ಬಳ್ಳಾರಿಯನ್ನು ಆಂಧ್ರಪ್ರದೇಶದ ರಾಜಧಾನಿ ಮಾಡುತ್ತೇವೆಂದು ಕೇಳಿದರು ಹೋಗಲಿಲ್ಲ ಆ ಕನ್ನಡಿಗರು. ಇವತ್ತು ಬಳ್ಳಾರಿ ಕನ್ನಡನಾಡಿನ ಒಳಗೆ ಇರುವಾಗ, ಆಂಧ್ರದವರು ರಾಜಧಾನಿ ಮಾಡುತ್ತೇವೆಂದು ಕರೆದಾಗ ಅವರು ಹೋಗಿಲ್ಲ ಇದು ಇತಿಹಾಸ. ಬಳ್ಳಾರಿಯನ್ನು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಆ ವ್ಯಾಪ್ತಿಯೊಳಗೆ ತರಬೇಕೇ ಬಿಡಬೇಕೇ ಎನ್ನುವುದು ಇನ್ನು ತೀರ್ಮಾನವಾಗಿಲ್ಲ. ಇವತ್ತು ಬಿಜಾಪುರ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂದು ಕೇಳುತ್ತಿದ್ದಾರೆ. ಅದೇರೀತಿ ಮಲೆನಾಡು ಅಭಿವೃದ್ಧಿ ಬೋರ್ಡ್ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ. ಅಲ್ಲಿ ಏತಕ್ಕೆ ಮಾಡಬೇಕೆಂದು ಕೇಳುತ್ತಿದ್ದೇವೆಂದರೆ ಅಲ್ಲಿ ಒಂದೊಂದು ವಿಚಿತ್ರವಾದ ಸಮಸ್ಯೆಗಳು ಇರುತ್ತವೆ. ಆ ಸಮಸ್ಯೆಗಳನ್ನು ಪರಿಹಾರ ಮಾಡುವುದು ಅಷ್ಟು ಸುಲಭ ಅಲ್ಲ.

ಇವತ್ತು ನಾವು ಕಾಫಿಗೆ ಪರ್ಚೇಸ್ ಟ್ಯಾಕ್ಸ್ ಹಾಕಿದ್ದೇವೆ. ನೀವು ಹಾಕಿದ್ದಲ್ಲ, ೧೯೮೦ರಲ್ಲಿ ಹಾಕಿದ್ದೇವೆ. ಅದರ ಪರಿಣಾಮ ಏನಾಗಿದೆ ? ಸಮಸ್ಯೆಗಳು ಏತಕ್ಕೆ ವಿಭಿನ್ನವಾಗುತ್ತವೆ ಎನ್ನುವುದಕ್ಕೆ ಹೇಳುತ್ತೇನೆ. ೧೯೮೪ರಲ್ಲಿ, ೧೯೮೪-೮೫ಕ್ಕೆ ಅನ್ವಯವಾಗುವಂತೆ ಶೇಕಡ ೧೩ರಷ್ಟು ಪರ್ಚೇಸ್ ಟ್ಯಾಕ್ಸನ್ನು ಹಾಕಿದ್ದೇವೆ. ಒಂದೂವರೆ ಪರ್ಸೆಂಟ್ ಟರ್ನ್‌ಓವರ್ ಟ್ಯಾಕ್ಸ್ ಹಾಕಿದ್ದೇವೆ. ಟ್ಯಾಕ್ಸ್ ೧೪½ ಪರ್ಸೆಂಟ್ ಆಯಿತು. ೧೯೮೩-೮೪ ರಿಂದ ಇಂದಿನವರೆಗೆ ಸುಮಾರು ೧೨೧ ಕೋಟಿ ರೂಪಾಯಿ ಟ್ಯಾಕ್ಸನ್ನು ಕೊಟ್ಟಿದ್ದೇವೆ. ಇದಕ್ಕೆ ನೀವು ಖರ್ಚು ಮಾಡಿದ್ದುದು ಏನೂ ಇಲ್ಲ. ವಿಧಾನಸೌಧ ಮತ್ತು ಕಾಫಿಬೋರ್ಡ್‌ನವರು ಈ ಟ್ಯಾಕ್ಸ್ ವಸೂಲಿಗಾಗಿ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಈ ಸಾರಿ ಕಾಫಿ ಬೆಳೆ ೨ ಲಕ್ಷದ ೧೭ ಸಾವಿರ ಟನ್‌ನಿಂದ ೧ ಲಕ್ಷದ ೩೦ ಸಾವಿರ ಟನ್‌ಗೆ ಇಳಿಯಿತು. ಸರಿ ಸುಮಾರು ಮೂರನೇ ಒಂದು ಭಾಗ ಕಡಿಮೆಯಾಯಿತು. ವಿದೇಶಗಳಲ್ಲಿ ಇದನ್ನು ಮಾರಾಟ ಮಾಡುವಾಗ ಶೇಕಡ ೭೦ರಷ್ಟು ಬೆಳೆ ಕಡಿಮೆಯಾಗಿದೆ. ಕಾಫಿ ಬೆಳೆಯಿಲ್ಲ, ವಿದೇಶಗಳ ಮಾರುಕಟ್ಟೆಯಲ್ಲಿ ಬೆಲೆಯಿಲ್ಲ. ನಿಮಗೆ ಶೇಕಡ ೧೪½ ಪರ್ಸೆಂಟ್ ಟ್ಯಾಕ್ಸ್. ವಿಧಾನ ಸೌಧದಲ್ಲಿ ಕುಳಿತುಕೊಂಡು ಅಲ್ಲಿಂದ ಚೆಕ್ ಮೂಲಕ ವಸೂಲಿ ಮಾಡುತ್ತಿದ್ದಾರೆ. ಕಾಫಿ ಬೆಳೆಗಾರನ ಸ್ಥಿತಿ ಏನಿದೆ, ಡಿಮ್ಯಾಂಡ್ ಎಷ್ಟಿದೆ ? ೩೪ ಕೋಟಿ ರೂಪಾಯಿಗಳನ್ನು ಬೆಳೆಗಾರರಿಗೆ ಕೊಡಬೇಕು. ೩೪ ಕೋಟಿ ರೂಪಾಯಿಗಳನ್ನು ಅಲ್ಲಿ ಇಟ್ಟಿದ್ದಾರೆ. ಹಣವನ್ನು ರಿಲೀಸ್ ಮಾಡುತ್ತಿಲ್ಲ. ಕಾಫಿಗೆ ಕೇರಳದಲ್ಲಿ ಆರು ಪರ್ಸೆಂಟ್ ಟ್ಯಾಕ್ಸ್ ಇದೆ. ತಮಿಳುನಾಡಿನಲ್ಲಿ ಆರೂವರೆ ಪರ್ಸೆಂಟ್ ಟ್ಯಾಕ್ಸ್ ಇದೆ. ನಮ್ಮ ರಾಜ್ಯದಲ್ಲಿ ಹದಿನಾಲ್ಕೂವರೆ ಪರ್ಸೆಂಟ್ ಟ್ಯಾಕ್ಸ್ ಇದೆ. ಯಾವುದಾದರೂ ಒಂದು ರೀತಿಯಲ್ಲಿ ನೋಡೋಣ. ಇದರ ಪರಿಣಾಮ ಏನಾಗಿದೆ ಎಂದರೆ ಕಾಫಿ ಬೋರ್ಡ್‌ಗೆ ಬದಲಾಗಿ ಮಾರ್ಕೆಟ್ ಪೂಲಿಂಗ್ ಮಾಡಬೇಕು. ಕಾರಣ ಏನು ? ಹದಿನಾಲ್ಕೂವರೆ ಪರ್ಸೆಂಟ್ ಟ್ಯಾಕ್ಸ್ ತಪ್ಪಿಸಿಕೊಳ್ಳುವುದಕ್ಕೆ ಈ ಪ್ರಯತ್ನ ನಡೆಯುತ್ತಿದೆ. ನೀವು ಹಾಕತಕ್ಕ ತೆರಿಗೆಯಿಂದ ಇಡೀ ವ್ಯವಸ್ಥೆ ಯಾವರೀತಿ ಕುಸಿಯುತ್ತಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಬೇರೆ ರಾಜ್ಯಗಳಲ್ಲಿ ಏನು ಮಾಡಿದ್ದಾರೆ, ಎಷ್ಟು ಮಾಡಿದ್ದಾರೆ ಅದನ್ನು ಮಾಡಿ. ಅದು ಮಾಡುವುದಕ್ಕಾಗುವುದಿಲ್ಲ ಅಂದರೆ ಹೇಗೆ ? ಬ್ಯಾಂಕಿನವರು ಬೆಳಿಗ್ಗೆ ಸಾಯಂಕಾಲ ಅವರ ಮನೆ ಬಾಗಿಲಿಗೆ ಹೋಗುತ್ತಿದ್ದಾರೆ. ಇವತ್ತು ಹೈಪಾಥಿಕೇಶನ್ ಲೋನ್ಸ್ ಸಿಗುತ್ತಿಲ್ಲ, ಅಡ್ವಾನ್ಸ್‌ಗಳೂ ಇಲ್ಲ. ಈ ಸ್ಥಿತಿಯೊಳಗೆ ಇಂಡಸ್ಟ್ರಿಗಳು ಹಾಳಾಗುತ್ತಿದೆ. ಕನಿಷ್ಟ ಎರಡು ವರ್ಷ ೧೪ ಪರ್ಸೆಂಟ್ ಹಾಗೇ ಇಟ್ಟುಕೊಳ್ಳಿ. ಅವರಿಗೆ ಅನುಕೂಲವಾದಾಗ ವಸೂಲು ಮಾಡಿ. ಒಂದು ಕಡೆ ಕಾಫಿ ಕಡಿಮೆ. ಇನ್ನೊಂದು ಕಡೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆಯ ಕುಸಿತ. ಜೊತೆಗೆ ಬ್ಯಾಂಕಿಂಗ್ ಇನ್‌ಸ್ಟಿಟ್ಯೂಶನ್‌ಗಳಿಂದ ಹೊಡೆತ. ಇದೆಲ್ಲವನ್ನು ತಾಳಿಕೊಂಡು ಈ ಇಂಡಸ್ಟ್ರಿ

ಉಳಿಯುತ್ತದೆ ಎನ್ನುವ ವಿಶ್ವಾಸ ನನಗಿಲ್ಲ. ನಾನು ಭಾರಿ ಬೆಳೆಗಾರನಲ್ಲ. ಬಹಳ ಎಂದರೆ ಹತ್ತು ಎಕರೆ ಕಾಫಿ ತೋಟ ಇದೆ. ಇರುವ ಸ್ಥಿತಿಯನ್ನು ತಮಗೆ ಹೇಳಿದ್ದೇನೆ. ಇದನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕು.

ಇನ್ನು ಸಾಮಾಜಿಕ ನ್ಯಾಯದ ಬಗ್ಗೆ ಒಂದು ಮಾತು. ಬಹಳ ಚೆನ್ನಾಗಿದೆ, ಶ್ರೀ ರಂಗನಾಥ ಅವರು ನನ್ನ ಸಹಾಯಕ್ಕೆ ಬರಬೇಕು. ಈ ಶಬ್ದಗಳ ಜಾಲದಲ್ಲಿ ನಮ್ಮನ್ನು ಕೆಡವಿ ಬಡವರ ಮಕ್ಕಳಿಗೆ ಹೇಗೆ ಹೊಡೆದಿದ್ದೀರಿ ಎಂದು ಇಲ್ಲಿ ಸ್ವಲ್ಪ ಹೇಳಬೇಕು. ರಿಯಾಯಿತಿಗಳ ಮರು ಪರಿಶೀಲನೆ......... ಮಾನ್ಯ ಅಧ್ಯಕ್ಷರೇ ಬಹಳ ಮುಖ್ಯವಾದಂಥ ಸಾಮಾಜಿಕ, ಆರ್ಥಿಕ ಕಾರ್ಯಕ್ರಮ ಇವು ಬಜೆಟ್, ಯೋಜನೆಗಳು ಎಂದರೆ ಕಣಕ್ಕುಪುಳ್ಳೆ ಲೆಕ್ಕ ಬರೆದಹಾಗಲ್ಲ. ನಮ್ಮ ಒಟ್ಟಾರೆ ಆದಾಯದಲ್ಲಿ ಸಮಾಜದಲ್ಲಿ ನೊಂದ ಜನಕ್ಕೆ ವಿತರಣೆ ಹೇಗೆ ಮಾಡುತ್ತೇವೆ ಎಂಬುದು ಇದರ ಮೂಲ ಸಿದ್ಧಾಂತ. ನಾವು ಒಂದು ಒಳ್ಳೆಯ ಸಮಾಜವನ್ನು ಕಟ್ಟಬೇಕು ಎಂದು ಇದ್ದರೆ, ಇಲ್ಲಿ ನಾವು ಕೊಟ್ಟಿದ್ದ ಸೀರೆಪಂಚೆ ಯೋಜನೆಯನ್ನು ನಿಲ್ಲಿಸಲಾಗಿದೆ. ಈ ಸೀರೆ–ಪಂಚೆಯ ಹಿಂದೆ ಇದ್ದ ಭಾವನೆಯನ್ನು ಅರ್ಥಮಾಡಿಕೊಳ್ಳಿ. ೧೨ ರೂಪಾಯಿಗೆ ಒಂದು ಸೀರೆ, ಕುಪ್ಪಸ ಮತ್ತು ೧೪ ರೂಪಾಯಿಗೆ ಶರಟು, ಪಂಚೆ ಎಂದರೆ ಅದರ ಹಿಂದೆ ಬಹಳಷ್ಟು ದೊಡ್ಡ ಪ್ರಮಾಣದ ಆಲೋಚನೆಗಳು ಇವೆ. ಯಾರು ಈ ಸೀರೆ ಕುಪ್ಪಸಗಳನ್ನು ತಯಾರು ಮಾಡುತ್ತಿದ್ದರು? ಇದನ್ನು ತಯಾರು ಮಾಡತಕ್ಕದ್ದರ ಹಿಂದೆ ಮೂರು ಲಕ್ಷ ನೇಕಾರರ ಕುಟುಂಬಗಳು ಇವೆ. ಮೂರು ಲಕ್ಷ ನೇಕಾರರ ಕುಟುಂಬಗಳು ತಯಾರು ಮಾಡುವಂಥ ಮತ್ತು ಸಹಕಾರ ಸಂಸ್ಥೆಗಳು ತಯಾರು ಮಾಡುವಂಥ ವಸ್ತುಗಳು. ಇದನ್ನು ಯಾರೋ ಒಬ್ಬ ಇಂಡಸ್ಟ್ರಿಯಲಿಸ್ಟ್‌ನಿಂದ ತರುತ್ತಾ ಇರಲಿಲ್ಲ. ಈ ನೇಕಾರರು ತಯಾರು ಮಾಡುವಂಥ ಸೀರೆ, ಪಂಚೆಗಳನ್ನು ಜನಸಾಮಾನ್ಯರಿಗೆ ಕನಿಷ್ಟ ಬೆಲೆಯಲ್ಲಿ ಕೊಡಲಾಗುತ್ತಿತ್ತು. ಈ ಕನಿಷ್ಟ ಬೆಲೆಯಲ್ಲಿ ಕೊಡತಕ್ಕಂಥ ಸೀರೆ ವಾಪಸ್ಸು ತೆಗೆದುಕೊಂಡಿದ್ದೀರಿ ಇಲ್ಲಿ ಮೂರು ಲಕ್ಷ ನೇಕಾರರ ಕುಟುಂಬಗಳೇನು ನೇಣು ಹಾಕಿಕೊಳ್ಳಬೇಕೇ? ಸಹಕಾರಿ ಸಂಸ್ಥೆಗಳು ಏನು ತಯಾರು ಮಾಡುತ್ತಿದ್ದರು ಅವರೇನು ನೇಣು ಹಾಕಿಕೊಳ್ಳಬೇಕೇ? ಆರ್ಥಿಕವಾಗಿ ಹಿಂದುಳಿದಂಥ ಜನ, ಸಾಮಾಜಿಕ ನ್ಯಾಯಕ್ಕಾಗಿ ನಿಮ್ಮ ಮುಂದೆ ಕೈಯೊಡ್ಡಿದ ಜನರು ಇವರು. ಜನತಂತ್ರ ವ್ಯವಸ್ಥೆಯಲ್ಲಿ ಅವರಿಗೆ ನ್ಯಾಯವಾದಂಥ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕಾದಂಥ ಕರ್ತವ್ಯದ ಚ್ಯುತಿಯನ್ನು ನೀವು ಮಾಡಿದ್ದೀರಿ. ಇದಕ್ಕಾಗಿ ಏನು ಭಾರಿ ಖರ್ಚು ಮಾಡುತ್ತಿರಲಿಲ್ಲ ನಾವು. ಇನ್ನೊಂದು ಕಡೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು, ಸಮವಸ್ತ್ರ ನಾವು ಕೊಟ್ಟಿದ್ದುದರಿಂದ. ಇವತ್ತು ಕೂಡ ನಮ್ಮ ದೇಶದಲ್ಲಿ ನೂರಕ್ಕೆ ಅರವತ್ತರಷ್ಟು ಅವಿದ್ಯಾವಂತರು ಇದ್ದಾರೆ. ಬಟ್ಟೆ ಪುಸ್ತಕ ಕೊಟ್ಟ ವರ್ಷ, ನನ್ನ ಜ್ಞಾಪಕದಲ್ಲಿರುವುದು ಸರಿಯಾಗಿದ್ದರೆ, ೫೪ ಲಕ್ಷ ಮಕ್ಕಳು ಏನು ಶಾಲೆಗೆ ಬರುತ್ತಿದ್ದರು, ಮಾರನೇ ವರ್ಷ ಅವರ ಸಂಖ್ಯೆ ೭೪ ಲಕ್ಷ ಆಯಿತು. ೨೧ ಲಕ್ಷ ಮಕ್ಕಳು ಏಕೆ ಬಂದರು?

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಕ್ಕಳ ಸಂಖ್ಯೆ ಹೆಚ್ಚಾಯಿತು, ಸರಿ. ಅಧ್ಯಾಪಕರನ್ನು ಎಷ್ಟು ನೇಮಕ ಮಾಡಿದ್ದೀರಿ?

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಈ ವಿಚಾರದಲ್ಲಿ ನನ್ನ ಪರವಾಗಿದ್ದೀರಿ ಎಂದು ಕೊಂಡಿದೆ. ಈ ತರಹ ನಿಮ್ಮ ಯೋಚನಾಶಕ್ತಿ ಹಾಳಾಗಿದೆ ಎಂದು ಗೊತ್ತಿರಲಿಲ್ಲ. ನೀವು ಬಡವರ ಬಗ್ಗೆ ಕಳಕಳಿ ಇರುವವರು ಎಂದು ತಿಳಿದಿದ್ದೆ. ನಾನು ಹೇಳುತ್ತೇನೆ ಕೇಳಿ. ೨೦ ಲಕ್ಷ ಹೆಚ್ಚು ಮಕ್ಕಳು ಶಾಲೆಗೆ ಸೇರಿದರು.

ಆ ತಕ್ಷಣ ಈ ಮಕ್ಕಳು ಹುಟ್ಟಲಿಲ್ಲ. ಶಾಲೆಗೆ ಏಕೆ ಬರುತ್ತಾ ಇರಲಿಲ್ಲ ಎಂದು ಹೇಳಿದರೆ, ಅವರಿಗೆ ಹಾಕುವುದಕ್ಕೆ ಬಟ್ಟೆ ಇರಲಿಲ್ಲ, ಪುಸ್ತಕ ಕೊಂಡುಕೊಳ್ಳುವುದಕ್ಕೆ ಆಗುತ್ತಾ ಇರಲಿಲ್ಲ. ಈ ೨೦ ಲಕ್ಷ ಮಕ್ಕಳು ಹೊಸದಾಗಿ ಶಾಲೆಗೆ ಬಂದರು. ನಮ್ಮ ದೇಶದಲ್ಲಿ ಶೇಕಡ ೬೨ ರಷ್ಟು ಅವಿದ್ಯೆ ಏಕೆ ಇದೆ ಯೆಂದು ಹೇಳಿದರೆ, ಬಡತನ. ಈ ಬಡತನ ಮುಖ್ಯ ಕಾರಣವಾದರೆ, ನಾವು ಇದಕ್ಕೆ ಏನು ವ್ಯವಸ್ಥೆ ಮಾಡಬೇಕು? ಕನಿಷ್ಟ, ಪುಸ್ತಕ, ಬಟ್ಟೆ ಇವುಗಳಿಗಾಗಿ ೧೫–೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಈ ಕಾರಣಗಳಿಂದ ರಿಯಾಯಿತಿಗಳನ್ನು ಮರು ಪರಿಶೀಲನೆ ಮಾಡುವಾಗ, ಆದ್ಯತೆ ಗಳನ್ನು ಹೊಂದಿಸಿಕೊಳ್ಳುವಾಗ ನೀವು ಬರೆದಿರತಕ್ಕ ಭಾಷೆ ಏನಿದೆ, ಎಂದರೆ...

ಶ್ರೀಮತಿ ದಮಯಂತಿ ಬೋರೇಗೌಡ.— ಈ ಬಟ್ಟೆಗಳನ್ನು ನಿಮ್ಮ ಮಕ್ಕಳು ಹಾಕುವುದಕ್ಕೆ ಸಿದ್ಧರಿದ್ದಾರೆಯೇ? ಮೊದಲು ಶಾಲೆಗಳಲ್ಲಿ ಶಿಕ್ಷಕರು ಇಲ್ಲದೇ ಇರುವುದರಿಂದ ಬಟ್ಟೆ ಏಕೆ, ಪುಸ್ತಕ ಏಕೆ?

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಮೂಲಭೂತ ಅವಶ್ಯಕತೆ ಮಕ್ಕಳಿಗೆ ಏನೇನಿದೆ, ಅದನ್ನು ನೀವು ಒದಗಿಸಿದ್ದೀರಾ ?

ಶ್ರೀಮತಿ ದಮಯಂತಿ ಬೋರೇಗೌಡ.— ನೀವು ಕೊಟ್ಟ ಬಟ್ಟೆಗಳನ್ನು ಎಷ್ಟೋ ಮಕ್ಕಳು ಹಾಕಿಕೊಳ್ಳುವುದಕ್ಕೆ ಅಳುತ್ತಾರೆ. ಎಷ್ಟೋ ಮಕ್ಕಳು ಅದೇರೀತಿಯಾದ ಬಟ್ಟೆಗಳನ್ನು ಕೊಂಡು ಹಾಕಿಕೊಳ್ಳುತ್ತಿದ್ದರು. ಇದಕ್ಕೆ ಮೊದಲು ಇವತ್ತು ಶಾಲೆಗಳಲ್ಲಿ ಶಿಕ್ಷಕರ ಅವಶ್ಯಕತೆ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ''ಅಂಗೈ ಹುಣ್ಣಿಗೆ ಕನ್ನಡಿ ಏಕೆ'' ಈ ರೀತಿ ೨೦ ಲಕ್ಷ ಮಕ್ಕಳು ಜಾಸ್ತಿಯಾಗಿದ್ದರಿಂದ, ಮೂರು ಸಾವಿರ ಪ್ರೈಮರಿ ಶಾಲೆಗಳನ್ನು ತೆರೆಯಬೇಕಾಯಿತು. ಇದರಿಂದ ಸುಮಾರು ದಾವಾಶ ಒಂದು ಸಾವಿರ ಹೈಸ್ಕೂಲುಗಳನ್ನು ತೆರೆಯಬೇಕಾಯಿತು. ೫-೬ ಸಾವಿರ ಜೂನಿಯರ್ ಕಾಲೇಜುಗಳನ್ನು ತೆರೆಯಬೇಕಾಯಿತು ಮತ್ತು ಒಂದು ನೂರುಪ್ರಥಮದರ್ಜೆ ಕಾಲೇಜುಗಳನ್ನು ತೆರೆಯಲಾಯಿತು. ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಆಗಿಲ್ಲ, ನಾವು ಹಿಂದುಳಿದಿದ್ದೇವೆ ಎಂದು ಬರೀ ಭಾಷಣ ಮಾಡಿದರೆ ಆಗುವುದಿಲ್ಲ. ನಮ್ಮ ಕಾರ್ಯಕ್ರಮದಲ್ಲಿ ಇವುಗಳನ್ನು ಅಳವಡಿಸಿಕೊಳ್ಳಬೇಕು. ಸಾಮಾಜಿಕ ನ್ಯಾಯವಾದ ಕಾರ್ಯಕ್ರಮಗಳನ್ನು ತಾವು ಏಕೆ ಕಿತ್ತುಹಾಕಿದ್ದೀರಿ ? ನೀವು ಬಳಸಿರತಕ್ಕಂಥ ಭಾಷೆ, ಸಾಮಾಜಿಕ ನ್ಯಾಯವನ್ನು ಕೊಡದೆ ಆರ್ಥಿಕ ಬೆಳವಣಿಗೆ ಎಲ್ಲಿದೆ ಸಾಮಾಜಿಕ ನ್ಯಾಯ ? ಆರ್ಥಿಕ ಬೆಳವಣಿಗೆ ಯಾವರೀತಿಯಾಗುತ್ತದೆ. ನಾವು ಕೊಟ್ಟ ಕಾರ್ಯಕ್ರಮಗಳನ್ನು ಕೈಬಿಟ್ಟಿದ್ದೀರಿ. ''ರಿಯಾಯಿತಿ ದರದಲ್ಲಿ ಆಹಾರ ಧಾನ್ಯ'' ಇದನ್ನು ಮಾತ್ರ ಕಷ್ಟಪಟ್ಟು ಉಳಿಸಿಕೊಂಡಿದ್ದೀರಿ. ಈ ಕೆಲಸ ದಯವಿಟ್ಟು ತಮ್ಮಿಂದ ಆಗಬಾರದು. ನಾವು ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ಇವು ಹಿಂದಿನ ಸರ್ಕಾರ ಹಮ್ಮಿಕೊಂಡಿದಂಥ ಕಾರ್ಯಕ್ರಮಗಳು ಎಂದು ಹೇಳಿ, ಬಡವರ ಹೊಟ್ಟೆ ಮೇಲೆ ಹೊಡೆಯಬಾರದು. ''ಕಲ್ಲಪ್ಪ, ಗುಂಡಪ್ಪ ಸೇರಿ, ಮೆಣಸಪ್ಪ ಪುಡಿಯಾದ'' ಎಂಬಂತೆ, ಬಡವರು ಪುಡಿಯಾಗುತ್ತಾರೆ. ಇದಕ್ಕೆ ಅವಕಾಶ ಕೊಡಬೇಡಿ. ಇನ್ನು ನಿರುದ್ಯೋಗ. ಈ ನಿರುದ್ಯೋಗ ಜನತೆಯ ಪರಮ ವೈರಿ ಎಂದು ಪರಿಗಣಿಸುತ್ತೇವೆ ಎನ್ನುವಂಥ ಮಾತನ್ನು ಆಡಿದ್ದೀರಿ...

ಶ್ರೀ ವಿನಯಕುಮಾರ್ ಸೊರಕೆ.— ಕೇಂದ್ರದಲ್ಲಿ ರೈಲ್ವೆ ಬಜೆಟ್‌ನಲ್ಲಿ ಏನೇನು ಮಾಡಿದ್ದಾರೆ ಎಂಬ ಬಗ್ಗೆ ತಾವು ಸ್ವಲ್ಪ ಧ್ವನಿಗೂಡಿಸಿ...

ಶ್ರೀ ಡಿ. ಬಿ. ಚಂದ್ರೇಗೌಡ.— ಇಲ್ಲಿ ಮಾತನಾಡಿದರೆ ಪ್ರಯೋಜನವಿಲ್ಲ. ಕೊಂಕಣ ರೈಲ್ವೆಗೆ ೧,೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿ, ಅವರು ಕಾರ್ಯಕ್ರಮ ಹಾಕಿದ್ದಾರೆ. ಪ್ಲಾನಿಂಗ್ ಕಮಿಷನ್‌ನವರು ಈ ದೇಶಕ್ಕೆ ಒಂದು ಮಾದರಿಯನ್ನು ಕೊಟ್ಟರು. ಈ ೧,೩೦೦ ಕೋಟಿ ರೂಪಾಯಿಗಳ ಯೋಜನೆಯನ್ನು ನಾಲ್ಕು ರಾಜ್ಯಗಳು ಸೇರಿ, ಅವರದೇ ಆದಂಥ ಸಂಸ್ಥೆಯನ್ನು ಮಾಡಿಕೊಂಡು ನಿಮ್ಮ ರಾಜ್ಯಗಳಿಗೆ, ನಿಮ್ಮ ಜನಸಂಖ್ಯೆ ಆಧಾರದ ಮೇಲೆ ನೀವು ಕಾರ್ಯಕ್ರಮ ಮಾಡಿ. ಮತ್ತೆ ಹೊರಗಡೆಯಿಂದ ಯಾರ್‍ಯಾರು ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ತಯಾರು ಇದ್ದಾರೆ ಅವರಿಂದ ಹಣ ಕೂಡಿಸಿ ಐದು ವರ್ಷಗಳಲ್ಲಿ ಕೆಲಸ ಪೂರ್ತಿ ಮಾಡತಕ್ಕಂಥ ಕಾರ್ಯಕ್ರಮ ಇದಕ್ಕೆ ಪ್ಲಾನಿಂಗ್ ಕಮಿಷನ್‌ನವರು ೧೦೦-೨೦೦ ಕೋಟಿ ಸೀಡ್ ಮನಿ ಕೊಡುತ್ತಾರೆ. ಉಳಿದುದನ್ನು ಹೀಗೆ ಕ್ರೋಢೀಕರಿಸಬೇಕು. ಇದರ ಮೇಲೆ ನಿಮ್ಮ ಸರಕಾರದ ಒಂದು ಮಾತು ಇದೆಯೋ? ನಾವು ಇದನ್ನು ಸ್ವಾಗತಿಸುತ್ತೇವೆ ಎಂಬ ಒಂದು ಮಾತು ಇದೆಯೋ ? ಮಾನ್ಯ ಮುಖ್ಯ ಮಂತ್ರಿಗಳು ಫೌಂಡೇಷನ್ ಹಾಕುವುದಕ್ಕೆ ಹೋಗಿದ್ದರು. ಹೋಗಿದ್ದ ಮೇಲೆ ಏನಾಯಿತು ? ನಿಮ್ಮ ಸರಕಾರದ ಪಾಲು ಏನು ? ನಿಮ್ಮ ಸರಕಾರ ಯಾವ ರೀತಿ ಇದರ ಜೊತೆ ಸೇರುತ್ತದೆ ? ಈ ಕಾರ್ಯದಲ್ಲಿ ಮಹಾರಾಷ್ಟ್ರದವರು ನೂರಾರು ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡುವುದಕ್ಕೆ ಮುಂದೆ ಬರುತ್ತಾರೆ. ಕೇರಳದವರು ಮುಂದೆ ಬರುತ್ತಾರೆ, ಆಂಧ್ರದವರು ಮುಂದೆ ಬರುತ್ತಾರೆ. ಆದರೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳ ಒಂದೇ ಒಂದು ಮಾತೂ ಇಲ್ಲ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಆ ದಿವಸ ನಾವೂ ಹೋಗಿದ್ದೆವು. ನಿಮ್ಮ ಮಂತ್ರಿಗಳ ಭಾಷಣದಲ್ಲಿ ಈ ವಿಚಾರ ಏನೂ ಹೇಳಲಿಲ್ಲ.

(ಗೊಂದಲ)

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ).—ಅವರದ್ದು ಪೂರ್ತಿ ಮುಗಿದ ಮೇಲೆ ನೀವು ಮಾತನಾಡಿ ವಿರೋಧ ಪಕ್ಷದ ನಾಯಕರೇ, [illegible] ಉತ್ತರ ಕೊಡುತ್ತಾರೆ. ಅವರದ್ದು ಮುಗಿದ ಮೇಲೆ ನೀವು ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಸ್ವಲ್ಪ ಸದಸ್ಯರು ತಮ್ಮ ಭಾಷೆಯನ್ನು ಹತೋಟಿಯಲ್ಲಿ ಇಟ್ಟು ಕೊಳ್ಳಬೇಕು ನಾನು ಹೇಗೆ ಮಾತನಾಡ ಬೇಕೆಂಬುದನ್ನು ನಿಮ್ಮಿಂದ ಕಲಿಯುವಷ್ಟು ನಾನು ಇಲ್ಲ. ನನಗೂ ಸಾಕಷ್ಟು ಗೊತ್ತಿದೆ. ಸ್ವಲ್ಪ ಗಂಭೀರವಾಗಿ ಚರ್ಚೆ ಮಾಡೋಣ. ಈ ವಿಚಾರವನ್ನು ನಾನು ಏನೋ ಹೇಳಬೇಕೆಂದು ಹೇಳುತ್ತಿಲ್ಲ. ನಿಮಗೆ ಏನಾದರೂ ಅವಕಾಶ ಸಿಕ್ಕಿದರೆ ನೀವು ಹೇಳಿ. ಸಿಗುತ್ತದೋ ಇಲ್ಲವೋ ಅನುಮಾನ ನಾನು ಇಲ್ಲಿ ಏನು ಹೇಳುತ್ತಿದ್ದೇನೆ ಎಂದರೆ, ಇಂತಹ ಪ್ರಗತಿ ಪರವಾದ ನಾಲ್ಕು ರಾಜ್ಯಗಳಿಗೆ ಸೇರಿದಂಥ ಒಂದು ದೊಡ್ಡ ಪ್ರಾಜೆಕ್ಟ್ ಇದು. ತಾವು ಇದರಲ್ಲಿ ಕನಿಷ್ಟ ನಮ್ಮದೂ ಸಹಮತ ಇದೆ, ಇದರಲ್ಲಿ ಪಾಲುಗೊಳ್ಳುತ್ತೇವೆ ಎಂಬ ಮಾತನ್ನು ಹೇಳುತ್ತೀರಾ ? ಈ ದೇಶದಲ್ಲಿ ಬಹಳ ಚೆನ್ನಾಗಿ ರೈಲು ಬಿಡುವವರು ಇದ್ದಾರೆ, ಆದರೆ ರೈಲು ಕೊಟ್ಟವರು ಒಬ್ಬರೇ ಜಾರ್ಜ್ ಫರ್ನಾಂಡಿಸ್.

(Interruption)

SRI D. B. CHANDREGOWDA.— I do not tolerate this type of interferance. Hence I will close my speech and let them speak. ನಿಮಗೆ ಅವಕಾಶ ಸಿಕ್ಕಿದ ಮೇಲೆ ಹೇಳಿ. ಈಗ ರೈಲು ಕೊಟ್ಟಿದ್ದಾರೆ, ಅದನ್ನಾದರೂ ಉಳಿಸಿಕೊಳ್ಳಿ.

ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ.— ರೈಲು ಬಿಡಬೇಡಿ, ರೈಲು ಕೊಡಿಸುತ್ತೇವೆ ಎಂದು ನೀವು ಹೇಳುವುದಷ್ಟೆ.

ಶ್ರೀ ಪಿ. ಸಿ. ಸಿದ್ದನಗೌಡರ್.— ಪದೇ ಪದೇ ಈ ರೀತಿ ಮಧ್ಯೆ ಬರುವುದು ಸರಿಯಲ್ಲ.

ಶ್ರೀ ವಿನಯಕುಮಾರ್ ಸೊರಕೆ.— ಜಾರ್ಜ್ ಫರ್ನಾಂಡಿಸ್ ಆ ಪ್ರದೇಶದಲ್ಲಿ ಹುಟ್ಟಿದಂಥ ವ್ಯಕ್ತಿ. ಈ ಒಂದು ಕಾರ್ಯಕ್ರಮ ಮಾಡಬೇಕಾದರೆ ರಾಜ್ಯದ ದೇಣಿಗೆ ಅಪೇಕ್ಷೆ ಮಾಡಬಾರದಾಗಿತ್ತು. ಸ್ವತಃ ಕೇಂದ್ರ ಸರ್ಕಾರದಿಂದ ಹಣ ಒದಗಿಸುವಂತಹ ಕೆಲಸ ಕಾರ್ಯ ಮಾಡಬೇಕಾಗಿತ್ತು.

ಚೇರ್ಮನ್.— ದಯವಿಟ್ಟು ಮುಂದುವರಿಸಿ

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ).— ಅವರು ಮಾತನಾಡಲಿ, ಅವರದ್ದು ಮುಗಿಯಲಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಜಾರ್ಜ್ ಫರ್ನಾಂಡಿಸ್ ಮಂಗಳೂರಿನವರು ಎಂದು ಹೇಳುವುದು ಸುಲಭ. ಆದರೆ ಅವರು ಕೇಂದ್ರದ ರೈಲ್ವೆ ಮಂತ್ರಿ. ಪಾಪ ಅವರನ್ನು ಕೇವಲ ಮಂಗಳೂರಿ ನವರನ್ನಾಗಿಸಿ ಸಣ್ಣವರನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಆದರೆ ಅವರು ಸಣ್ಣವರಾಗು ವುದಿಲ್ಲ. ಏನೋ, ನನ್ನ ರಾಜ್ಯದ ಜನಕ್ಕೆ, ದಕ್ಷಿಣ ಭಾರತ ಜನಕ್ಕೆ ಒಂದು ಕೆಲಸ ಮಾಡಬೇಕು ಎಂದು ಮಾಡಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ.— ಅವರು ಮಂಗಳೂರಿನವರು ಎಂಬ ಗೌರವ ನಮಗೆ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಗೌರವ ನಮಗೂ ಇದೆ. ಬಹಳ ಸಂತೋಷ. ಆದರೆ ಅವರು ಹೇಳಿದ್ದೂ ಹಾಗಲ್ಲ.

ಇನ್ನು ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ತಾವು ಹೇಳುತ್ತಾ, ನಿರುದ್ಯೋಗ ಜನತೆಯ ಪ್ರಥಮ ವೈರಿ ಎಂದು ರಾಜ್ಯ ಸರಕಾರ ಪರಿಗಣಿಸುತ್ತದೆ ಎಂದು ಹೇಳಿದ್ದೀರಿ. ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿಗಳಾಗಿರತಕ್ಕಂಥವರ ಫಿಗರ್ಸ್ ಎಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅನೇಕರಿಗೆ ಪೂರ್ಣಾವಧಿ ಕೆಲಸ ಇಲ್ಲ ಎನ್ನುವುದು ಗೊತ್ತಿತ್ತು ಈ ಸಮಸ್ಯೆಯ ಪರಿಹಾರಕ್ಕಾಗಿ ಒಂದು ಆದ್ಯತೆಯ ಮೇಲೆ ಏನಾದರೂ ಹೊಸ ಕಾರ್ಯಕ್ರಮ ಸರಕಾರದ್ದು ಇದೆಯೋ ? ಹಾಗಿಲ್ಲದಿದ್ದರೆ ಮುಂದೆ ದಾರಿ ಏನು ? ಜವಾಹರ್ ರೋಜ್‌ಗಾರ್ ಯೋಜನೆ, ಇದು ಒಂದು ಕಾರ್ಯಕ್ರಮ. ಇದು ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ ನಿರ್ಮಾಣ ಮಾಡತಕ್ಕ ಕಾರ್ಯಕ್ರಮ. ಆದರೆ ಇಲ್ಲಿ ಬಹಳಮಟ್ಟಿಗೆ ಅನ್‌ಸ್ಕಿಲ್ಡ್ ಜನಕ್ಕೆ ಕೆಲಸ ಸಿಗುತ್ತದೆ. ಇನ್ನು ಸ್ಕಿಲ್ಡ್, ಸೆಮಿಸ್ಕಿಲ್ಡ್ ಜನ ಇದ್ದಾರೆ. ಸುಮಾರು ಹತ್ತು ಸಾವಿರ ಜನ ಎಂಜಿನಿಯರಿಂಗ್ ಪದವೀಧರರು ಇದ್ದಾರೆ ನಮ್ಮ ರಾಜ್ಯದಲ್ಲಿ.

೩–೫೫ ಪಿ.ಎಂ.

ಡಾಕ್ಟರ್ಸ್ ಇದ್ದಾರೆ. ಐ.ಐ.ಟಿ. ತರಬೇತಿ ಹೊಂದಿರತಕ್ಕಂಥ ಲಕ್ಷಾಂತರ ಜನ ಯುವಕರು ಇದ್ದಾರೆ. ಇವರಿಗೆಲ್ಲಾ ಯಾವ ಯೋಜನೆಯನ್ನು ರೂಪಿಸಿದ್ದೀರಿ ? ಹೇಗೆ ರೂಪಿಸುತ್ತೀರಿ ? ದಯಮಾಡಿ ನಮಗೆ ತಿಳಿಸಿ, ಇನ್ನು ಯೋಜನೆಯನ್ನು ರೂಪಿಸದಿದ್ದರೆ ಯಾವ ಹೊಸ ಕಾರ್ಯಕ್ರಮವನ್ನು ಹಾಕಿ ಕೊಳ್ಳಬೇಕೆಂದು ಇದ್ದೀರಿ.

ಶ್ರೀ ಎಂ. ರಾಜಶೇಖರಮೂರ್ತಿ.—ಸಲಹೆ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಏನಾದರೂ ಆಲೋಚನೆ ಮಾಡೋಣ. ಇನ್ನು ಟೂರಿಜಮ್ ಮೇಲೆ ಮಾತನಾಡುವುದಾದರೆ ಇಲ್ಲಿ ಒಂದು ಹೊಸ ಮಾತನ್ನು ಹೇಳಿದ್ದಾರೆ, ಅದೇನೆಂದರೆ ಜಪಾನ್ ದೇಶದಿಂದ ಓವರ್‌ಸೀಸ್ ಎಕನಾಮಿಕ್ ಫಂಡ್‌ನಿಂದ ನೆರವು ಪಡೆದು ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಪಬ್ಲಿಕ್ ಸೆಕ್ಟರ್ ಕೆಲಸ ಮಾಡುತ್ತಿಲ್ಲವೆಂದು ಈಗಾಗಲೇ ತಾವು ಹೇಳಿದ್ದೀರಿ. ಮತ್ತೊಂದು ಪಬ್ಲಿಕ್ ಸೆಕ್ಟರ್ ಇದಲ್ಲವೇ ? ಈ ದ್ವಂದ ಇರುವುದರಿಂದ ನಾನು ಈ ಮಾತನ್ನು ತಮ್ಮಲ್ಲಿ ಕೇಳುತ್ತಿದ್ದೇನೆ. ಸಂಪನ್ಮೂಲವನ್ನು ಗಮನದಲ್ಲಿಟ್ಟು ಸಮಾಜದಲ್ಲಿ ಸಮಾನತೆ ದೃಷ್ಟಿಯಿಂದ ಕೆಲವು ಮಾತುಗಳನ್ನು ನಾವು ಆಲೋಚನೆ ಮಾಡಬೇಕು. ಇನು ಕೊನೆಯದಾಗಿ ತೆರಿಗೆ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಯಾರ ಪರವಾಗಿ ಈ ಬಜೆಟ್ ಇದೆ. ಬಹಳ ಇಂಟ್ರೆಸ್ಟಿಂಗ್ ಆಸ್‌ಪೆಕ್ಟ್, ಮಾರಾಟ ತೆರಿಗೆಯಲ್ಲಿ ವಿನಾಯಿತಿ ಯಾರಿಗೆ ಕೊಟ್ಟಿದ್ದಾರ. ವಾರ್ಷಿಕ ವಹಿವಾಟು ೧೦ ಲಕ್ಷ ರೂಪಾಯಿಗಳಿಗೆ ಕಡಿಮೆ ಇರುವವರಿಗೆ ವಹಿವಾಟು ತರಿಗೆಯಲ್ಲಿ ವಿನಾಯಿತಿ. ಯಾರಿಗೆ ವಿನಾಯಿತಿ ಸಿಕ್ಕಿದೆ ಎಂದು ತಾವೇ ನೋಡಿ ೧೦ ಲಕ್ಷ ರೂಪಾಯಿಗಳಿಗೆ ಕಡಿಮೆ ಇರುವವರಿಗೆ ವಹಿವಾಟು ತೆರಿಗೆ ವಿನಾಯಿತಿ ಬಿಸ್ಕತ್ ಕೇಕ್ ತಯಾರು ಮಾಡುವವರಿಗೆ ೪ ಪರ್ಸೆಂಟ್ ರಿಯಾಯಿತಿ ದರದಲ್ಲಿ ವಾರ್ಷಿಕ ವಹಿವಾಟು ೫ ಲಕ್ಷಕ್ಕಿಂತ ಕಡಿಮೆ ಇರುವವರಿಗೆ ರಿಯಾಯಿತಿ. ಒಂದು ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಇದಕ್ಕೆ ಸೆಲ್ಫ್ ಅಸೆಸ್‌ಮೆಂಟ್ ಲೆಕ್ಕ ಪತ್ರ ಪರಿಶೀಲನೆ ಇಲ್ಲ. ಮತ್ತೊಂದು ಬಹಳ ಮುಖ್ಯವಾದುದು ೩ ತಿಂಗಳಿಗೆ ಒಂದು ಬಾರಿ ತೆರಿಗೆ ನಿರ್ಧಾರಣೆ ಮಾಡಿದ್ದಾರೆ. ಇದರಲ್ಲಿ ಆಗಬಹುದಾದದ್ದು ಏನು ಎಂದರೆ ೩ ತಿಂಗಳ ತನಕ ವ್ಯಾಪಾರಿಗಳ ಕೈಯಲ್ಲಿ ಹಣ ಇರುತ್ತದೆ. ಸರ್ಕಾರದ ಕೈಯಲ್ಲಿ ಹಣ ಕಡಿಮೆಯಾಗುತ್ತದೆ. ವ್ಯಾಪಾರಿಗಳಿಗೆ ಬಡ್ಡಿ ರಹಿತ ಸಾಲ ಸಿಗುತ್ತದೆ. ಹಾಗೆಯೇ ವೃತ್ತಿ ತೆರಿಗೆ ಬಗ್ಗೆ ಹೇಳುವುದಾದರೆ ಒಂದು ವರ್ಷಕ್ಕೆ ಒಂದು ಲಕ್ಷಕ್ಕಿಂತ ಕಡಿಮೆ ವಹಿವಾಟು ಮಾಡುವಂತಹ ವ್ಯಾಪಾರಿಗಳಿಗೆ ವೃತ್ತಿ ತೆರಿಗೆಯನ್ನು ಚಂಕ್ತ ಮಾಡಿದ್ದೀರಿ. ಆದೇ ಒಬ್ಬ ಜವಾನ, ಶಾಲಾ ಉಪಾಧ್ಯಾಯ ವೃತ್ತಿ ತೆರಿಗೆಯನ್ನು ಕೊಡಬೇಕಾಗಿದೆ. ಒಂದು ಲಕ್ಷಕ್ಕಿಂತ ಕಡಿಮೆ ವಾರ್ಷಿಕ ವಹಿವಾಟು ಮಾಡುವಂತಹ ವ್ಯಾಪಾರಿಗಳಿಗೆ ಇದು ವಿನಾಯಿತಿ ಸಿಗುತ್ತದೆ. ತೌಡಿಗೆ ನೀವು ರಿಯಾಯಿತಿ ಕೊಟ್ಟಿದ್ದೀರಿ. ಇದರ ಲಾಭ ಯಾರಿಗೆ ಸಿಗುತ್ತದೆ. ಈ ಲಾಭ ರೈತನಿಗೆ ಹೋಗುವುದಿಲ್ಲ, ಮಿಲ್ ಮಾಲೀಕನಿಗೆ ಹೋಗುತ್ತದೆ. ವಿನಾಯಿತಿಯು ಯಾರು ಯಾರಿಗೆ ಸಿಗುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ನಾವು ಪರಿಗಣಿಸಬೇಕು. ವರ್ಷಕ್ಕೆ ಒಂದು ಲಕ್ಷ ರೂಪಾಯಿಗಿಂತ ಕಡಿಮೆ ವಹಿವಾಟು ಇರುವವರಿಗೆ ಈ ವಿನಾಯಿತಿ ಸಿಗುತ್ತದೆ. ಅವರಿಗೆ ಎಷ್ಟೆಷು ಮಾರಾಟ ತೆರಿಗೆ ವಿನಾಯಿತಿ ? ಇವರಿಗೆ ತೆರಿಗೆಯೇ ಇಲ್ಲ, ಪ್ರವೇಶ ತೆರಿಗೆ ಇಲ್ಲ, ಇದರಿಂದ ಉದ್ಯೋಗಗಳೇನು ಹೆಚ್ಚಾಗುತ್ತಿವೆಯೇ ? ಇದರಿಂದ ವ್ಯಾಪಾರಿಗಳಿಗೆ ಅದರಲ್ಲೂ ದೊಡ್ಡ ದೊಡ್ಡ ವ್ಯಾಪಾರಿಗಳಿಗೆ ಅನುಕೂಲವಾಗುವಂಥ ಆಯವ್ಯಯ ಇದು. ಒಂದು ಲಕ್ಷ ವರಮಾನ ಇರುವವರು ಪೆಟಿ (ಚಿಕ್ಕ) ವ್ಯಾಪಾರಗಾರರಲ್ಲ. ಮತ್ತೆ, ಡಿ.ಎ. ಮತ್ತು ಸರ್ಕಾರಿ ನೌಕರರ ಬಗ್ಗೆ ಬಹಳ ಹೇಳಿದ್ದೀರಿ. ಜನರಲ್ ಸರ್ವೀಸಸ್‌ಗೆ ಎಷ್ಟು ಕೊಟ್ಟಿದ್ದೀರಿ ಎಂದರೆ ೧೯೮೦-೮೧ಕ್ಕೆ ೧೨೪೦ ಕೋಟಿ ರೂಪಾಯಿಗಳು. ೧೯೭೯-೮೦ ಕ್ಕಿಂತ ೨೪೦ ಕೋಟಿ ರೂಪಾಯಿಗಳ ಹೆಚ್ಚಳ ಕೊಟ್ಟಿದ್ದೀರಿ. ಅಂದರೆ, ನೀವು ಮುಂದೆ ಕೊಡಬೇಕಾದ ಡಿ.ಎ. ಲೆಕ್ಕವನ್ನೂ ಸೇರಿಸಿದ್ದಿರೋ ಅಥವಾ ಕಳೆದ ವರ್ಷಕ್ಕಿಂತ ೨೪೦ ಕೋಟಿ ರೂಪಾಯಿ ಜಾಸ್ತಿ ಕೊಟ್ಟು ನಾನ್‌ಪ್ಲಾನ್ ಎಕ್ಸಪೆಂಡೀಚರ್ ಜಾಸ್ತಿ ಆಗಿದೆ ಎಂದು ಬೊಬ್ಬೆ ಹಾಕುತ್ತೀರೋ ? ಇದಕ್ಕೆ ಪರಿಹಾರ ಹೇಗೆ ? ತೆರಿಗೆ ಹಾಕುವಾಗ ಒಂದು ಕಡೆ ವಿನಾಯಿತಿ ತೋರಿಸುತ್ತೀರಿ, ತೆರಿಗೆ ಯಾರಿಗೆ ಹಾಕಿದ್ದೀರಿ? ಇದು ಬಹಳ ಇಂಟರೆಸ್ಟಿಂಗ್ ಆಗಿದೆ. ೫೦ ಸಿಸಿ ಸಾಮರ್ಥ್ಯಕ್ಕೆ ಮೀರಿದ ಮತ್ತು ೩೦೦ ಸಿಸಿ ಸಾಮರ್ಥ್ಯದ ಮೋಟಾರ್ ಸೈಕಲ್‌ಗಳಿಗೆ ಮೊದಲಿದ್ದ ೮೫೦ ರೂಪಾಯಿಗಳ ಲೈಫ್ ಟ್ಯಾಕ್ಸ್ ಬದಲು ೧೫೦೦ ರೂಪಾಯಿಗಳನ್ನು ಹಾಕಿದ್ದೀರಿ. ಇದನ್ನು ಒಂದು ಸಾರಿ ಕೊಟ್ಟರೆ ಮುಗಿಯಿತು. ಆದರೆ, ೫೦ ಸಿಸಿ ಲೈಫ್ ಎಷ್ಟು ? ೧೫೦೦ ರೂಪಾಯಿಗಳ ಲೈಫ್ ಟ್ಯಾಕ್ಸ್‌ಗೆ ಸುಮಾರು ೧೫ ಪರ್‌ಸೆಂಟ್‌ನಂತೆ ಲೆಕ್ಕ ಇಟ್ಟುಕೊಂಡರೂ ವರ್ಷಕ್ಕೆ ೨೭೦ ರೂಪಾಯಿಗಳಾಯಿತು. ಲೈಫ್ ಟ್ಯಾಕ್ಸ್ ಬರುವುದಕ್ಕಿಂತ ಮೊದಲು ವರ್ಷಕ್ಕೆ ೨೭ ರೂಪಾಯಿ ಅಥವಾ ೩೦ ರೂಪಾಯಿಗಳು ಇತ್ತು. ೫೦ ಸಿಸಿ ಮೊಡಿಕಲ್‌ಗಳನ್ನು ಸುಮಾರು ೫ ಅಥವಾ ೬ ವರ್ಷಗಳು ಉಪಯೋಗಿಸಿದ ನಂತರ ಅವುಗಳನ್ನು ಬಿಸಾಕಲೇಬೇಕು. ಅದಕ್ಕಿಂತ ಹೆಚ್ಚು ವರ್ಷ ಬಾಳಿದ್ದುದು ನನಗೆ ಗೊತ್ತಿಲ್ಲ.

ಶ್ರೀ ಕೆ. ಜೆ. ಜಾರ್ಜ್.—ಹೀರೋ ಹೋಂಡಾ ಹಾಗೂ ಮತ್ತಿತರ ವಾಹನಗಳು ಹೆಚ್ಚು ವರ್ಷಗಳ ಕಾಲ ಬಾಳಿಕೆ ಬರುತ್ತವೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮೊಪೆಡ್‌ಗಳನ್ನು ತೆಗೆದುಕೊಳ್ಳುವವರು ಯಾರು ? ತೀರಾ ಕೆಳದರ್ಜೆಯಲ್ಲಿರುವವರು, ರೈತರುಗಳು ಕೂಡ ಇದನ್ನು ಇವತ್ತಿನ ದಿವಸಗಳಲ್ಲಿ ಉಪಯೋಗಿಸುತ್ತಿದ್ದಾರೆ. ಮಧ್ಯಮವರ್ಗದವರು ಹಾಗೂ ಜವಾನರು ಮತ್ತು ಸಣ್ಣಪುಟ್ಟ ಜನರುಗಳು ಮಾತ್ರ ಮೊಪೆಡ್‌ಗಳನ್ನು ಉಪಯೋಗಿಸುತ್ತಾರೆ. ಇದರ ಮೇಲೆ ಹಾಕಿರುವ ತೆರಿಗೆ ವಿಪರೀತ. ಇನ್ನುಳಿದ ತೆರಿಗೆಗಳ ಬಗ್ಗೆ ನಾನು ಹೇಳುವುದಿಲ್ಲ. ಟ್ರ್ಯಾಕ್ಟರುಗಳಿಗೆ ೩ ತಿಂಗಳಿಗೆ ಒಂದು ಸಾರಿ ಮೂವತ್ತೇಳುವರೆ ರೂಪಾಯಿಗಳ ತೆರಿಗೆ ಇತ್ತು. ಈಗ ಲೈಫ್ ಟೈಮ್ ಟ್ಯಾಕ್ಸ್ ಎಂದು ೧೫೦೦ ರೂಪಾಯಿಗಳನ್ನು ಹಾಕಿದ್ದೀರಿ. ಮೂವತ್ತೇಳುವರೆ ರೂಪಾಯಿಗಳನ್ನು ನಾಲ್ಕು ಸಾರಿ ಗುಣಿಸಿದರೆ ೧೫೦ ರೂಪಾಯಿ ಆಗುತ್ತದೆ, ೧೩೦೦ ರೂಪಾಯಿಗಳಿಗೆ ಬಡ್ಡಿ ಎಷ್ಟಾಯಿತು ? ೧೨೦ ರೂಪಾಯಿಗಳಾಯಿತು. ನೀವು ಇಲ್ಲಿ ಏನೋ ಕೊಟ್ಟಿದ್ದೇವೆಂದು ಹೇಳಿ ಹೆಚ್ಚಿಗೆ ಟ್ಯಾಕ್ಸನ್ನು ಹಾಕಿದ್ದೀರಿ. ಟ್ರೈಲರ್‌ಗಳಿಗೆ ೧೦೦೦ ರೂಪಾಯಿ, ಪವರ್ ಟಿಲ್ಲರ್‌ಗಳಿಗೆ ಹಿಂದೆ ಮೂವತ್ತೇಳುವರೆ ರೂಪಾಯಿಗಳಿದ್ದದ್ದನ್ನು ೫೦೦ ರೂಪಾಯಿಗಳ ಲೈಫ್ ಟೈಮ್ ಟ್ಯಾಕ್ಸ್ ಮಾಡಿದ್ದೀರಿ. ಆ ದೃಷ್ಟಿಯಿಂದ ಯೋಚನೆ ಮಾಡಿದರೆ ಎಲ್ಲಾದರೂ ಒಂದು ಕಡೆ ನೀವು ರೈತರ ಪರವಾಗಿ ಇದ್ದೀರಾ ? ನಾವು ರೈತರ ಬಗ್ಗೆ ಮಾತನಾಡಿದರೆ ಈ ಸರ್ಕಾರಕ್ಕೆ ರೈತರ ಬಗ್ಗೆ ಮಾತನಾಡುವುದಕ್ಕೆ ಒಂದು ತರಹ ಅವಮಾನ.

ಒಟ್ಟು ಕೇಂದ್ರ ಸರಕಾರವೇ ಇರಲಿ ಅಥವಾ ಚುನಾವಣೆಗೆ ನಿಂತು ಗೆದ್ದು ಬಂದಿರತಕ್ಕ ಕಾಂಗ್ರೆಸ್ ಸರಕಾರವೇ ಇರಲಿ, ಅಥವಾ ಕಾಂಗ್ರೆಸ್ಸೇತರ ಸರಕಾರವೇ ಇರಲಿ, ಯಾವ ರಾಜ್ಯಗಳಲ್ಲಿಯೂ ಈ ರೈತರ ೧೦ ಸಾವಿರ ರೂಪಾಯಿಗಳ ಸಾಲವನ್ನು ವಜಾ ಮಾಡುತ್ತೇವೆ ಎಂದು ಹೇಳಿಲ್ಲ. ಹಾಗೆ ಹೇಳಿದ್ದರೆ ಅದು ನಮ್ಮ ರಾಜ್ಯ ಸರಕಾರದವರು ಮಾತ್ರ ಈ ದೇಶದಲ್ಲಿ ಹಾಗೆ ಹೇಳಿದವರು ಇದ್ದರೆ ಅದು ನಮ್ಮ ಸರ್ಕಾರದವರೇ ಹೊರತು ಬೇರೆ ಯಾವುದೇ ಎರಡನೆ ಸರಕಾರದವರು ಇಲ್ಲ. ಇದರಲ್ಲಿ ತಪ್ಪಿದ್ದರೆ ದಯಮಾಡಿಟ್ಟು ಕ್ಷಮಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ರೈತರ ಬಗ್ಗೆ ಕಾಳಜಿ ತೋರಿಸತಕ್ಕಂಥವರು ತಾವುಗಳು ಮಾತ್ರ ಎಂಬ ರೀತಿಯಲ್ಲಿ ಹೇಳುತ್ತಾ ಇದ್ದೀರಿ. ಕಾಂಗ್ರೆಸ್‌ನವರಿಗೆ ರೈತರ ಬಗ್ಗೆ ಏನೂ ಕಾಳಜಿ ಇಲ್ಲ ತಮಗೆ ಮಾತ್ರ ಆ ಕಾಳಜಿ ಎಂಬ ರೀತಿಯಲ್ಲಿ ಹೇಳುತ್ತಾ ಇದ್ದೀರಿ, ತಾವುಗಳು ಹೇಳಿದ ಪ್ರಕಾರ ಯಾವುದೇ ರಾಜ್ಯ ಸರ್ಕಾರದವರು ಸಾಲವನ್ನು ಮನ್ನಾ ಮಾಡುವುದಿಲ್ಲ ಎಂದು ಹೇಳಿದ್ದಾರೆಯೋ ? ನಾವು ಮಾತ್ರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೇವೆ ಎಂದು ನೀವು ಹೇಳುತ್ತಿದ್ದೀರಿ, ನಿಮ್ಮ ಸರ್ಕಾರವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ತತ್‌ಕ್ಷಣ ರೈತರ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿಕೊಂಡು ಬರೆದುಕೊಂಡು ಬಂದಿದ್ದೀರಿ. ಆದರೆ ಹಾಗೆ ಹೇಳಿದ ಕ್ರಮವನ್ನು ಈಗ ಜಾರಿಗೆ ಕೊಡುವುದಕ್ಕೆ ಏತಕ್ಕಾಗಿ ಆಚೆಗೆ, ಈಚೆಗೆ, ತಿರುಗುತ್ತಾ ಇದ್ದೀರಿ ? ಪಶ್ಚಿಮ ಬಂಗಾಲದಲ್ಲಿ, ಕೇರಳದಲ್ಲಿ ಮತ್ತು ಮದ್ರಾಸ್‌ನಲ್ಲಿ ನಿಮ್ಮ ಸರಕಾರದವರು ಇದ್ದಾರೆ ಅವರುಗಳು ಏಕೆ ರೈತರ ಸಾಲವನ್ನು ಮನ್ನಾ ಮಾಡಲಿಲ್ಲ. ? ಅದೇ ರೀತಿಯಲ್ಲಿ ಈ ಸಾಲವನ್ನು ರದ್ದು ಮಾಡುವುದರಿಂದಲೇ ತಾವುಗಳು ರೈತರ ಪರವಾಗಿ ಇದ್ದೀರಿ ಎಂದು ಹೇಳುತ್ತಾ ಇದ್ದೀರಲ್ಲ, ಅದಕ್ಕಿಂತ ಬೇರೆ ಡೋಂಗಿಬಾಜಿ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಬಿಹಾರ್, ಮಧ್ಯಪ್ರದೇಶಗಳಲ್ಲಿ ಪಾರ್ಲಿಮೆಂಟ್ ಚುನಾವಣೆ ಆದ ನಂತರ ಅಸೆಂಬ್ಲಿ ಚುನಾವಣೆಗೆ ಮುಂಚೆ ಸರಕಾರಗಳು ಇದ್ದವಲ್ಲ ? ಅವರು ಯಾರೂ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರು ? ಸುಮ್ಮನೆ ಏನು ಮಾತನಾಡುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ಉತ್ತರ ಪ್ರದೇಶಗಳಲ್ಲಿ ಅಧಿಕಾರದಲ್ಲಿದ್ದವರು ಏಕೆ ಮಾಡಲಿಲ್ಲ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಾವುಗಳು ಡೋಂಗಿಬಾಜಿ ಎಂದು ಹೇಳಿದ್ದೀರಲ್ಲ ಅದಕ್ಕೆ ನಿಮಗೆ ನಾಚಿಕೆಯಾಗಬೇಕು, ಇವೊತ್ತು ಕೇಂದ್ರದ ಬಜೆಟ್ ಅನೌನ್ಸ್ ಆಗುತ್ತಾ ಇದೆ ಅದನ್ನು ನೋಡಿ ಆಗ ಅರ್ಥವಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲ,...

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ಬಹಳ ಜನ ಮಾನ್ಯ ಸದಸ್ಯರು ರೈತರ ಬಗ್ಗೆ ಮಾತನಾಡುತ್ತಾ ಇದ್ದಾರೆ. ಮಧ್ಯಪ್ರದೇಶ, ಹಿಮಾಚಲಪ್ರದೇಶ ಒರಿಸ್ಸಾ, ರಾಜ್ಯಗಳಲ್ಲಿ ಚುನಾವಣೆ ಮುಂಚೆ ಸಾಲವನ್ನು ರದ್ದು ಮಾಡಿದರು. ಡೋಂಗಿಬಾಜಿ ಎಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಒಟ್ಟಿನಲ್ಲಿ ನನ್ನ ಅನುಭವದಲ್ಲಿ ಎಲ್ಲರೂ ಡೋಂಗಿಬಾಜಿಗಳು ಬಹುಶಃ ಚುನಾವಣೆ ಬಂತು ಎಂದರೆ ಇವರು ರೈತರುಗಳನ್ನು ಮನುಷ್ಯರು ಎಂದು ತಿಳಿದುಕೊಂಡಿಲ್ಲ ಎಂದು ಕಾಣುತ್ತದೆ.

ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಹೋದ ಸದನದಲ್ಲಿ ಏನು ಹೇಳಿದರು ? ನಿಮ್ಮ ಪ್ರಣಾಳಿಕೆಯಲ್ಲಿ ಏನಿದೆ ಎಂದರೆ ಪ್ರಧಾನಮಂತ್ರಿಯವರ ಮೇಲೆ ಒತ್ತಾಯ ತರುತ್ತೇವೆ ಎಲ್ಲರೂ ಬನ್ನಿ

ದೆಹಲಿಗೆ ಹೋಗೋಣ ನಾನು ನಾಯಕತ್ವ ವಹಿಸುತ್ತೇನೆ ಎಂದರು ಇವೊತ್ತು ಏನು ಹೇಳುತ್ತಾರೆಂದರೆ ನಬಾರ್ಡ್ ಬಗ್ಗೆ ಮಾತನಾಡೋಣ ಬನ್ನಿ ಹೋಗೋಣ ಎನ್ನುತ್ತಾರೆ,

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯ.—ಸಾಲ ಮನ್ನಾ ಮಾಡಲಿಕ್ಕೆಂದು ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ನಾವು ಏಕೆ ಹೋಗಬೇಕು ? ಈಗ ಮುಖ್ಯಮಂತ್ರಿಗಳು ತಮ್ಮ ಧ್ವನಿಯನ್ನು ಸಂಪೂರ್ಣವಾಗಿ ಬದಲಾಯಿಸಿದ್ದಾರೆ. ಕಳೆದ ಸದನದಲ್ಲಿ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಮಾನ್ಯ ದಂಡವತೆಯವರ ಬಳಿ ಮಾತನಾಡಿದ್ದೇನೆ, ಪ್ರಧಾನ ಮಂತ್ರಿಗಳ ಹತ್ತಿರ ಡೆಲಿಗೇಷನ್ ಹೋಗೋಣ ಬನ್ನಿ ಎಂದರು ಇವತ್ತು ಸಾಲ ಮನ್ನಾ ಮಾಡಿದರೆ ನಬಾರ್ಡ್‌ನಿಂದ ರಿ ಫೈನಾನ್ಸ್ ವಿಚಾರದಲ್ಲಿ ಪ್ರಾಬ್ಲಂ ಕ್ರಿಯೇಟಾಗುತ್ತದೆ ಅದರ ಬಗ್ಗೆ ಮಾತನಾಡಲು ಚಂದ್ರೇಗೌಡರೇ ನೀವು ಬನ್ನಿರಿ ಎಂದು ಈಗ ಹೇಳುತ್ತಿದ್ದಾರೆ. ಇದು ಯಾವ ರೀತಿಯ ಮಾತು ?

(ಗೊಂದಲ)

ಉಪಾಧ್ಯಕ್ಷರು.— ಈಗ ವಿರೋಧ ಪಕ್ಷದ ನಾಯಕರು ಮಾತನಾಡಲಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ನಾನು ಒಂದೇ ಕೇಳುವುದು ಆಡಳಿತ ಪಕ್ಷಕ್ಕೆ ಎಷ್ಟು ನಾಲಿಗೆ ಇದೆ ಎಂದು ಸ್ಪಷ್ಟೀಕರಣ ಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ರೈತ ನಾಯಕರೂ ನಮಗೆಲ್ಲರಿಗೂ ಹಿರಿಯರೂ ಆದ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದಂತೆ ನಮ್ಮ ಸರ್ಕಾರದ ನೀತಿಯಲ್ಲಿ ಇಬ್ಬಗೆಯಿಲ್ಲ. ನಮ್ಮ ಪ್ರಣಾಳಿಕೆಯಲ್ಲೂ ಇಬ್ಬಂದಿತನ ಇಲ್ಲ, ಕೇಂದ್ರವನ್ನು ಸಾಲ ಮನ್ನಾ ಮಾಡಿ ಎಂದು ಒತ್ತಾಯಿಸುತ್ತೇವೆಂದು ಹಿಂದೆ ಏನು ಹೇಳಿದ್ದೆವೋ ಇವತ್ತಿಗೂ ಅದೇ ನಮ್ಮ ನೀತಿ. ಈಗ ನಮ್ಮ ರೈತರಿಗೆ ಬಂದಿರುವ ಸಮಸ್ಯೆಗಳೇನಿದೆ ಅದನ್ನು ನೋಡಿದರೆ ಕೆಲವು ಕಡೆ ೧೪ ಪರ್ಸೆಂಟ್ ಕೆಲವು ಕಡೆ ೧೫ ಪರ್ಸೆಂಟ್ ರಿಕವರಿಯಾಗಿದೆ. ೪೦ ಪರ್ಸೆಂಟ್ ರಿಕವರಿಯಾಗದಿದ್ದರೆ ಮುಂದೆ ನಬಾರ್ಡನವರು ರಿಫೈನಾನ್ಸ್ ಮಾಡುವುದಿಲ್ಲ. ಆಗ ರೈತರು ಪುನಃ ಮಾರವಾಡಿಗಳ ಬಲೆಗೆ ಬೀಳುತ್ತಾರೆ. ಆದ್ದರಿಂದ ಕೇಂದ್ರಕ್ಕೆ ಈ ಬಗ್ಗೆ ಮನವರಿಕೆ ಮಾಡಿಕೊಂಡುವುದಕ್ಕೆ ಸರ್ವಪಕ್ಷದ ನಿಯೋಗ ಹೋಗೋಣ ಎಂದು ಹೇಳಿದ್ದರು. ಇವತ್ತೂ ನಮ್ಮ ನೀತಿ ಅದೇ ಇನ್ನು ಎರಡನೆಯದು ಪ್ರೊಫೆಸರ್ ಅವರು ನಾಲಿಗೆ ಬಗ್ಗೆ ಹೇಳಿದರು, ಪ್ರೊಫೆಸರ್‌ರವರು ಒಂದೇ ಕಡೆ ಮಾತ್ರ ಕಣ್ಣು ಕಿವಿ ಕೊಡಬಾರದು ಆಗ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಪ್ರೊಫೆಸರ್‌ಗಳು ಮಾತನಾಡುತ್ತಾ ಹೋಗುತ್ತಾರೆ ಆಗ ಕೆಲವು ಮಕ್ಕಳು ತೂಕಡಿಸುತ್ತಿರುತ್ತವೆ. ಕೆಲವು ಹೊಡೆದಾಡುತ್ತಿರುತ್ತವೆ ಆದರೂ ಪ್ರೊಫೆಸರ್ ಭಾಷಣ ಮಾಡುತ್ತಲೇ ಇರುತ್ತಾರೆ. ಏನೇನು ಕ್ಲಾಸ್‌ರೂಮಿನಲ್ಲಿ ನಡೆಯುತ್ತದೆ. ಎನ್ನುವುದನ್ನು ಎರಡೂ ಕಿವಿ ತೆರೆದುಕೇಳಬೇಕು. ಮಾನ್ಯ ಸಿಂಧ್ಯಾ ಅವರು ಏನು ಹೇಳಿದರು ನಮಗೆ ನಿಯೋಗ ಬೇಡ ಸಾಲ ಮಾಡುವುದಾಗಿ ಕೇಂದ್ರದಲ್ಲೇ ತಾವು ನಿರ್ಣಯ ಮಾಡಿದ್ದೇವೆ, ಬೇಕಾದರೆ ನೀವೇ ಹೋಗಿ ಎಂದರು. ಆದರೆ ವಿರೋಧ ಪಕ್ಷದ ನಾಯಕರು ನಿಯೋಗವನ್ನು ಏಕೆ ತೆಗೆದುಕೊಂಡು ಹೋಗುವುದಿಲ್ಲ ಎಂದು ಕೇಳುತ್ತಾರೆ. ಅವರ ಪ್ರಣಾಳಿಕೆಯಲ್ಲೂ ಸ್ಪಷ್ಟವಾಗಿ ಹೇಳಿದ್ದಾರೆ. ಸಾಲವನ್ನು ನಾವು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಇವತ್ತು ಹೇಳುತ್ತಾರೆ. ನಾವು ಸಾಲವನ್ನು ಐದು ವರ್ಷಗಳೊಳಗೆ ಯಾವಾಗಲಾದರೂ ಮನ್ನಾ ಮಾಡಬಹುದು ಅಥವಾ ಬಿಡಬಹುದು ಅದು ನಮ್ಮ ಖುಷಿ ಎಂದು ಹೇಳತಕ್ಕಂಥ ಇಬ್ಬಗೆಯ ಎರಡು ನಾಲಿಗೆ ಚಾಚಿದ್ದು ನಿಮ್ಮ ಕಡೆ. ಅದು ನಮ್ಮ ಕಡೆ ಅಲ್ಲ. ಆದುದರಿಂದ ಅದನ್ನು ರಿಪೇರಿ ಮಾಡಿ. ಆಮೇಲೆ ನಮ್ಮ ಕಡೆ ಬನ್ನಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ನಾವು ಅಷ್ಟಾದರೂ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಐದು ವರ್ಷಕ್ಕಾದರೂ ಕೊಡುತ್ತೇವೆ ಎಂದು ಹೇಳಿದ್ದೇವೆ. ಇವರು ಏನು ಮಾಡಿದ್ದಾರೆ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಈ ಕಡೆ ಐದು ಜೋಡಲೆ, ಒಟ್ಟು ೧೫೦ ನಾಲಿಗೆ

(ಗೊಂದಲ)

ಪ್ರೊ ಎಂ. ಡಿ. ನಂಜುಂಡಸ್ವಾಮಿ —ನಾವು ಈ ಮಧ್ಯೆ ಸಿಕ್ಕಿರುವವರು ಏನಾಗಿದ್ದೇವೆ ಎಂದರೆ ಒಬ್ಬರಿಗೆ ಎರಡು ನಾಲಿಗೆ ಇದೆ, ಇನ್ನೊಬ್ಬರಿಗೆ ಮೂರು ನಾಲಿಗೆ ಇದೆ. ಇವೆರಡರ ನಡುವೆ ಸಿಕ್ಕಿ ನಾವು ನರಳುತ್ತಿದ್ದೇವೆ.

(ಗೊಂದಲ)

ಶ್ರೀ. ಡಿ. ಬಿ. ಚಂದ್ರೇಗೌಡ.—ಮಧ್ಯ ಮಧ್ಯೆ ಕಾಗೋಡು ತಿಮ್ಮಪ್ಪನವರು ಒಂದು ಸಲ ಬಂದು ಬಿಡುತ್ತಾರೆ. ವೀರಪ್ಪಮೊಯಿಲಿಯವರು ಒಂದು ಸಲ ಬಂದು ಬಿಡುತ್ತಾರೆ. ಆ ಮಾತಿಗೂ ಈ ಮಾತಿಗೂ ನಾವು ಉತ್ತರವನ್ನು ಹೇಳದಿದ್ದರೆ ದಾಖಲೆಯಲ್ಲಿ ಹಾಗೆ ಹೋಗಿಬಿಡುತ್ತದೆ. ಆದುದರಿಂದ ಮೊದಲು ಇವರಿಗೆ ಹೇಳೋಣ. ಮುಖ್ಯಮಂತ್ರಿಗಳು...

ಶ್ರೀ ಎಂ. ವೀರಪ್ಪಮೊಯಿಲಿ.—ಅಡ್ಡ ಬಳಸಿ ಮಾತನ್ನು ಏತಕ್ಕೆ ಆಡುತ್ತೀರಿ ? ಸಾಲವನ್ನು ಮನ್ನಾ ಮಾಡಿ. ನಿಮ್ಮ ಕೈಯಲ್ಲಿ ಸರ್ಕಾರ ಇದೆ, ಮನ್ನಾ ಮಾಡಿ. ಮೊದಲು ಕೃತಿಯಲ್ಲಿ ತೋರಿಸಿ. ಬರೀ ಮಾತಿನಲ್ಲಿ ಹೇಳಿದರೆ ಏನು ಪ್ರಯೋಜನ ? ಮಾತನಾಡಿ ಮಾತನಾಡಿ ಆರು ವರ್ಷವನ್ನು ಕಳೆದಿರಿ. ಇನ್ನು ಎಷ್ಟು ವರ್ಷ ಕಳೆಯುತ್ತೀರಿ ಮಾತನಾಡಿ ? ಮಾಡಿ ಅದನ್ನು ಕೃತಿಯಲ್ಲಿ ತೋರಿಸಿ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ.–ದೇವಿಲಾಲರು ಹರಿಯಾಣದ ಮುಖ್ಯ ಮಂತ್ರಿಯಾಗಿದ್ದಾಗ ಸಡೆನ್ ಆಗಿ ಬಂದ ತಕ್ಷಣ ಸಾಲ ಮನ್ನಾದ ಬಗ್ಗೆ ಅನೌನ್ಸ್ ಮಾಡಿದರು. ಕೊನೆಗೆ ಅಲ್ಲಿ ಬರಗಾಲ ಇದ್ದರೂ ಇದುವರೆಗೂ ಸಾಲ ಮನ್ನಾ ಮಾಡುವುದಕ್ಕೆ ಆಗಲಿಲ್ಲ. ಹರಿಯಾಣದಲ್ಲಿ ರೈತರುಗಳು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಸಾಲವನ್ನು ಮನ್ನಾ ಮಾಡಬೇಕು ಎನ್ನತಕ್ಕಂಥದ್ದು ಗಂಭೀರವಾದ ವಿಚಾರ. ಸಾಲ ಮನ್ನಾ ಮಾಡಲೇಬೇಕು, ಇದು ರೈತರ ಪರವಾಗಿ ಇರತಕ್ಕಂಥ ಸರ್ಕಾರ. ಇದರ ಬಗ್ಗೆ ಎರಡು ಮಾತಿಲ್ಲ. ರೈತರು ಏನಾದರೂ ಹಾಳಾಗಿದ್ದರೆ ೮೩ ರಿಂದ ೮೯ ರವರೆಗೆ ಹೊರತು ಇನ್ನು ಯಾವಾಗಲೂ ಅಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನೀವು ಮನ್ನಾ ಮಾಡಿ ಎಂದು ಕಾಂಗ್ರೆಸ್‌ನವರು ಹೇಳುವುದು. ನೀವು ಮನ್ನಾ ಮಾಡಿ ಎಂದು ಜನತಾ ದಳದವರು ಹೇಳುವುದು. ಬಿ.ಜೆ.ಪಿ.ಯವರು ಸತ್ಯಾಗ್ರಹ ಮಾಡುವುದು. ನಮ್ಮ ಇಬ್ಬರು ರೈತ ಮುಖಂಡರುಗಳು ಇಲ್ಲಿ ಕುಳಿತಿರುವುದು. ಇದು ಏನು ? ರೈತರ ಹಣೆಬರಹ ಸರಿಯಿಲ್ಲ. ಇದು ಬಹಳ ಶೋಚನೀಯವಾಗಿದೆ. ನೀವು ಕಾಂಗ್ರೆಸ್‌ನವರು ಈ ರೀತಿ ಮಾತನಾಡಿಕೊಂಡೇ ಕಾಲ ಕಳೆಯುತ್ತೀರಿ. ರೈತರ ಬಗ್ಗೆ ಮೂಗಿನ ಮೇಲೆ ತುಪ್ಪ ಹಚ್ಚಿಕೊಂಡು ಇದೇ ರೀತಿ ಕಾಲವನ್ನು ಕಳೆಯುತ್ತೀರಿ. ಇದು ಸರಿಯಾದ ನೀತಿ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ. ಯೋಜನಾ ಮಂತ್ರಿಗಳು ಸ್ವಲ್ಪ ತಡವಾಗಿ ಬಂದರು, ಬಂದು ಬಿರುಸಾಗಿ ಮಾತನಾಡಿ ಬಿಟ್ಟರು. ಬಹುಶಃ ಈ ರಾಜ್ಯದಲ್ಲಿ ಒಬ್ಬ ಮಂತ್ರಿ ಮತ್ತೊಬ್ಬ ಮಂತ್ರಿಗಳಿಗೆ ಅವರು ಹೇಳುವುದು ಇವರಿಗೆ ಗೊತ್ತಿರುವುದಿಲ್ಲ, ಇವರು ಹೇಳುವುದು ಅವರಿಗೆ ಗೊತ್ತಿರುವುದಿಲ್ಲ. ಎರಡು ಸಾರಿ ಪತ್ರಿಕಾ ಹೇಳಿಕೆಯನ್ನು ಕೊಟ್ಟಾಗ ಅದು ತದ್ವಿರುದ್ಧವಾದಂಥ ನಿರ್ಣಯ ಎಂದು ನಮಗೆ ಗೊತ್ತಾಯಿತು. ಚುನಾವಣೆಯನ್ನು ವಜಾ ಮಾಡಿದ್ದೇವೆ ಎಂದು ಪತ್ರಿಕೆಯಲ್ಲಿ ಇವರು ಹೇಳಿದ್ದದ್ದು ಬಂತು. ಮಾರನೆಯ ದಿವಸವೇ ಮುಖ್ಯ ಮಂತ್ರಿಗಳು ಇಲ್ಲ, ಇಲ್ಲ ವಜಾ ಮಾಡಲಿಲ್ಲ, ಮುಂದಕ್ಕೆ ಹಾಕಿದ್ದೇವೆ ಎಂದು ಹೇಳಿದರು. ನಮಗೆ ಈ ರೀತಿ ಎರಡು ನಾಲಗೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಬರೆದಿರತಕ್ಕಂಥ ಕಾಗದ ಸಾಲವನ್ನು ಮನ್ನಾ ಮಾಡುವುದಕ್ಕಾಗಿಯೇ ಹೊರತು ಕೇಂದ್ರ ಸರ್ಕಾರದ ಜೊತೆ ನಿಯೋಗ ತೆಗೆದುಕೊಂಡು ಹೋಗಬೇಕು ಎಂದಲ್ಲ. Please take note of it and do not try to mix to the issues here.

SRI M. VEERAPPA MOILY.—There are two issues here. You are mixing it. If you yield for a while, there are two issues, not one issue. The ball is in the court of the Government of India...

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಸಾಲವನ್ನು ಮನ್ನಾ ಮಾಡುವಂಥ ವಿಚಾರ ಅದು ಕಳೆದ ಸದನದಲ್ಲಿ ಬಂತು, ಅದಕ್ಕೆ ನಮ್ಮ ವಿಚಾರ ಏನು ಎಂದು ಹೇಳಿದ್ದೇವೆ, ಅದನ್ನು ಪ್ರಣಾಳಿಕೆಯಲ್ಲೂ ಹೇಳಿದ್ದೇವೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆ ಎಂದು ಹೇಳಿದ್ದೇವೆ. ನಮ್ಮ ರೈತರಿಗೆ ಏನು ನಬಾರ್ಡ್‌ನವರು ಸಾಲ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಇದು ನಮಗೆ ಬಂದಂಥ ಗಂಡಾಂತರ ೪೦ ಪರ್‌ಸೆಂಟ್ ರಿಕವರಿ ಬರೆದಿದ್ದರೆ ಸಾಲ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ತಮಗೂ ಗೊತ್ತಿದೆ.

ಸಾಲ ಮನ್ನಾ ಮಾಡುವ ವಿಚಾರವಾಗಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಚರ್ಚೆ ಮಾಡಿದ್ದಾರೆ. ಪ್ರಧಾನ ಮಂತ್ರಿಯವರು ಚರ್ಚೆ ಮಾಡಿದ್ದಾರೆ. ಕೇಂದ್ರ ಅರ್ಥ ಸಚಿವರ ಹತ್ತಿರ ಚರ್ಚೆ ಮಾಡಿದ್ದಾರೆ. ಇದನ್ನು ಚರ್ಚೆ ಮಾಡಿದ ಮೇಲೆ ಸಾಲ ಮನ್ನಾದ ವಿಚಾರದಲ್ಲಿ ಕೇಂದ್ರ ಸರ್ಕಾರದ ಧೋರಣೆ ಏನು ಇದೆ. ಆ ಧೋರಣೆಯನ್ನು ಪುನಃ ಬಜೆಟ್‌ನಲ್ಲಿ ಪುನರ್ ಉಚ್ಚರಿಸಿದ್ದೇವೆ. ಈ ವಿಚಾರವನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ. ಇದರ ಬಗ್ಗೆ ನಿಯೋಗದ ಅವಶ್ಯಕತೆ ಇದೆ. ನಾವು ಎದುರಿಸತಕ್ಕ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕು. ನಬಾರ್ಡ್‌ನವರು ರೈತರಿಗೆ ಸಾಲ ಕೊಡಬೇಕು. Now the ball is in the court of Govt. of India. ಈಗ ಈ ಪ್ರಶ್ನೆ ನಮ್ಮಲ್ಲಿ ಇಲ್ಲ. ಪ್ರಶ್ನೆ ಏನು ಅಂದರೆ ರೈತರಿಗೆ ಸಾಲ ಕೊಡಬೇಕು ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡಿದ್ದಂತಹ ವಿಚಾರವನ್ನು ಸೇರಿಸಿ ಎರಡೂ ಇಶ್ಯೂಗಳ ಬಗ್ಗೆ ಮಾತನಾಡಿದರೆ ಗೋದಲ ಆಗುತ್ತದೆ. ಗೊಂದಲಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ಯಾವುದೇ ಗೊಂದಲ ಇಲ್ಲ. ಯಾವುದು ಗೊಂದಲ, ಯಾವುದು ಅಲ್ಲ ಎಂದು ನಿಮ್ಮಿಂದ ನಾನು ತಿಳಿದುಕೊಳ್ಳಬೇಕಾಗಿಲ್ಲ. ಆದರೆ ನೀವು ಮಾತನಾಡಿದಾಗ, ಮುಖ್ಯ ಮಂತ್ರಿಗಳು ಮಾತನಾಡಿದಾಗ ಗೊಂದಲ ಶುರುವಾಗುತ್ತದೆ. ಮುಖ್ಯ ಮಂತ್ರಿಗಳು ಬೆಳಿಗ್ಗೆ ಹೇಳಿದ್ದನ್ನು ಈಗ ಪುನಃ ಹೇಳುತ್ತಿದ್ದೇನೆ. ಕಾಗೋಡು ತಿಮ್ಮಪ್ಪನವರು ಯಾವಾಗಲೋ ಬರುತ್ತಾರೆ. ನಿಮ್ಮ ಮುಖ್ಯ ಮಂತ್ರಿಗಳು ರೈತರ ಸಾಲ ಮನ್ನಾ ಮಾಡುವುದಕ್ಕೆ ನಿಯೋಗ ಕರೆದಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.—ಊಟಕ್ಕೆ ಕರೆದಿದ್ದಾರೆಯೇ...

ಶ್ರೀ ಸಿ. ಬೈರೇಗೌಡ.—ತಿಮ್ಮಪ್ಪನವರ ಅರ್ಥದಲ್ಲಿ ಹೇಳುವುದಾದರೆ ಯಾವುದಕ್ಕೂ ಕರೆದಿಲ್ಲ.

ಶ್ರೀ ಡಿ ಬಿ. ಚಂದ್ರೇಗೌಡ.—ನಾನು ಬೇಕಾದರೆ ರೆಕ್‌ಮೆಂಡ್ ಮಾಡುತ್ತೇನೆ. ನಿಮ್ಮ ವಿಷಯದ ಬಗ್ಗೆ ಮುಖ್ಯ ಮಂತ್ರಿಗಳಿಗೆ ರೆಕ್‌ಮೆಂಡ್ ಮಾಡೋಣ. ಬೆಳಿಗ್ಗೆ ಕೂಡ ಈ ಪ್ರಸ್ತಾಪ ಬಂದಿದೆ. ಶೇಕಡಾ ೪೦ರಷ್ಟು ಸಾಲ ವಸೂಲು ಆಗದಿದ್ದರೆ ನಬಾರ್ಡ್‌ನವರು ರೀಫೈನಾನ್ಸ್ ಮಾಡುವುದಿಲ್ಲ ಎಂದು ಹೇಳುತ್ತಾರೆ. ಎರಡನೆಯದಾಗಿ ನಬಾರ್ಡ್‌ನವರಿಗೆ ಸರ್ಕಾರದವರು ಏನು ಡಿಫರೆನ್ಸ್ ಬಾಕಿ ಕೊಡಬೇಕು.

ಅದನ್ನು ಕೊಡಬೇಕಾಗಿದೆ. ಬಡ್ಡಿ ರಿಯಾಯಿತಿ ಬಾಕಿ ಏನು ಇದೆ ಅದನ್ನು ಕೊಡಬೇಕಾಗುತ್ತದೆ. ರಿಯಾಯಿತಿ ದರದಲ್ಲಿ ಡಿಫರೆನ್ಸ್ ಏನು ಕೊಡಬೇಕು ಅದನ್ನು ಕೊಡದಿದ್ದರೆ ನಬಾರ್ಡ್‌ನವರು ಹಣ ರಿಲೀಸ್ ಮಾಡುವುದಿಲ್ಲ ನಾನು ಅದಕ್ಕೆ ಹೇಳಿದೆ. ಮಹಾರಾಷ್ಟ್ರದವರಿಗೆ ರಿಲೀಸ್ ಮಾಡಿದ್ದಾರೆ, ಏಕೆಂದರೆ ನಬಾರ್ಡ್ ಮುಖ್ಯಸ್ಥರನ್ನು ಅವರು ಸಮಾಧಾನ ಮಾಡಿದ್ದಾರೆ. ಮುಖ್ಯ ಮಂತ್ರಿಗಳು ಲೆಟರ್ ಕೊಟ್ಟರೆ ರಿಲೀಸ್ ಮಾಡುತ್ತೇವೆಂದು ಹೇಳಿದ್ದಾರೆ. ಮುಖ್ಯ ಮಂತ್ರಿಗಳಿಗೆ ಲೆಟರ್ ಬರೆಯಲು ಹೇಳಿ ಎಂದರು. ಇದಕ್ಕಾಗಿ ನಿಯೋಗದ ಅಗತ್ಯ ಇಲ್ಲ.

ಶ್ರೀ ಕೆ.ಎಸ್. ಸಿದ್ಧರಾಮಪ್ಪ.—ಒಂದು ಮಾತನ್ನು ಅವರು ಮರೆತು ಬಿಟ್ಟಿದ್ದಾರೆ...

ಶ್ರೀ ಡಿ.ಬಿ. ಚಂದ್ರೇಗೌಡ.—ಯಾರು ಬೇಕಾದರೂ ಎದ್ದು ಮಾತನಾಡಬಹುದೇ ?

ಛೇರ್ಮನ್.—ದಯವಿಟ್ಟು ಕುಳಿತುಕೊಳ್ಳಿ...

(ಗೊಂದಲ)

ಶ್ರೀ ಕೆ.ಎಸ್. ಸಿದ್ಧರಾಮಪ್ಪ.—ಎಲ್ಲಾ ರಾಜಕೀಯ ನಾಯಕರು ಸಹಿತ ಸಾಲ ಮನ್ನಾ ಮಾಡಿ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಎಲ್ಲಾ ರೈತರು...

ಛೇರ್ಮನ್.—ದಯವಿಟ್ಟು ತಾವು ಕುಳಿತುಕೊಳ್ಳಿ...

ಶ್ರೀ ಕೆ.ಎಸ್. ಸಿದ್ಧರಾಮಪ್ಪ.—ಸಾಲ ವಸೂಲು ಮಾಡುವುದಕ್ಕೆ ಆಗುತ್ತಿಲ್ಲ. ಮುಂದೆ ಸಾಲ ಕೊಡಬೇಕಾದರೆ ತೊಂದರೆ ಆಗುತ್ತದೆ. ಇದಕ್ಕೆ ಏನಾದರೂ ಒಂದು ಪೂರಕ ವ್ಯವಸ್ಥೆ ಮಾಡುವುದಕ್ಕೆ ಅವಕಾಶ ಇದೆ. ಕೇಂದ್ರ ಸರ್ಕಾರ ಸಾಲವನ್ನು ಮನ್ನಾ ಮಾಡಲು ರೀ-ಫೈನಾನ್ಸ್ ವ್ಯವಸ್ಥೆ ಮಾಡಿದರೆ ಸಾಲ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಈ ವಿಚಾರವನ್ನು ಅವರು ಮರೆತಿದ್ದಾರೆ, ಅದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—ಶಾಸನಸಭೆಗಳನ್ನು ಹೀಗೆಯೇ ನಡೆಸಿಕೊಂಡು ಹೋಗಬೇಕೆಂದು ಅಪೇಕ್ಷೆ ಆದರೆ ನಡೆಸೋಣ...

(ಗೊಂದಲ)

(ಶ್ರೀ ಎಸ್.ಎಂ. ಕೃಷ್ಣ ಅಧ್ಯಕ್ಷರವರು ಪೀಠವನ್ನಲಂಕರಿಸಿದರು)

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ, ನಾನು ರೈತರ...

(ಈ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಒಬ್ಬರು ಪಾಕಿಸ್ತಾನಕ್ಕೆ ಧಿಕ್ಕಾರ ಎಂದು ಘೋಷಣೆ ಕೂಗುತ್ತಾ ಕರಪತ್ರಗಳನ್ನು ಎಸೆದರು.

ಶ್ರೀ ಡಿ.ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೆ ನಿಮಗೆ ಸಾಲವಂತೂ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಿರಿ ನನಗೇನೆಂದರೆ ಕನಿಷ್ಟ ನಮ್ಮ ಹಿಂದಿನ ಸರ್ಕಾರ ಇದ್ದಾಗ ರಿಯಾಯಿತಿ ದರದಲ್ಲಿ ಬಡ್ಡಿ ಕೊಡತಕ್ಕಂಥ ವ್ಯವಸ್ಥೆ ಏನಿತ್ತು ಅದರಿಂದ ಸಹಸ್ರಾರು ಜನ ರೈತರಿಗೆ ಸಹಾಯವಾಗಿದೆ, ಆ ವ್ಯವಸ್ಥೆಯನ್ನಾದರೂ ಇಟ್ಟುಕೊಳ್ಳಿ. ಆಯವ್ಯಯ ಭಾಷಣದಲ್ಲಿ ಮಾನ್ಯ ಅರ್ಥಮಂತ್ರಿಗಳು ,,ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿಗೆ ವಿನಾಯಿತಿ'' ಎಂದು ಹೇಳಿದ್ದಾರೆ. ಇದು ಏಕೆ? ಎಲ್ಲಾದರೂ ಒಂದು ಕಡೆ ನಿಲ್ಲೋಣ. ಇದರಿಂದ ರೈತರ ವಿರುದ್ಧವಾದಂಥ ಧೋರಣೆಯನ್ನು ನೀವು ತೆಗೆದುಕೊಂಡಿದ್ದೀರಿ ಎಂದು ನಾನು ಹೇಳದೆ ವಿಧಿಯಿಲ್ಲ. ಮಾನ್ಯ ಅಧ್ಯಕ್ಷರೆ, ಯಾವುದೂ ಒಂದು ಹೊಸ ಕಾರ್ಯಕ್ರಮ ಇಲ್ಲ. ನಿರ್ಮಲ ಗ್ರಾಮ ಯೋಜನೆ ಎನ್ನತಕ್ಕಂಥ ಒಂದು ಕಾರ್ಯಕ್ರಮ ಮಾಡಿದ್ದಾರೆ ಕಳೆದ ಸಾರಿ ಮಾನ್ಯ ಬೊಮ್ಮಾಯಿಯವರು ಗ್ರಾಮ ನೈರ್ಮಲ್ಯ ಎಂದಿದ್ದರು. ಅದನ್ನೇ ನಿರ್ಮಲ ಗ್ರಾಮ ಯೋಜನೆ ಎಂದಿದ್ದಾರೆ. ಅಲ್ಲಿ ನಾವು ಶೌಚಾಲಯಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. ಈ ಶೌಚಾಲಯಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮ ಗ್ರಾಮನೈರ್ಮಲ್ಯ ಕಾರ್ಯಕ್ರಮ ಹೋಗಿ ಈ ಸಾರಿ ನಿರ್ಮಲ ಗ್ರಾಮ ಯೋಜನೆಯಾಗಿ ಬದಲಾವಣೆಯಾಗಿದೆ. ಯಾವುದಾದರೂ ಒಂದು ಹೊಸ ಕಾರ್ಯಕ್ರಮ ಇದರಲ್ಲಿಲ್ಲ. ಹೋಗಲಿ ಇರತಕ್ಕಂಥ ಕಾರ್ಯಕ್ರಮ ಅಂದರೆ ನಗರಾಭಿವೃದ್ಧಿ ಕಾರ್ಯಕ್ರಮವಾದ ಬಗ್ಗೆ ಏನು ಮಾಡಿದ್ದಾರೆ? ನಾನು ಮಾನ್ಯ ಬೊಮ್ಮಾಯಿಯವರ ೧೯೮೯-೯೦ರ ಬಜೆಟ್ ಭಾಷಣವನ್ನು ಕೋಟ್ ಮಾಡುತ್ತೇನೆ.

> ,,ನಗರಾಭಿವೃದ್ಧಿ ಯೋಜನೆಯು ಒಂದು ಪ್ರಮುಖ ಕಾರ್ಯಕ್ರಮವನ್ನು ವಿಶ್ವಬ್ಯಾಂಕಿನ ನೆರವಿನೊಂದಿಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಯೋಜನೆಯು ಎರಡು ಘಟಕಗಳನ್ನು ಹೊಂದಿರುತ್ತದೆ.
> (ಎ) ಎಲ್ಲಾ ಮೂಲಭೂತ ಸೌಲಭ್ಯಗಳುಳ್ಳ ನಿವೇಶನಗಳ ನೀಡಿಕೆ ಹಾಗೂ ಕೊಳಚೆ ಪ್ರದೇಶಗಳ ಅಭಿವೃದ್ಧಿ.''

೪.೨೫ ಪಿ.ಎಂ.

ಇದಕ್ಕೆ ಸೈಟ್ ಅಂಡ್ ಸರ್ವಿಸ್ ಎಂದು ಕರೆಯುತ್ತಾರೆ. ಸುಮಾರು ೩೫೦ ಕೋಟಿ ರೂಪಾಯಿಗಳ ಯೋಜನೆ ಇದು. ಈಗಾಗಲೇ ತಮಿಳುನಾಡಿನವರು ಒಂದು ಸಾರಿ ೩೫೦ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಎರಡನೆಯ ಸಾರಿ ೩೫೦ ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳತಕ್ಕ ಪ್ರಯತ್ನ ನಡೆಸಿದೆ. ಇದು ಅಂತಹ ಒಂದು ಕಾರ್ಯಕ್ರಮ. ಆ ಕಾರ್ಯಕ್ರಮಕ್ಕೆ ನಿವೇಶನ ನೀಡಿಕೆ, ಕೊಳಚೆ ಪ್ರದೇಶಗಳ ಅಭಿವೃದ್ಧಿ ಇವೆಲ್ಲ ಸೇರಿಸಿಕೊಳ್ಳುವುದು ಬೆಂಗಳೂರು ನಗರ, ಹುಬ್ಬಳ್ಳಿ ಧಾರವಾಡ, ಗುಲ್ಬರ್ಗ ಈ ಒಂದು ನಗರ ಯೋಜನೆಗೆ ಸೇರಿಸಿ ಮುಂದೆ ಉಳಿದ ೭ ನಗರಗಳಿಗೆ ವಿಸ್ತರಿಸತಕ್ಕಂಥ ಒಂದು ಅವಕಾಶವಿದ್ದಂಥ ಯೋಜನೆ ಈ ಯೋಜನೆಯನ್ನು ಏಕೆ ಕೈಬಿಟ್ಟಿರಿ ಎನ್ನತಕ್ಕಂಥ ವಿವರಣೆಯನ್ನು ನಾನು ಅವರಿಗೆ ಕೇಳುತ್ತಾ ಇದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ನೀವು ಇನ್ನು ಪ್ರಾರಂಭವನ್ನೆ ಮಾಡಿಲ್ಲ!

ಶ್ರೀ ಡಿ.ಬಿ. ಚಂದ್ರೇಗೌಡ.— ಸರ್ಕಾರ ವಜಾಮಾಡಿ ನೀವು ತೆಗೆದುಕೊಂಡರಲ್ಲ ನೀವು ಏನು ಮಾಡಿದಿರಿ ಎಂದು ನಾನು ಕೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— ನೀವು ಕಿತ್ತಾಡಿ ಬಿಟ್ಟಿದ್ದ ಸರ್ಕಾರ ಇದು.

ಶ್ರೀ ಡಿ.ಬಿ. ಚಂದ್ರೇಗೌಡ.—ಸ್ವಾಮಿ ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ. ನಮ್ಮ ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಹಿರಿಯ ಸದಸ್ಯರು. ತಾವು ಅವರಿಗೆ ಏನಾದರೂ ಮಾಡದೇ ಇದ್ದರೆ...ಅದೇ ಮಂತ್ರಿ ಗಿಂತ್ರಿ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು,— ಬೇಗ ಮಂತ್ರಿಮಂಡಲ ವಿಸ್ತರಣೆ ಮಾಡಿದರೆ ಆಗುತ್ತಾರೆ,

ಶ್ರೀ ಡಿ ಬಿ. ಚಂದ್ರೇಗೌಡ. — ಕೊನೆಗೆ ಈ ಒಂದು ಆಯವ್ಯಯ ನಿರಾಶಾದಾಯಕವಾದಂಥ ದೂರದರ್ಶಿತ್ವವಿಲ್ಲದೇ ಇರತಕ್ಕಂಥ, ರೈತ ವಿರೋಧಿಯಾದಂಥ, ಶೋಷಣೆಗೆ ಸಿಕ್ಕಿದಂಥ ಸಮಾಜದ ಜನಕ್ಕೆ ನಿರುಪಯುಕ್ತವಾದಂಥ, ವ್ಯಾಪಾರಿಗಳಿಗೆ ಅನುಕೂಲವಾಗತಕ್ಕಂಥ ಮಧ್ಯಮ ವರ್ಗದ ಮತ್ತು ಕೆಳ ವರ್ಗದವರ ಹೊಟ್ಟೆ ಮೇಲೆ ಹೊಡೆದಂಥ ಒಂದ ನಿರುತ್ಸಾಹಿ ಆಯವ್ಯಯ ಇದು. ಇವರು ಹೇಳಿಕೊಂಡಿರತಕ್ಕಂಥ ಗ್ರಾಮೀಣ ಅಭಿವೃದ್ಧಿ ಕಾರ್ಯಗಳ ಬಗ್ಗೆ ತಮ್ಮ ಹೇಳಿಕೆಗೆ ತದ್ವಿರುದ್ಧವಾದಂಥ ನಡವಳಿಕೆ ಪ್ರತಿಪಾದನೆ ಮಾಡಿದೆ. ನಾನು ಶ್ರೀಮಾನ್ ರಾಜಶೇಖರ ಮೂರ್ತಿಯವರು ಮೊದಲನೇ ಚೊಚ್ಚಲ ಬಜೆಟನ್ನು ಏನು ಸದನಕ್ಕೆ ಕೊಟ್ಟಿದ್ದಾರೆ ಅದನ್ನು ಎಷ್ಟೇ ಪ್ರಯತ್ನ ಮಾಡಿದರೂ ಪ್ರತಿಭಟಿಸದೆ ವಿಧಿಯಿಲ್ಲ ಎನ್ನುವಂಥ ಮಾತನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಈ ಸದನದಲ್ಲಿ ಮಂಡಿಸಿದಂಥ ೧೯೮೦-೮೧ನೇ ಸಾಲಿನ ಆಯವ್ಯಯ ಪತ್ರವನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಆಡಲಿಕ್ಕೆ ಅಪೇಕ್ಷೆಪಡುತ್ತೇನೆ. ತೀರಾ ವಾಸ್ತವಿಕವಾದ ಬಜೆಟ್ ಆಶಾದಾಯಕವಾದ ಬಜೆಟ್ ದೂರದರ್ಶಿತ್ವ ಇರತಕ್ಕ ಬಜೆಟ್ ಇದಾಗಿದೆ. ಕೆಸರಿನಲ್ಲಿ ಕಲ್ಲು ಹಂಡುಕುವ ಅಭ್ಯಾಸ ಇಟ್ಟುಕೊಂಡವರಿಗೆ ಇದರಲ್ಲಿ ಏನೂ ಇಲ್ಲವೆಂದು ಅನ್ನಿಸುವುದು ಸಾಧ್ಯ. ಅದಕ್ಕೆ ಆಧಾರವೇನೂ ಇಲ್ಲ. ಕಳೆದ ೫ ವರ್ಷಗಳಿಂದ ನಾನು ಈ ಸದನದಲ್ಲಿದ್ದೇನೆ, ನಾನು ಈಗ ೬ನೆಯ ಬಜೆಟ್‌ನ್ನು ನೋಡುತ್ತಿದ್ದೇನೆ. ಹಿಂದಿನ ಬಜೆಟ್‌ಗಿಂತಲೂ ವಿಭಿನ್ನವಾದ ಬಜೆಟ್‌ನ್ನು ಈ ಸದನದಲ್ಲಿ ಈ ಸಾರಿ ಹಣಕಾಸಿನ ಮಂತ್ರಿಗಳು ಮಂಡಿಸಿದ್ದಾರೆ. ಕಳೆದ ೫ ವರ್ಷಗಳಲ್ಲಿ ಬಜೆಟ್‌ನಲ್ಲಿ ಏನಿತ್ತು ಎನ್ನುವುದನ್ನು ನೆನೆಸಿಕೊಂಡರೆ, ಮುಕ್ಕಾಲು ಅಂಶ ಕೇಂದ್ರ ಸರ್ಕಾರದ ಟೀಕೆ. ಕೇಂದ್ರ ಸರ್ಕಾರ ಏನೂ ಮಾಡಿಲ್ಲ ಎನ್ನುವುದರ ಕುರಿತು ಪತ್ರ, ಕೇಂದ್ರ ಸರ್ಕಾರಕ್ಕೆ ಹೋಗಿ ಸಮಾಲೋಚನೆ ಮಾಡಿದ್ದು, ಉಳಿದ ಕಾಲು ಭಾಗದಲ್ಲಿ ಅಗ್ಗದ ಸೀರೆ, ಉಚಿತ ಯೂನಿಫಾರಂ, ಪಠ್ಯಪುಸ್ತಕಗಳು, ಹೆಣ್ಣು ಮಕ್ಕಳಿಗೆ ತಾಳಿ, ಹಳ್ಳಿ ಹೆದ್ದಾರಿ, ಸೇತುಬಂಧನ ಪ್ರಚಾರದ ಅಂಶಗಳು ಮಾತ್ರ ಇದ್ದವು ಅದರ ಬದಲಿಗೆ ಈ ಸಾರಿ ದೂರದರ್ಶಿತ್ವ ಇರತಕ್ಕ, ಸಮತೋಲನದಾಯಕ ವಾದ ಬಜೆಟ್ ಎಂದು ನಾನು ಹೇಳುತ್ತೇನೆ. ಅಂಥ ಒಂದು ಪ್ರವೃತ್ತಿಯನ್ನು ಬದಲಾಯಿಸಿ. ಜನ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯದ ಸಂಪನ್ಮೂಲವನ್ನು ರೂಢಿಸಬೇಕಾಗಿದೆ ಎಂದು ಹೇಳಿದ್ದಾರೆ. ಆ ಕಡೆ ಮಿತ್ರರು ಇದನ್ನು ಸ್ವಲ್ಪ ನೋಡಬೇಕು. ಅಗ್ಗದ ಪ್ರಚಾರದಿಂದ ಏನಾಯಿತು ಎನ್ನುವುದನ್ನು ನೆನೆಸಿಕೊಂಡರೆ ಅರ್ಥವಾಗುತ್ತದೆ. ಜನತೆ ನಮ್ಮಲ್ಲಿಟ್ಟಿರುವ ವಿಶ್ವಾಸಕ್ಕೆ ತಕ್ಕಂತೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂಬ ಆಶ್ವಾಸನೆಯನ್ನು ಕೊಡಲಾಗಿದೆ. ಹಿಂದೆ ಈ ರೀತಿಯ ಆಶ್ವಾಸನೆಯನ್ನು ನೀಡಿರಲಿಲ್ಲ. ಆಶ್ವಾಸನೆ ನೀಡಿದ್ದರೂ, ಅದರಂತೆ ಕೆಲಸ ಮಾಡಲಿಲ್ಲ. ಆ ಎರಡೂ ಕೆಲಸಗಳನ್ನು ಇವತ್ತು ನಮ್ಮ ಸರ್ಕಾರ ಮಾಡಬೇಕಾಗಿದೆ. ಈ ಬಜೆಟ್ ಯಾವ ದಾಕ್ಷಿಣ್ಯವೂ ಇಲ್ಲದ ಯಾವ ಮುಲಾಜಿಗೂ ಕಟ್ಟುಬೀಳದ ನಿಷ್ಠುರವಾದಂಥ ಬಜೆಟ್ ಆಗಿದೆ. ೨೦೪.೨೫ ಕೋಟಿ ರೂಪಾಯಿ ಕೊರತೆ ತೋರಿಸಿದರೂ ಅದರಲ್ಲಿ ಅಂತಿಮವಾಗಿ ೧೪೭.೫೦ ಕೋಟಿ ರೂಪಾಯಿ ತೆರಿಗೆ ರೂಪದಲ್ಲಿ ಹಾಗೂ ಹೆಚ್ಚಿನ ಸಂಪನ್ಮೂಲವನ್ನು ಸಂಗ್ರಹ ಮಾಡಿಕೊಂಡರೆ ಕೊನೆಯಲ್ಲಿ ೫೬.೭೫ ಕೋಟಿ ಮಾತ್ರ ಕೊರತೆ ತೋರಿಸಿದಂತಾಗುತ್ತದೆ. ಇದರ ಜೊತೆಗೆ ಆಡಳಿತದಲ್ಲಿ ದಕ್ಷತೆ ಹೆಚ್ಚಿಸಿ ಆಡಳಿತ ಯಂತ್ರವನ್ನು ಚುರುಕುಗೊಳಿಸುವಂಥ ದೃಢನಿರ್ಧಾರವನ್ನು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇವನ್ನು ರೂಢಿಸಿಕೊಂಡು ಹೋದರೆ ಇದೊಂದು ಯೋಗ್ಯ ಬಜೆಟ್ ಆಗಿ ಕರ್ನಾಟಕಕ್ಕೆ ಉತ್ತಮ ಕೊಡುಗೆ ಕೊಟ್ಟಂತಾಗುತ್ತದೆ. ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದಿನ ಸರ್ಕಾರ ಮಾಡಿದ ಸಾಧನೆಯನ್ನು ನಿರೂಪಿಸಿದ್ದಾರೆ. ಸಾಕಷ್ಟು ಸಂಪನ್ಮೂಲಗಳು ದೊರಕದೆ ಯೋಜನೆಯ ಗಾತ್ರ ಮೊಟಕಾಯಿತು, ಸತತವಾಗಿ ಕ್ಷಾಮ ಬಂದಿದ್ದರಿಂದ ಕೃಷಿ ಉತ್ಪಾದನೆ, ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ಕಡಿತವಾಯಿತೆಂದು ಹೇಳಿದ್ದಾರೆ ೬ನೇ ಯೋಜನೆಯನ್ನು ಚುರುಕು ಗೊಳಿಸುವಂಥ ಕಾಲದಲ್ಲಿ ಸಂಪನ್ಮೂಲಗಳು ದೊರೆಯುವ ಹಾಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ ಮಾನ್ಯ ರಾಮಕೃಷ್ಣ ಹೆಗಡೆಯವರು ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಕುಳಿತಿದ್ದಾರೆಂದು ಅಂದುಕೊಂಡರೆ ಸಾಕಾಗುವುದಿಲ್ಲ. ಈ ವಿಚಾರದಲ್ಲಿ ಸತತವಾಗಿ ಹೋರಾಟವನ್ನು ನಡೆಸಬೇಕಾಗುತ್ತದೆ.

ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ ಗ್ರಾಮೀಣ ಅಭಿವೃದ್ಧಿಗೆ ಹಣವನ್ನು ಮೀಸಲಾಗಿಟ್ಟಿದ್ದಾರೆಂದು. ಹೇಳಿದರು ಕಾವೇರಿಗೆ ಕಣ್ಣೀರು ಸುರಿಸಿದಂತಾಗಿದೆ, ಕೃಷ್ಣಾ ಯೋಜನೆಗೆ ಕೃಷ್ಣಾರ್ಪಣ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದರು ಇದು ಅತ್ಯಂತ ದುರಾದೃಷ್ಟ. ಇದೇ ಸದನದಲ್ಲಿ ಗ್ರಾಮೀಣಾಭಿವೃದ್ಧಿ ಕುರಿತಾಗಿ ಚಿಂತನೆಯನ್ನು ಮಾಡಿದವರು ಎಂದು ಹೇಳಿಕೊಂಡ ದಿವಂಗತ ನಜೀರ್‌ಸಾಬ್‌ರವರ ಆತ್ಮಕ್ಕೆ ಶಾಂತಿಯನ್ನು ತರದಂಥ ಮಾತು ಇದು. ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಸಂಪನ್ಮೂಲವನ್ನು ರೂಢಿಸಬೇಕು, ಹೆಚ್ಚಿನ ವ್ಯಯ ಮಾಡಬೇಕು ಅಂತಹ ಒಂದು ಕೆಲಸ ಮಾಡಿದ ಬಗ್ಗೆ ಶಹಭಾಸ್‌ಗಿರಿ ಕೊಡಬೇಕಾಗಿತ್ತೇ ಹೊರತು ಅದರ ಬದಲು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿಗೆ ಇಟ್ಟಿದ್ದೀರಿ ಎಂದು ಹೇಳುವಂಥಾದ್ದು ಶೋಭಾಯಮಾನ ನುಡಿಯಲ್ಲ. ಕಾವೇರಿಗೆ ಕಣ್ಣೀರು ಸುರಿಸಿ ಕೃಷ್ಣಾ ಯೋಜನೆ ಕೃಷ್ಣಾರ್ಪಣೆ ಮಾಡಿದ್ದಾರೆ ಎನ್ನುವ ಮಾತು ಬಂದಿದೆ. ಇದನ್ನು ಯಾರು ಮಾಡಿದರು ಸ್ವಾಮಿ? ಅಧ್ಯಕ್ಷರೆ, ಇದೇ ಸದನದಲ್ಲಿ ನಾವು ಎಲ್ಲಾ ವರ್ಗದವರೂ ಸೇರಿ ಹಿಂದಿನ ವರ್ಷ ೩೦೦ ಕೋಟಿ ರೂಪಾಯಿ ಎಲ್ಲಾ ಕಡೆಯಿಂದ ರೂಢಿಸಿ ಅದನ್ನು ನೀರಾವರಿಗೆ ಖರ್ಚುಮಾಡಿ ಎಂದು ಒಪ್ಪಿಗೆಯನ್ನು ಕೊಟ್ಟಿದ್ದರೂ ಎಲ್ಲಿ ಖರ್ಚು ಮಾಡಿದಿರಿ ? ಯಾರು ಕಾವೇರಿಗೆ ಕಣ್ಣೀರು ಸುರಿಸಿದರು. ಯಾರು ಕೃಷ್ಣಾರ್ಪಣೆ ಮಾಡಿದರು ? ದಾಖಲೆಗಳನ್ನು ತೆಗೆದು ನೋಡಿದರೆ ಇದೆಲ್ಲಾ ಗೊತ್ತಾಗುತ್ತದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಎರಡೂ ಅಭಿವೃದ್ಧಿ ಸಾಧನಗಳಾಗಿ ಮುಂದುವರಿಯುತ್ತವೆ ಎನ್ನುವ ಉಲ್ಲೇಖವನ್ನು ಈಗಾಗಲೇ ಮಾಡಿದ್ದಾರೆ. ಮತ್ತೆ ಹಿಂದೆ ಹೋಗುವ ಪ್ರಶ್ನೆಯೇ ಇಲ್ಲ.

ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಮೂಲಭೂತ ಸೌಲಭ್ಯಗಳ ಬಗ್ಗೆ ನಮ್ಮ ಆದ್ಯತಾ ಪಟ್ಟಿಯಲ್ಲಿ ಅಗ್ರಸ್ಥಾನ ಇಟ್ಟುಕೊಂಡು. ಪ್ರಾಥಮಿಕ ಶಿಕ್ಷಣ, ಗ್ರಾಮೀಣ ಆರೋಗ್ಯ ಸೌಲಭ್ಯಗಳ ನೈರ್ಮಲ್ಯ ವ್ಯವಸ್ಥೆಯನ್ನು ಸುಧಾರಿಸಲಿಕ್ಕೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆಂದು ಆಗ ಮಾಡಲಿಲ್ಲ. ಹಿಂದೆ ಶಾಲೆಗಳು ಇದ್ದುವು, ಅಧ್ಯಾಪಕರು ಇರಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳಬೇಕಾಗಿದ್ದರೆ, ಒಂದು ಸಾವಿರ ಪ್ರಾಥಮಿಕ ಶಾಲಾ ಅಧ್ಯಾಪಕರ ಕೊರತೆ ಇದೆ. ಬಂದ ಬಂದವರೆಲ್ಲರೂ ಕೂಡಲೇ ಮಂಜೂರು ಮಾಡುತ್ತೇವೆ, ಕೂಡಲೇ ನೇಮಕ ಮಾಡುತ್ತೇವೆ ಎಂದು ಹೇಳಿ ಹೋಗಿದ್ದೆ ಹೊರತು ನೇಮಕಗಳು ಮಾತ್ರ ಆಗಲಿಲ್ಲ. ಶಿಕ್ಷಣ ರಂಗದಲ್ಲಿ ಮೂಲಭೂತವಾಗಿ ಆಗಬೇಕಾದ ಪ್ರಾಥಮಿಕ ಶಿಕ್ಷಣದ ಕುರಿತಾದ ಸಹ ಚಿಂತನೆ ಆಗದಿದ್ದರೆ ವಿದ್ಯಾಭ್ಯಾಸದ ನೀತಿ ಸಮರ್ಪಕವಾಗಿ ಆಗುವುದಿಲ್ಲ. ಅದೇ ರೀತಿ ಆರೋಗ್ಯ ನೀತಿ ಸಹ. ಇದರ ಬಗ್ಗೆ ಆಗುವಂಥ ವಿಶೇಷ ಕ್ರಮಗಳು ಯಾವುದು ಇದೆ ಅದನ್ನು ನಾನು ಅಭಿನಂದಿಸುತ್ತೇನೆ. ಈ ವರ್ಷದ ಯೋಜನಾ ವೆಚ್ಚ ೧,೧೪೫ ಕೋಟಿ ರೂಪಾಯಿ ಅದರ ವಲಯವಾರು ಹಂಚಿಕೆಯನ್ನು ನಮೂದಿಸಿದ್ದಾರೆ. ಇದು ಅತ್ಯಂತ ಸ್ತುತ್ಯಾರ್ಹವಾದುದು. ವಲಯವಾರು ಹಂಚಿಕೆ ಕ್ರಮಬದ್ಧವಾದ ಹಂಚಿಕೆ, ಯೋಜನಾ ಬದ್ಧವಾದ ಒಂದು ಹಂಚಿಕೆ ಎಂದು ಈ ಸಂದರ್ಭದಲ್ಲಿ ಹೇಳಿ. ಮಾನ್ಯ ಹಣಕಾಸಿನ ಸಚಿವರಿಗೆ ಮತ್ತು ಯೋಜನಾ ಸಚಿವರಿಗೆ ಇಬ್ಬರಿಗೂ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೊಂದು ಮಾತನ್ನು ಹೇಳಿದರು. ೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನದಲ್ಲಿ ಈ ರಾಜ್ಯ ಹಿಂದೆ ಪ್ರಥಮವಾಗಿ ಇತ್ತು ಈಗ ೮ನೇ ಸ್ಥಾನಕ್ಕೆ ಇಳಿದಿದೆ ಎನ್ನುವ ಮಾತನ್ನು ಹೇಳಿದರು. ಹಿಂದೆ ನಾವು ವಿರೋಧಪಕ್ಷದಲ್ಲಿದ್ದಾಗ ನಮ್ಮ ನಾಯಕರು ಹೇಳುತ್ತಿದ್ದರು ೨೦ ಅಂಶಗಳಲ್ಲಿ ಕೆಲವು ಆರಿಸಿದ ಅಂಶಗಳಲ್ಲಿ ಪ್ರಥಮ ಸ್ಥಾನ. ಮೂರುನಾಲ್ಕು ಅಂಶಗಳಲ್ಲಿ ಪ್ರಥಮ ಸ್ಥಾನ ಬಂದು ಅದನ್ನು ಕೇಂದ್ರದಿಂದ ಬಂದ ಕೆಲವು ಮಂತ್ರಿಗಳ ಹತ್ತಿರ ತೋರಿಸಿ ಆ ಒಂದು ಪ್ರಥಮ ಸ್ಥಾನಕ್ಕೆ ಶಹಭಾಸ್‌ಗಿರಿ ಪಡೆದುಕೊಂಡು ಪೇಪರ್‌ನಲ್ಲಿ ಹಾಕಿಸಿದರು. ಉಳಿದೆಲ್ಲವನ್ನೂ ನೋಡಿದಾಗ ಪ್ರಥಮ ಸ್ಥಾನ ಅಲ್ಲ, ಅದು ೧೪-೧೫ನೇ ಸ್ಥಾನಕ್ಕೆ ಬರುತ್ತದೆ. ತಿರುಗಿ ಪುನರುಚ್ಚರ ಮಾಡುತ್ತಿದ್ದರೆ, ಆದ್ದರಿಂದ ಅವೆಲ್ಲವೂ ಪ್ರಥಮ ಸ್ಥಾನದಲ್ಲಿ ಇರಲಿಲ್ಲ ಎನ್ನುವುದನ್ನು ನಾನು ನೆನೆಪಿಸಲಿಕ್ಕೆ ಬಯಸುತ್ತೇನೆ. ಇನ್ನು ಕೈಗಾರಿಕಾ ನೀತಿಯ ಕುರಿತು ಹೇಳುವುದಾದರೆ ಕೈಗಾರಿಕಾ ನೀತಿಯನ್ನು ಪುನರ್ ರೂಪಿಸಲಾಗುವುದು ಎಂದು ಹೇಳಿರುವಂತಹ ಮಾತು ಯಾವುದು ಇದೆ ಇವನ್ನು ನಿಜವಾಗಿಯೂ ಕೂಡ ಸ್ವಾಗತಿಸಬೇಕು ಮತ್ತು ಮೆಚ್ಚಬೇಕು. ಇನ್ನು ರೈಲ್ವೆಯ ವಿಚಾರವಾಗಿ ಅಭಿನಂದಿಸಲಿಲ್ಲ ಅನ್ನುವಂತಹ ಮಾತು ಇಲ್ಲಿ ಬಂತು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದವರಿಗೆ ಕೇಂದ್ರ ಸರಕಾರದ ನಿಲುವಿನಿಂದಾಗಿ ಸಂತೋಷವಾಗಿರಬಹುದು. ನನಗೂ ಕೂಡ ಸಂತೋಷವಾಗಿದೆ. ಪಶ್ಚಿಮ ಕರಾವಳಿಗೆ ಸಂಬಂಧಪಟ್ಟ ರೈಲಿನ ಯೋಜನೆಯನ್ನು ಎರಡು ವರ್ಷದಲ್ಲಿ ಮಾಡಿ ಮುಗಿಸುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ ಅದು ನಿಜವಾಗಿಯೂ ಕೂಡ ಅಭಿನಂದನೀಯ. ೭-೮ ಕಡೆಗಳಲ್ಲಿ ಈ ರೈಲನ್ನು ಹಾಕುತ್ತೇವೆ ಆ ಕಡೆಗೆ ಮತ್ತು ಈ ಕಡೆಗೆ ಹೋಗುತ್ತದೆ ಎಂದು ಹೇಳಿದ್ದಾರೆ ಅದು ಯಾವುದು ಎಂದು ಸರಿಯಾಗಿ ಗೊತ್ತಾಗುವುದಿಲ್ಲ. ಎರಡು ವರ್ಷದಲ್ಲಿ ಇದು ಆದರೆ ಅದು

ನಿಜವಾಗಿಯೂ ಅಭಿನಂದನೀಯ. ಮಂಗಳೂರು ತೈಲ ಶುದ್ಧೀಕರಣ ಕಾರ್ಖಾನೆ ಗ್ಯಾಸ್ ಟರ್ಮಿನಲ್ ಪ್ರಾಜೆಕ್ಟ್. ಗ್ಯಾಸ್ ಗ್ರಿಡ್ ಇದನ್ನೆಲ್ಲಾ ಮಾಡುತ್ತೇವೆಂದು ಬಡ್ಜೆಟ್‌ನಲ್ಲಿ ಇದೆ. ಇದಕ್ಕೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಹೇರಬೇಕು, ಯಾವುದೇ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಈ ಕೆಲಸವನ್ನು ಮಾಡಬೇಕು. ರಾಜ್ಯದಲ್ಲಿರುವ ಸಾರ್ವಜನಿಕ ಉದ್ಯಮಗಳು ಏನು ಇವೆ ಇವುಗಳ ಲಾಭ ನಷ್ಟವನ್ನು ನೋಡಿಕೊಳ್ಳುವಂತಹ ಜವಾಬ್ದಾರಿಯುಳ್ಳ ಜನರನ್ನು ಇಲ್ಲಿಗೆ ನೇಮಕ ಮಾಡಬೇಕು. ಸಮರ್ಥ ಹಾಗೂ ದಕ್ಷ ವ್ಯಕ್ತಿಗಳು ಈ ಉದ್ಯಮದ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು ಅಗತ್ಯ ಮತ್ತು ಅಗತ್ಯವಿದ್ದಲ್ಲಿ ಹೊರಗಿನವರನ್ನು ನೇಮಿಸಲು ಹಿಂಜರಿಯಬಾರದು. ಈ ರೀತಿ ಉತ್ತಮವಾಗಿ ಕೆಲಸ ಮಾಡುವ ಅಥವಾ ಕಾರ್ಯ ಪ್ರವೃತ್ತಿಯುಳ್ಳ ಘಟಕಗಳಿಗೆ ಮಾತ್ರವೇ ಸರಕಾರ ಬೆಂಬಲ ನೀಡುವಂತಾಗಬೇಕು. ಆದರೆ ನಿರಂತರವಾಗಿ ನಷ್ಟ ಅನುಭವಿಸುತ್ತಿರುವ ಮತ್ತು ಅಂಥ ನಷ್ಟದ ಪರಿವೆಯೇ ಇಲ್ಲದಂತೆ ಕಾರ್ಯ ನಿರ್ವಹಿಸುತ್ತಿರುವಂಥ ಘಟಕಗಳ ಸಂಬಂಧದಲ್ಲಿ ನಾವು ಪರ್ಯಾಯ ಕಾರ್ಯ ನೀತಿಗಳನ್ನು ಯೋಚಿಸಬೇಕಾಗುತ್ತದೆ. ತೀರ ಹದಗೆಟ್ಟ ಕೆಲವು ಸಂದರ್ಭಗಳಲ್ಲಿ ಖಾಸಗಿಯವರಿಗೆ ವಹಿಸಿಕೊಡಬೇಕಾಗಿಯೂ ಬರಬಹುದು ಎನ್ನುವಂತಹ ಮಾತನ್ನು ಇದರಲ್ಲಿ ಹೇಳಿದ್ದಾರೆ. ಆದರೆ ಇದು ಕೊನೆಯ ಒಂದು ಅಸ್ತ್ರವಾಗಬೇಕೇ ವಿನಹ ಮೊದಲನೇ ಅಸ್ತ್ರವಾಗಬಾರದು. ರಾಜ್ಯ ಸರಕಾರ ಬೇರೆ ಎಲ್ಲಾ ವಿಚಾರಗಳನ್ನು ನೋಡಿ-ಕೊಂಡು ಆ ನಂತರ ಬೇರೆಯವರಿಗೆ ವಹಿಸಿಕೊಡುವ ಪ್ರಯತ್ನವನ್ನು ಸರಕಾರ ಮಾಡಬೇಕು. ಇನ್ನು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ವಿಚಾರದಲ್ಲಿ ಹೇಳುವುದಾದರೆ ಜವಾಹರ್ ರೋಜಗಾರ್ ಯೋಜನೆಯನ್ನು ಹುರುಪಿನಿಂದ ಜಾರಿಗೊಳಿಸುತ್ತೇವೆಂಬ ಉಲ್ಲೇಖ ಇದರಲ್ಲಿ ಇದೆ. ನಾನು ಕಂಡು ಕೊಂಡ ಅನುಭವದ ಪ್ರಕಾರ ಕೆಲವು ಮಂಡಲ ಪಂಚಾಯಿತಿಗಳಲ್ಲಿ ಜವಾಹರ್ ರೋಜಗಾರ್ ಯೋಜನೆ ಕಾರ್ಯಗತವಾಗುತ್ತಿದೆ ಆದರೆ ಎಲ್ಲಾ ಮಂಡಲ ಪಂಚಾಯತಿಗಳಲ್ಲೂ ಕೂಡ ಇದು ಸರಿಯಾಗಿ ಜಾರಿಯಾಗುತ್ತಿಲ್ಲ. ೧೯೯೦–೯೧ನೇ ಸಾಲಿನಲ್ಲಿ ಸುಮಾರು ೮೨೩ ಲಕ್ಷ ಕೆಲಸದ ದಿನಗಳನ್ನು ಸೃಷ್ಟಿಸಲು ಸಾಧ್ಯ ಎಂದ ನಿರೀಕ್ಷಿಸಲಾಗಿದೆ ಎಂದು ಇದರಲ್ಲಿ ಹೇಳಿದ್ದಾರೆ. ನಮ್ಮ ಗ್ರಾಮೀಣ ಜನರಿಗೆ ಈ ಉದ್ಯೋಗ ಸಿಗದಿದ್ದರೆ ತೊಂದರೆಯಾಗುತ್ತದೆ. ಗ್ರಾಮಗಳಲ್ಲಿರುವ ನೊಂದಾಯಿತ ಜನರಿಗೆ ಕೆಲಸ ಸಿಗಬೇಕು ಇವರಿಗೆ ಆ ಕೆಲಸ ಸಿಗಬೇಕಾದುದು ಬಹಳ ಅತ್ಯಗತ್ಯವಾದುದು. ಅದನ್ನು ಬಿಟ್ಟು ಬೇರೆ ಯಾರು ಯಾರೋ ಆ ಕೆಲಸವನ್ನು ಮಾಡಿಕೊಂಡು ಹೋಗುವಂತಹ ಪದ್ಧತಿ ಈಗ ಇದೆ. ಇನ್ನು ಮುಂದೆ ಇದು ಆಗದಂತೆ ತಡೆ ಹಾಕಬೇಕು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ನಿಧಿಗಳ ಸಂಗ್ರಹ ಮತ್ತು ಪ್ರತಿ ವರ್ಷ ಒಂದು ಲಕ್ಷ ಕುಟುಂಬಗಳಿಗೆ ಅನ್ವಯಿಸುವಂತಹ ನೆರವು ನೀಡುವಂತಹ ನಿರ್ಮಲ ಗ್ರಾಮ ಯೋಜನೆ ಈ ಎಲ್ಲಾ ಯೋಜನೆಗಳೂ ಕೂಡ ಅಭಿನಂದಿಸುವಂತಹ ಕಾರ್ಯಕ್ರಮಗಳಾಗಿವೆ. ಇನ್ನು ರೈತರ ಬಡ್ಡಿ ಸಾಲದ ವಿಚಾರವಾಗಿ ಹೇಳುವುದಾದರೆ ಹಿಂದೆ ಸರಕಾರ ಘೋಷಿಸಿದಂತಹ ಬಡ್ಡಿ ಸಹಾಯಧನ ಏನು ಇದೆ ಅದನ್ನು ಪ್ರಾಥಮಿಕ ಸಹಕಾರ ಸಂಘಗಳಿಗೆ ಡಿ. ಸಿ. ಸಿ. ಬ್ಯಾಂಕ್‌ಗಳಿಗೆ ಸಂಸ್ಥೆಗಳಿಗೆ ನೀಡಿ ಆ ಸಂಸ್ಥೆಗಳು ತೊಂದರೆಗೆ ಏನು ಈಡಾಗಿದೆ ಆ ಸಂಸ್ಥೆಗಳ ಹಿತರಕ್ಷಣೆಯನ್ನು ಮಾಡುವಂಥಾದ್ದು ಸರಕಾರದ ಆದ್ಯ ಕರ್ತವ್ಯ. ಅದನ್ನು ಆದಷ್ಟು ಬೇಗ ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಳಕೆದಾರರ ಹಿತರಕ್ಷಣೆ ಬಗ್ಗೆ ಬಹಳ ಮುಂಚೆಯೇ ಕೇಂದ್ರ ಸರಕಾರ ಕಾನೂನನ್ನು ತಂದಿತು ನಮ್ಮ ರಾಜ್ಯ ಸರಕಾರ ಇದರ ಬಗ್ಗೆ ಆಗ ಹೆಚ್ಚಿನ ಆಸಕ್ತಿಯನ್ನು ವಹಿಸಲಿಲ್ಲ. ಪ್ರಥಮವಾಗಿ ಬೇರೆ ಬೇರೆ ವಿಭಾಗದಲ್ಲಿ ಜಿಲ್ಲಾ ಮಟ್ಟದಲ್ಲಿ ವೇದಿಕೆಗಳನ್ನು ರಚಿಸಿ ಈ ಉದ್ದೇಶಕ್ಕಾಗಿ ನೂರು ಲಕ್ಷ ರೂಪಾಯಿಗಳನ್ನು ಒದಗಿಸುವಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಇದರಲ್ಲಿ ಇದೆ. ಇದು ಅಭಿನಂದನೀಯವಾದುದು. ಸ್ಟೈಪೆಂಡರೀ ಪದವೀಧರರ ನೇಮಕದ ಬಗ್ಗೆ ಕೂಡ ನಮ್ಮ ಬಡ್ಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ. ಇದರಲ್ಲಿ ನೇಮಕವಾಗದೇ ಉಳಿದಿರುವವರು ಯಾರು ಇದ್ದಾರೆ ಅಂತಹವರನ್ನು ತ್ವರಿತವಾಗಿ ನಿಯತ ಕಾಲಿಕವಾಗಿ ನೇಮಕಾತಿ ಮಾಡಲಾಗುವುದು. ಎಂದು ಇದರಲ್ಲಿ ಹೇಳಿದ್ದೀರಿ ? ಗುತ್ತಿಗೆ ನೌಕರರು ಮತ್ತು ಅರೆಕಾಲಿಕ ನೌಕರರು ಮುಂತಾದವರು ಇದ್ದಾರೆ ಅವರ ಕಡೆಗೂ ಕೂಡ ಚಿಂತನೆ ಮಾಡುವುದು ಅತ್ಯಂತ ಅವಶ್ಯವಾಗಿದೆ.

ಆಶ್ರಮ ಶಾಲೆಗಳ ವಿದ್ಯಾರ್ಥಿಗಳಿಗೆ, ಮೆಟ್ರಿಕ್ ಪೂರ್ವದ ವಿದ್ಯಾರ್ಥಿನಿಲಯಗಳ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಊಟದ ವೆಚ್ಚವನ್ನು ಏರಿಕೆ ಮಾಡುತ್ತೇವೆಂದು ಹೇಳಿದ್ದೂ ಹೇಳಿದ್ದೇ. ಆದರೆ ಆಗ ಮಾಡಲಿಲ್ಲ. ಅದು ಈ ಸಾರಿಯ ಭಾಷಣದಲ್ಲಿ ಘೋಷಣೆಯಾಗಿದೆ. ಇದು ಒಂದು ಪುಣ್ಯದ ಕಾರ್ಯ. ಈ ಘೋಷಣೆಯನ್ನು ಮಾಡಿರುವುದಕ್ಕಾಗಿ ನಮ್ಮ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ.

ಇನ್ನು ಆಡಳಿತದಲ್ಲಿ ಚುರುಕುತನವನ್ನು ಉಂಟು ಮಾಡುವ ಬಗ್ಗೆ ಹೇಳುವುದಾದರೆ, ಆಡಳಿತದ ಎಲ್ಲಾ ಮಟ್ಟಗಳಲ್ಲಿಯೂ ಬಿಗಿಯಾದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಏರ್ಪಡಿಸಿ ಆಡಳಿತವನ್ನು ಚುರುಕುಗೊಳಿಸಲು ನಾವು ದೃಢ ನಿರ್ಧಾರ ತಳೆದಿದ್ದೇವೆ. ಪ್ರಾಮಾಣಿಕರಿಗೆ ಮತ್ತು ಅರ್ಹರಿಗೆ ಪ್ರೋತ್ಸಾಹ ಮತ್ತು ದಕ್ಷತೆಯಿಂದ ಕೆಲಸ ಮಾಡದವರಿಗೆ ದಂಡನೆ, ಇದು ನಮ್ಮ ಸರ್ಕಾರದ ನೀತಿ ಎಂದು ಹೇಳಿದ್ದೀರಿ, ಇದು ಅಭಿನಂದನೀಯ. ಇದನ್ನು ಎಲ್ಲಾ ಮಟ್ಟದಲ್ಲೂ ಅನ್ವಯಿಸುವಂತೆ ಜಾರಿಗೆ ತರಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಬಹಳ ವಿಶೇಷವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾದುದು ಇದೆ. ಇದಕ್ಕೆ ನಮ್ಮ ಸರ್ಕಾರ ಅಗತ್ಯ ಗಮನವನ್ನು ಕೊಡಬೇಕು. ಇದು ಬಹಳ ಮುಖ್ಯವಾಗಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟದ್ದು. ಏನೆಂದರೆ ಭೂ ಸುಧಾರಣಾ ಕಾಯಿದೆಗೆ ಸಮಗ್ರ ತಿದ್ದುಪಡಿಯನ್ನು ತರಬೇಕಾದುದು ಅತ್ಯಂತ ಅವಶ್ಯಕ. ಹಿಂದೆ ಇದಕ್ಕೆ ಸುಧಾರಣೆಯನ್ನು (ತಿದ್ದುಪಡಿಯನ್ನು) ತಂದಾಗ ಇದ್ದಂಥ ವಾತಾವರಣವೇ ಬೇರೆ, ಈ ದಿವಸ ಇರತಕ್ಕ ವಾತಾವರಣವೇ ಬೇರೆ. ಭೂಸುಧಾರಣಾ ಕಾಯಿದೆಗೆ ಸಮಗ್ರ ತಿದ್ದುಪಡಿಯಾಗಬೇಕು. ಹಿಂದೆ ತಿದ್ದುಪಡಿಯನ್ನು ತಂದಾಗ ಅಂದರೆ ಜನತಾಪಕ್ಷ ಅಧಿಕಾರದಲ್ಲಿದ್ದಾಗ ಅಪೀಲು ಪ್ರಾಧಿಕಾರವನ್ನು ರಚನೆ ಮಾಡಿತ್ತು. ಆದರೆ ಇದನ್ನು ರಚಿಸುವುದು ಸರಿಯಲ್ಲವೆಂದು ಅದೇ ಪಕ್ಷದಲ್ಲಿದ್ದ ಮಾನ್ಯ ಸದಸ್ಯರಾದ ರಮೇಶ್‌ಕುಮಾರ್‌ರವರು ಬಹಳ ಉಗ್ರವಾಗಿ ಪ್ರತಿಭಟಿಸಿ ಇದರಿಂದ ರೈತರಿಗೆ ತೊಂದರೆ ಆಗುತ್ತದೆ, ಈ ಅಪೀಲು ಪ್ರಾಧಿಕಾರವನ್ನು ರದ್ದುಪಡಿಸಬೇಕೆಂದು ಹೇಳಿದರು. ಆದರೂ ಕೂಡ ಆ ಸರ್ಕಾರದವರು ಅವನ್ನು ಒಪ್ಪದೇ ಅವರ ಪಕ್ಷದವರೆಲ್ಲರೂ ಸೇರಿ ಆ ಕಾನೂನನ್ನು ಮಂಜೂರು ಮಾಡಿಕೊಂಡರು. ಇವತ್ತು ರೈತರಿಗೇ ಈ ಅಭಿವೃದ್ಧಿ ಪ್ರಾಧಿಕಾರದಿಂದ ಏನಾಗುತ್ತಿದೆ ಎಂದರೆ ಯಾವ ರೈತ ಒಕ್ಕಲಾಗಿ ಭೂಮಿಯನ್ನು ಉಳುಮೆ ಮಾಡುತ್ತಿದ್ದಾನೆ ಅವನಿಗೆ ಆ ಭೂಮಿಯ ಹಕ್ಕು ಸಿಗುತ್ತಿಲ್ಲ, ಒಡೆತನ ಸಿಕ್ಕುತ್ತಿಲ್ಲ. ಅವನಿಗೆ ಆ ಭೂಮಿಯ ಒಡೆತನವನ್ನು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ದಾಖಲೆಯಲ್ಲಿ ಅವನಿಗೆ ಹಕ್ಕು ಇರಲಿ, ಇಲ್ಲದಿರಲಿ. ಯಾರು ಪರಂಪರೆಯಿಂದಲೂ ಆ ಜಮೀನನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೋ ಅವರಿಗೆ ಅದನ್ನು ಕೊಡಬೇಕು. ಹೊಸ ಅಪೀಲು ಪ್ರಾಧಿಕಾರದ ಪ್ರಕಾರ ನಡೆದಂಥ ಒಂದೆರಡು ಪ್ರಕರಣಗಳನ್ನು ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಕೇವಲ ಸಿವಿಲ್ ಪ್ರೊಸೀಜರ್ ಕೋಡಿನ ಪ್ರಕಾರ ದಾಖಲೆಯ ಆಧಾರದಮೇಲೆ ಭೂಮಿಯ ಹಕ್ಕುಪತ್ರಗಳನ್ನು ನೀಡಲಾಗುತ್ತಿತ್ತು. ಎರಡೆರಡು ಸಾರಿ ಭೂನ್ಯಾಯಮಂಡಲಿಯಲ್ಲಿ ನಾನೇ ಆ ಭೂಮಿಯನ್ನು ಉಳುಮೆ ಮಾಡುವವನು, ನಾನೇ ಒಕ್ಕಲು ಎಂದು ಸಾಬೀತು ಮಾಡಿಕೊಂಡು, ಸ್ಥಳಪರಿಶೀಲನೆ ಆಗಿ, ಆ ಜಮೀನಿನ ಧಣಿ ತನ್ನ ಒಪ್ಪಿಗೆಯನ್ನು ಕೊಟ್ಟಿದ್ದರೂ ಕೂಡ ಇನ್ನೇನು ಆತನಿಗೆ ಆ ಭೂಮಿಯ ಹಕ್ಕನ್ನು ಕೊಡಬೇಕೆಂಬ ಸಂದರ್ಭದಲ್ಲಿ ಅಂದರೆ ಕೊನೆಯ ಘಳಿಗೆಯಲ್ಲಿ ಯಾವುದೋ ದಾಖಲೆಗಳಿಲ್ಲ, ರಸೀದಿಗಳಿಲ್ಲ ಎಂಬ ಕಾರಣವನ್ನೊಡ್ಡಿ ಅವನಿಗೆ ಆ ಜಮೀನನ್ನು ಕೊಡುವುದಕ್ಕಾಗುವುದಿಲ್ಲವೆಂದು ಜಡ್ಜ್‌ಮೆಂಟ್ ಆಗಿದೆ. ಕೇವಲ ಒಂದೆರಡಲ್ಲ, ಇಂಥ ನೂರಾರು ಜಡ್ಜ್‌ಮೆಂಟ್‌ಗಳಾಗಿವೆ. ಈ ಬಗ್ಗೆ ನಾನು ಅಂದಿನ ಮುಖ್ಯಮಂತ್ರಿಗಳಿಗೆ, ಯೋಜನಾ ಮಂತ್ರಿಗಳಿಗೆ, ಕಂದಾಯ ಮಂತ್ರಿಗಳಿಗೆ ಹೇಳಿದ್ದೇನೆ. ಈ ಅನ್ಯಾಯವನ್ನು ತಡೆಗಟ್ಟಬೇಕು. ಅಪೀಲು ಪ್ರಾಧಿಕಾರವನ್ನು ರದ್ದುಮಾಡಬೇಕಾದ ಪ್ರಸಂಗವಿರುವುದರಿಂದ, ಇದಕ್ಕಾಗಿ ಒಬ್ಬ ತಾತ್ಕಾಲಿಕ ಸದಸ್ಯರನ್ನು ನೇಮಕ ಮಾಡಬೇಕು. ಒಬ್ಬ ಡೆಪ್ಯೂಟಿ ಕಮಿಷನರ್‌ರವರನ್ನು ಅಲ್ಲಿಗೆ ವರ್ಗಾಯಿಸಿದರೆ ಈ ತೊಂದರೆ ಸದ್ಯಕ್ಕೆ ತಪ್ಪುತ್ತದೆ. ಅನಂತರ ಇದನ್ನು ಪರಿಶೀಲಿಸಿ ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ ಎಂದು ನಾನು ಹೇಳಿದೆ. ಆದರೆ ಅವರಿಂದ ಏನೂ ಪ್ರಯೋಜನವಾಗಲಿಲ್ಲ. ಇವೊತ್ತು ನೂರಾರು ಜನರಿಗೆ ಈ ಕಾನೂನಿನಿಂದ ತೊಂದರೆ ಆಗುತ್ತಿದೆ. ಇದನ್ನು ಸರ್ಕಾರ ಗಮನಿಸಬೇಕು.

ಇನ್ನೊಂದು ಬಹಳ ಪ್ರಮುಖ ವಿಚಾರವೆಂದರೆ ಜಮೀನನ್ನು ಆಕ್ರಮಣ ಮಾಡಿದ ಬಡವರಿಗೆ, ಮತ್ತು ಕುಂಕೀ ಜಾಗಗಳನ್ನು ಇಂಪ್ರೂವ್ ಮಾಡಿದ ಜನರಿಗೆ ಆಯಾಯ ಜಮೀನುಗಳನ್ನು ಅಂದರೆ ಅವುಗಳ ಒಡೆತನವನ್ನು ಅವರಿಗೇ ಕೊಡತಕ್ಕ ಕೆಲಸ ಮಾಡಬೇಕು. ಈಗ ನಮ್ಮ ರಾಷ್ಟ್ರದಲ್ಲಿ ಕೇಂದ್ರ ಸರ್ಕಾರದವರು ರಾಷ್ಟ್ರೀಯ ವಸತಿ ಬ್ಯಾಂಕ್ ಎಂದು ಮಾಡಿ ರಾಷ್ಟ್ರೀಯ ಹೌಸಿಂಗ್ ಪಾಲಿಸಿ ಎಂದು ಮಾಡಿದ್ದಾರೆ. ಅದೇರೀತಿ ನಮ್ಮ ರಾಜ್ಯ ಸರ್ಕಾರದವರೂ ಇಲ್ಲಿ ಮಾಡಬೇಕು. ಮನೆಗಳನ್ನು ಕಟ್ಟಿಸಿಕೊಳ್ಳುವವರಿಗೆ ಅನುಕೂಲವಾಗಬೇಕು. ಬೆಲೆಗಳು ದಿನೇ ದಿನೇ ತೀವ್ರವಾಗಿ ಏರುತ್ತಿರುವುದರಿಂದ ಈ ಯೋಜನೆ ನಮ್ಮ ರಾಜ್ಯದಲ್ಲಿ ವ್ಯಾಪಕ ರೀತಿಯಲ್ಲಿ ಜಾರಿಗೆ ಬರಬೇಕು. ಹಿಂದಿನ ಸರ್ಕಾರದ ನೀತಿಯ ಪ್ರಕಾರ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಭೂಮಿಯನ್ನು ಕೊಡತಕ್ಕ ಸಂದರ್ಭದಲ್ಲಿ ಯಾವುವೋ ಕೆಲವು ಗೃಹ ನಿರ್ಮಾಣ ಸಹಕಾರ ಸಂಘಗಳು ತಪ್ಪುಮಾಡಿದುವು ಎಂದು ಎಲ್ಲಾ ಗೃಹ ನಿರ್ಮಾಣ ಸಹಕಾರ ಸಂಘಗಳನ್ನೂ ಒಂದೇ ದಂಡದಿಂದ ಅಳೆದರು. ಇದು ಒಾದು ರೀತಿಯ ದುರಾ

ದೃಷ್ಟವೇ ಸರಿ. ತಪ್ಪು ಮಾಡಿದವರಿಗೆ ಏನು ಬೇಕಾದರೂ ಶಿಕ್ಷೆಯನ್ನು ಕೊಡಿ. ಆದರೆ ತಪ್ಪನ್ನು ಮಾಡದೇ ಇರತಕ್ಕ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ತೊಂದರೆ ಆಗತಕ್ಕ ವಿಧಿಯನ್ನು ಮುಂದುವರಿಸುವುದು ಸರಿಯಲ್ಲ. ಈ ದೋಷವನ್ನು ಸರಿಪಡಿಸಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇದೇ ರೀತಿ ಗೃಹ ನಿರ್ಮಾಣದ ಸಲುವಾಗಿ ಸ್ಟ್ಯಾಂಪ್ ಡ್ಯೂಟಿಯಲ್ಲೂ ಕೂಡ ಈಗ್ಗೆ ೭-೮ ವರ್ಷಗಳ ಹಿಂದಿನ ಸರ್ಕಾರ ಸಾಕಷ್ಟು ವಿನಾಯಿತಿಯನ್ನು ಕೊಟ್ಟಿತ್ತು. ಅದೇ ರೀತಿ ಈಗಲೂ ರಿಯಾಯಿತಿಯನ್ನು ಮುಂದುವರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೆಲವೊಂದು ವಿಚಾರಗಳನ್ನು ಹೇಳಬೇಕಾದರೆ ಈ ಪುರಸಭೆಗಳ ಚುನಾವಣೆಯನ್ನು ಸರ್ಕಾರದವರು ಘೋಷಣೆ ಮಾಡಿದ್ದಾರೆ. ಆ ಘೋಷಣೆ ಸರಿಯಾಗಿ ನಡೆಯಬೇಕೆನ್ನುವುದು ನನ್ನ ಒಂದು ವಿನಂತಿ. ಅದೇ ರೀತಿಯಲ್ಲಿ ಕೆಲವು ಪುರಸಭೆಗಳ ಬಗ್ಗೆ ಇವತ್ತು ಕೆಲವೊಂದು ಪ್ರಶ್ನೆಗಳನ್ನು ಹಾಕಿದ್ದೆ, ಆ ವಿಚಾರದಲ್ಲಿ ಉತ್ತರ ಬಂದಾಗ ಸಮರ್ಪಕವಾದ ಉತ್ತರ ಬರಲಿಲ್ಲವೆಂದು ನನಗನ್ನಿಸುತ್ತದೆ. ಹಿಂದೆ ಯಾವ ಮುನಿಸಿಪಾಲಿಟಿಗಳಲ್ಲಿ ೧೦ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇದೆಯೋ ಅದನ್ನು ಮಂಡಲ್‌ಗಳಾಗಿ ಪರಿವರ್ತನೆ ಮಾಡಿದರು. ಅದೇ ಮಂಡಲ್‌ಗಳಾಗಿ ಫಾರಮ್ ಮಾಡುವಾಗ ಹನ್ನೆರಡೂವರೆ ಸಾವಿರ ಜನಸಂಖ್ಯೆ ಮಾಡಿದರು. ಇದು ಒಂದೇ ಸರ್ಕಾರದ ಎರಡು ದ್ವಿಮುಖ ನೀತಿ. ಮಂಡಲ್‌ಗಳನ್ನಾಗಿ ಪರಿವರ್ತನೆ ಮಾಡುವಾಗ ಹತ್ತು ಸಾವಿರ ಜನಸಂಖ್ಯೆ ಸರಿಯಲ್ಲವೆಂದು ಹೇಳುವಾಗ ಹಿಂದಿನ ಸರ್ಕಾರ ಒಪ್ಪಿಕೊಂಡಿತ್ತು ಆದರೆ ಇವತ್ತು ಸರ್ಕಾರದಿಂದ ಉತ್ತರ ಬಂದಾಗ ಮತ್ತೊಂದು ರೀತಿಯಲ್ಲಿ ಉತ್ತರ ಬರುತ್ತಿದೆ. ಪುನರ್ ಪರಿಶೀಲನೆ ಮಾಡುವ ಕೆಲಸ ಏನುಇದೆ ಅದನ್ನು ಮಾಡಲೇಬೇಕು. ಹಿಂದಿನ ಸರ್ಕಾರ ಮಾಡಿದತಪ್ಪು ಯಾವುದಿದೆಅದನ್ನು ಸರಿಪಡಿಸಬೇಕೆಂದು ನಾನು ಹೇಳಬಯಸುತ್ತೇನೆ. ಆದರೆಚುನಾವಣೆಯ ಮಾತನ್ನು ಆಡುವಾಗ ಟಿ.ಎ.ಪಿ.ಎಂ.ಸಿ.ಗಳಿಗೆ ಬಹಳ ದಿವಸಗಳಿಂದಲೂ ಚುನಾವಣೆಗಳು ಆಗಿಲ್ಲ. ಮುಂದೆ ಹೋಗುತ್ತಿವೆ. ಕೃಷಿ ಉತ್ಪನ್ನ ಮಾರ್ಕೆಟಿಂಗ್ ಸೊಸೈಟಿಗಳಿಗೆ ಚುನಾವಣೆಗಳನ್ನು ಕೂಡಲೇ ಮಾಡಬೇಕು. ಅದು ಮಳೆಗಾಲ ಬರುವುದರೊಳಗೆ ಸಹಕಾರಿ ಸಂಸ್ಥೆಗಳಿಗೆ ಚುನಾವಣೆಗಳನ್ನು ಮಾಡಬೇಕು. ಮೇ ನಂತರ ಮಾಡುತ್ತೇವೆ ಎನ್ನುವ ಮಾತು ಬಂದಿದೆ. ಇದರಲ್ಲಿ ಒಂದು ಸೂಚನೆ ಕೊಡಬಯಸುತ್ತೇನೆ. ಏಕ ಕಾಲದಲ್ಲಿ ಗ್ರಾಮಮಟ್ಟದಿಂದ ರಾಜ್ಯಮಟ್ಟದವರೆಗೆ ಚುನಾವಣೆಗಳನ್ನು ಮಾಡುವುದರಲ್ಲಿ ಕೆಲವೊಂದು ತೊಂದರೆ ಬರುತ್ತವೆ. ಯಾರು ಗ್ರಾಮ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ಬರುತ್ತಾರೋ ಅವರು ನಿಜವಾದ ಪ್ರತಿನಿಧಿಗಳಾಗಿರದೆ ಸೋತುಹೋದ ಪ್ರತಿನಿಧಿಗಳಾಗಿರುತ್ತಾರೆ. ಅವರು ಮುಂದಿನ ಮಂಡಲ್‌ಗಳಲ್ಲಿ ಪ್ರತಿನಿಧಿಗಳಾಗಿ ಬಂದು ಆ ವರ್ಗದ ಆಡಳಿತವನ್ನು ಹಿಡಿದುಕೊಳ್ಳುತ್ತಾರೆ. ಇದನ್ನು ನಾನು ರಾಜಕೀಯ ದೃಷ್ಟಿಯಿಂದ ಖಂಡಿತವಾಗಿಯೂ ಹೇಳುತ್ತಿಲ್ಲ, ಸಮಗ್ರವಾಗಿ ಆ ಸಹಕಾರಿ ಸಂಸ್ಥೆಗಳಲ್ಲಿ ಗ್ರಾಮ ಮಟ್ಟದಲ್ಲಿ ಯಾರು ಆಯ್ಕೆಯಾಗಿ ಬರುತ್ತಾರೆ. ಆ ಆಡಳಿತ ಮಂಡಲಿಯ ಪ್ರತಿನಿಧಿಗಳು ಡಿ.ಸಿ.ಸಿ. ಬ್ಯಾಂಕ್ ಅಥವಾ ಟಿ ಎ.ಪಿ.ಸಿ.ಎಂ. ಸೊಸೈಟಿಗಳಿಗೆ ಹೋಗದೆ ಅಲ್ಲಿ ಸೋತುಹೋದ ಪ್ರತಿನಿಧಿಗಳು ಹಿಂದಿನ ಆಧಾರದ ಮೇಲೆ ಪ್ರತಿನಿಧಿಗಳಾಗಿ ಬಂದು ಅವರ ಒಂದು ಮಂಡಲಿಗಳು ರಚಿತವಾಗುತ್ತವೆ. ಅದಕ್ಕೋಸ್ಕರವಾಗಿ ಒಂದೆರಡು ಸಲ ಮಾನ್ಯ ರಂಗನಾಥ್‌ರವರು ಮತ್ತು ಮಾನ್ಯ ಜಾಲಪ್ಪನವರು ಇದ್ದಂಥ ಕಾಲದಲ್ಲಿ ಹಾಕಿದ ಪರಿಪಾಠದ ಒಂದು ಉದಾಹರಣೆ. ಗ್ರಾಮ ಮಟ್ಟದ ಸಂಘಗಳ ಒಂದು ಮಹಾ ಸಭೆ ಮೊದಲ ತಿಂಗಳಲ್ಲಿ ತಾಲ್ಲೂಕು ಮಟ್ಟದ್ದು, ಅದರ ನಂತರ ಜಿಲ್ಲಾಮಟ್ಟದ್ದು, ಅದರ ನಂತರ ರಾಜ್ಯಮಟ್ಟದ್ದು ಆ ಬಳಿಕ ಆ ರೀತಿ ಎಲ್ಲಿ ಗಮನದಲ್ಲಿಟ್ಟುಕೊಂಡು ಹೋದರೆ ಪರಿಪೂರ್ಣವಾದ ಕ್ರಮ ಬದ್ಧವಾದ ಪ್ರಜಾಸತ್ತಾತ್ಮಕ ಆಡಳಿತ ಮಂಡಲಿಗಳು ಬರಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಸಹಕಾರಿ ಸಂಸ್ಥೆಗಳಿಗೆ ನೇಮಕ ಮಾಡಬಾರದೆಂದು ಒಂದು ಬ್ಯಾನ್ ಇದೆ. ಸಹಕಾರಿ ಸಂಸ್ಥೆಗಳಿಗೆ ನೇಮಕಾತಿಗಳನ್ನು ಜೂನ್ ಎಂಡ್‌ವರೆಗೂ ಮಾಡಬಾರದೆಂದು ಬ್ಯಾನ್‌ನ್ನು ಕಳೆದ ವರ್ಷವೇ ಕೊಟ್ಟು ಬಿಟ್ಟರು ಈಗ ಕೇಳಿದರೆ ಹೇಳುತ್ತಾರೆ ಆರ್ಥಿಕ ಸ್ಥಿತಿಯಿಂದಾಗಿ ಬಹಳ ತೊಂದರೆಯಾಗುತ್ತದೆ ಎಕಾನಮಿ ಆರ್ಡರ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಯಾವ ಎಕಾನಮಿ. ಕೆಲವು ಸಂಸ್ಥೆಗಳಿಗೆ ಸರ್ಕಾರದವರು ಒಂದು ಕಾಸು ಕೂಡ ಕೊಡುತ್ತಿಲ್ಲ. ಅವರ ಸಂಪನ್ಮೂಲಗಳ ಆಧಾರದ ಮೇಲೆ ಅವರು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಆ ಸಂಸ್ಥೆಗಳು ಇವತ್ತು ರಿಕವರಿ ಮಾಡಬೇಕಾಗುತ್ತದೆ. ಕೆಲವು ಸಂಸ್ಥೆಗಳಲ್ಲಿ ಇವತ್ತು ಶೇಕಡ ೫೦ರಷ್ಟು ಸಿಬ್ಬಂದಿ ಇಲ್ಲ. ಅದಕ್ಕೋಸ್ಕರವಾಗಿ ಸಹಕಾರಿ ಸಂಸ್ಥೆಗಳಲ್ಲಿ ಎಲ್ಲೆಲ್ಲಿ ಸಿಬ್ಬಂದಿ ಇಲ್ಲವೋ ಅದರ ಕುರಿತು ಬ್ಲಾಂಕೆಟ್ ಬ್ಯಾನ್ ಮಾಡುವುದಕ್ಕೆ ಬದಲಾಗಿ ಪರಿಶೀಲನೆ ಮಾಡಿ ಆ ನೇಮಕಕ್ಕೆ ಪರ್ಮಿಷನ್ ಕೊಡುವಂಥದ್ದು ಅಗತ್ಯತೆ ಇದೆ ಎಂದು ನಾನು ಹೇಳಬಯಸುತ್ತೇನೆ.

ವೃತ್ತಿ ತೆರಿಗೆಯ ಬಗ್ಗೆ ಹೇಳಬೇಕಾದರೆ ಈ ವೃತ್ತಿ ತೆರಿಗೆಯನ್ನು ಹಾಕುವಂಥ ಒಂದು ವಿಚಾರದಲ್ಲಿ ಅನೇಕ ಸಣ್ಣ ಮಟ್ಟದ ನೌಕರರು ಹೇಳಿದ ವಿಚಾರವನ್ನು ಕೇಳಿದೆ. ಜವಾನರಿಗೂ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೂ ಮತ್ತು ಇತರರಿಗೂ ಸಹ ಇದರ ಹೊರೆ ಬೀಳುತ್ತಿದೆ. ಸರ್ಕಾರದವರು ಅಂತಿಮ ನಿರ್ಣಯವನ್ನು ಮಾಡುವಾಗ ಯೋಗ್ಯ ರೀತಿಯಲ್ಲಿ ಮರುಪರೀಶಿಲನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ಉಲ್ಲೇಖನೆ ಇದೆ. ತಾಲ್ಲೂಕುಗಳು ಮತ್ತು ಜಿಲ್ಲೆಗಳ ಪುನರ್‌ರಚನೆಯಾಗಬೇಕು. ಹಿಂದಿನ ಸರ್ಕಾರ ಪ್ರತಿ ಎಲೆಕ್ಷನ್ ಬಂದಾಗಲೂ ಒಂದೊಂದು ಆಯೋಗವನ್ನು ರಚನೆ ಮಾಡಿತು. ಆ ಆಯೋಗದ ಪುಸ್ತಕಗಳನ್ನು ಕಟ್ಟಿಟ್ಟಿದ್ದಾರೆ. ಅದರ ಕೆಲಸ ಅಲ್ಲಿಗೆ ಮುಗಿಯಿತು. ಆದರೆ ನಿಜವಾಗಿಯೂ ಕೂಡ ಏನಾಗಬೇಕಾಗಿದೆ ಎಂದರೆ ಜಿಲ್ಲಾ ಮಟ್ಟದಿಂದ ತಾಲ್ಲೂಕುಗಳಿಗೆ ಕೇಂದ್ರದಿಂದ ಬಂದ ಹಣಕಾಸಿನ ನೆರವು ನೇರವಾಗಿ ತಾಲ್ಲೂಕುಗಳಿಗೆ ಸಿಗುವಂತೆ ವ್ಯವಸ್ಥೆಯಾಗಬೇಕೆಂದು ಕೇಳಿದ್ದೆವು. ಹೀಗಾದರೆ ಇದು ಬಹಳ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ನೀವಾದರೂ ಕೈಗೆ ಎತ್ತಿಕೊಂಡು ಮಾಡಬೇಕು. ಹಿಂದಿನ ಸರ್ಕಾರ ಮಾಡಲಿಲ್ಲ. ಅದನ್ನು ಈಗ ಮಾಡಿದರೆ ಆ ಕೀರ್ತಿ ನಿಮಗೆ ಬರುತ್ತದೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಸೇಂದಿ ಮಾರಾಟದ ನಿರ್ಬಂಧದ ಪ್ರಸ್ತಾವವಿದೆ. ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ತೆಗೆದು ಮಾರುವಂತಹ ಪ್ರಧಾನ ಕಸಬು ಇರುವಂತಹ ಒಂದು ವರ್ಗ ಇದೆ. ಅವರಿಗೆ ಬಹಳ ತೊಂದರೆಯಾಗಿದೆ. ನಾವು ಯಾವ ಕಂಟ್ರಾಕ್ಟರ್ ಪರವಾಗಿ ಮಾತನಾಡುತ್ತಿಲ್ಲ ಅವರಿಗೆ ಬೇರೆ ಉದ್ಯೋಗ ಗೊತ್ತಿಲ್ಲ. ಮರದಿಂದ ಕೆಳಗಿಳಿಸಿ ಸೇಂದಿಯನ್ನು ತೆಗೆಯುತ್ತಾರೆ. ಕೆಳಗಿಳಿಸಿ ನೇರವಾಗಿ ಅಂಗಡಿಗಳಿಗೆ ಮಾರುತ್ತಾರೆ. ಇದರಲ್ಲಿ ಒಂದೇ ಒಂದು ನೀತಿ ಏನೆಂದರೆ ಯಾವುದೊ ಒಂದು ದುರ್ಮಿಶ್ರಣ ಬಳಸಿ ಅಕ್ರಮ ಸೇಂದಿಯನ್ನು ಮಾಡಿ ಆರೋಗ್ಯ ಹಾಳಾಗುತ್ತದೆ ಎನ್ನುವ ಪ್ರಸ್ತಾಪವಿದೆ. ನಮ್ಮ ಜಿಲ್ಲೆಯ ಸಣ್ಣಪುಟ್ಟ ಜನರು ಸೇಂದಿ ವ್ಯವಹಾರವನ್ನು ಹಿಂದೆ ಕೂಡ ಮಾಡುತ್ತಿದ್ದರು. ದೊಡ್ಡ ದೊಡ್ಡ ವ್ಯವಸ್ಥೆ ಇರಲಿಲ್ಲ. ಇದೇ ರೀತಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದಿಸಿಕೊಂಡಾಗ ಇದಕ್ಕೆ ಏನಾದರೂ ಬದಲಿ ವ್ಯವಸ್ಥೆಯನ್ನು ಮಾಡುತ್ತೇವೆಂದು ಸೂಚನೆ ಕೊಟ್ಟಿದ್ದಾರೆ. ಇದರಿಂದ ಸಹಸ್ರಾರು ಜನರ ಹೊಟ್ಟೆಗೆ ಪೆಟ್ಟು ಕೊಡುವಂತೆ ಆಗಬಾರದು. ಅದಕ್ಕೋಸ್ಕರ ಬದಲಿ ನೀತಿಯನ್ನು ಉಪಯೋಗಿಸಿಕೊಂಡು ಸೇಂದಿ ತೆಗೆಯುವಂತಹ ಜನ ತಮ್ಮ ಉದ್ಯೋಗವನ್ನು ಕಳೆದುಕೊಳ್ಳದ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರ ಪುನರ್‌ವಸತಿಗಾಗಿ ಯಾವುದಾದರೂ ಯೋಜನೆಯನ್ನು ರೂಪಿಸಬೇಕು. ಹಿಂದೆ ನೀರಾ ಮಾಡಿ, ತೆಂಗು ಅಥವಾ ತಾಳೆ, ಬೆಲ್ಲ ತಯಾರಿಸಿ ಮಾರುವಂತಹ ಯೋಜನೆ ಇತ್ತು.

ಶ್ರೀ ಕೆ ಶಿವಮೂರ್ತಿ.—ಸೌತ್ ಕೆನರಾಕ್ಕೆ ಮಾತ್ರವೇ ಅಥವಾ ಇಡೀ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತೀರಾ ? ಹೆಂಡ ಇಳಿಸುವವರ ಬಗ್ಗೆ ಮಾತನಾಡುತ್ತೀರಾ ಅಥವಾ ಕುಡಿಯುವವರ ಬಗ್ಗೆ ಮಾತನಾಡುತ್ತೀರಾ ?

ಶ್ರೀ ಜಿ. ಎಸ್. ಆಚಾರ್.—ತಾವು ಪ್ರತ್ಯೇಕ ಸೂಚನೆ ಕೊಡಬಹುದು. ಕರ್ನಾಟಕ ರಾಜ್ಯದ ಸೇಂದಿ ವ್ಯವಹಾರ ನನಗೆ ಗೊತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರ ಪರವಾಗಿ ನಾವು ಸೇರಿ ಮಾತನಾಡಿಕೊಂಡು ಈ ವಿಚಾರವನ್ನು ರೆಪ್ರಸೆಂಟ್ ಮಾಡುವುದರಿಂದ ಇದನ್ನು ಹೇಳುತ್ತಿದ್ದೇವೆ. ಬೇರೆಯವರಿಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಈ ಬಜೆಟ್ ವಾಸ್ತವಿಕವಾದ, ಆಶಾದಾಯಕವಾದ ದೂರದರ್ಶಿತ್ವ ಇರುವ ಬಜೆಟ್. ಆದ್ದರಿಂದ ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಾಟೀಲ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಈ ಒಂದು ಆಯವ್ಯಯ ಪಟ್ಟಿಯನ್ನು ಮಾನ್ಯ ಶ್ರೀ ರಾಜಶೇಖರ ಮೂರ್ತಿಯವರು ಹಣಕಾಸಿನ ಸಚಿವರಾಗಿ ಸಭೆಯಲ್ಲಿ ಮಂಡಿಸಿದ್ದಾರೆ. ವೈಯಕ್ತಿಕವಾಗಿ ಅವರು ಬಹಳ ಚಾರಿತ್ರ್ಯವನ್ನು ಹೊಂದಿರತಕ್ಕವರು. ಆದರೆ ಬಹಳ ದಿವಸಗಳ ನಂತರ ನಮ್ಮ ರಾಜ್ಯದ ಸಚಿವರಾಗಿ, ಅದರಲ್ಲೂ ಹಣಕಾಸಿನ ಸಚಿವರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಅವರದು ಒಂದು ನೀತಿ, ಅವರ ಸಮಗ್ರವಾದ ಆಯವ್ಯಯವನ್ನು ನೋಡಿದಾಗ ಅವರ ಅಕ್ಕಪಕ್ಕದ ಜನ ನೋಡಿಲ್ಲ, ಕೆಳಗಡೆ ಇರತಕ್ಕ ಜನ ನೋಡಿಲ್ಲ. ಅವರಿಗೆ ಸಾಮಾನ್ಯ ಜನರು ಯಾರಿದ್ದಾರೆ ಅವರ ಬಗ್ಗೆ ಮಾನ್ಯ ಸಚಿವರಿಗೆ ಕಳಕಳಿ ಇಲ್ಲ. ತಮ್ಮ ಸಮಗ್ರ ಆಯವ್ಯಯವನ್ನು ತೋರಿಸಿದ್ದಾರೆ. ಬಹುಶಃ ಆಯವ್ಯಯ ಪಟ್ಟಿಯನ್ನು ಈ ಸಭೆಗೆ ಮಂಡಿಸುವುದಕ್ಕೆ ಮುಂಚಿತವಾಗಿ ಬಹಳ ದೊಡ್ಡ ಸರ್ಕಸ್ ಮಾಡಿ ಬಹಳ ಕಷ್ಟದಲ್ಲಿ ಈ ಆಯವ್ಯಯವನ್ನು

ಮಂಡಿಸಿದ್ದಾರೆ. ರಾಜ್ಯದಲ್ಲಿ ಅಬಕಾರಿ ಬಗ್ಗೆ ಹೇಳುವಾಗ ಹೆಂಡ ಮಾರಾಟವನ್ನು ಸಮಗ್ರವಾಗಿ ಹಂತ ಹಂತವಾಗಿ ರದ್ದು ಮಾಡುತ್ತೇವೆಂದು ತಿಳಿಸಿದ್ದಾರೆ. ಈ ರೀತಿ ಸ್ವಲ್ಪ ಸ್ವಲ್ಪ ರದ್ದು ಮಾಡುತ್ತೇವೆಂದು ಹೇಳುವುದಾಗಲಿ ಅಥವಾ ಇದರಿಂದ ಲಾಭ ಮಾಡುತ್ತೇವೆಂದು ಹೇಳುವುದಾಗಲಿ, ಇದರಿಂದ ಬೇರೆ ಮದ್ಯಸಾರಕ್ಕೆ ಬೆಂಬಲ ಕೊಡುತ್ತೇವೆಂದು ಹೇಳುವುದಾಗಲಿ, ಸರ್ಕಾರ ಯೋಚನೆ ಮಾಡಿದ್ದರೆ ಸಮಗ್ರವಾದ ಪಾನನಿರೋಧವನ್ನು ಜಾರಿಗೆ ತನ್ನಿ ಎಂದು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಹೆಂಡವನ್ನು ನಿಷೇಧಿಸಿದ್ದೇವೆಂದು ಹೇಳುವುದರಿಂದ ಇದು ಒಂದು ನೀತಿ ಆಗುವುದಿಲ್ಲ. ಹೆಂಡವನ್ನು ನಿಲ್ಲಿಸಿ ಬೇರೆ ಮದ್ಯವನ್ನು ಮಾರಿ ಅದರಿಂದ ಹಣ ಸಂಪಾದನೆ ಮಾಡುತ್ತೇವೆಂದು ಹೇಳುವ ಸರ್ಕಾರದ ನೀತಿ ಏನಿದೆ ಇದು ಸರಿಯಾದುದಲ್ಲ. ನೀವು ಧೈರ್ಯ ಮಾಡಿ ಇದು ನಿಮ್ಮ ನೀತಿ ಎಂಬ ತೀರ್ಮಾನ ತೆಗೆದುಕೊಂಡು ಇಡೀ ರಾಜ್ಯವಲ್ಲಿ ಸಮಗ್ರವಾಗಿ ಪಾನ ನಿರೋಧವನ್ನು ಜಾರಿಗೆ ತಂದಿದ್ದೇವೆಂದು ಈ ಸಭೆಯಲ್ಲಿ ಘೋಷಣೆ ಮಾಡಿದರೆ ಅದಕ್ಕೆ ಒಂದು ನೀತಿ ತತ್ವದ ತಳಹದಿ ಬರುತ್ತದೆ. ಅದನ್ನು ಬಿಟ್ಟು ಹೆಂಡ ನಿಲ್ಲಿಸಿದ್ದೇವೆ, ಸಾರಾಯಿ ಮಾಡುತ್ತೇವೆ, ರಂ ಮಾಡುತ್ತೇವೆ, ಅವರಿಂದ ಜಿನ್ ಮಾಡುತ್ತೇವೆಂದು ಒಂದೊಂದು ಲೀಟರ್‌ಗೆ ಹತ್ತಿಪ್ಪತ್ತು ರೂಪಾಯಿ ಜಾಸ್ತಿ ಮಾಡಿಕೊಂಡು ಹೋಗುವುದು ಸರಿಯಾದ ನೀತಿಯಲ್ಲ, ಸಮಗ್ರವಾಗಿ ಕುಡಿತವನ್ನು ನಿಲ್ಲಿಸುತ್ತೇವೆಂಬ ಶಕ್ತಿ ಸರ್ಕಾರದಲ್ಲಿದ್ದರೆ ಹೇಳಿ. ಕಲುಷಿತ ಹೆಂಡವನ್ನು ಕುಡಿದು ಜನರು ಅನಾರೋಗ್ಯಕ್ಕೆ ಈಡಾಗುತ್ತಾರೆಂಬುದು ನಿಜ. ಆದರೆ ಅವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ರಂ, ಜಿನ್, ಹೆಂಡ ಯಾವುದೇ ಆಗಲಿ ಅದರಲ್ಲಿ ಕಲುಷಿತ ಇದ್ದೇ ಇರುತ್ತದೆ. ಸ್ಪಿರಿಟ್ ಕುಡಿದು ಅನೇಕರು ಸಾಯುತ್ತಾರೆ. ಕಡಿಮೆ ದರದಲ್ಲಿ ಬೀರ್ ಸಿಗಲಿಲ್ಲವೆಂದರೆ ಚೀಪ್‌ಗೇಟ್‌ನಲ್ಲಿ ಸಿಗುವ ಕಳ್ಳಬಟ್ಟಿಯನ್ನು ಕುಡಿಯಲು ಜನರು ಹೋಗುತ್ತಾರೆ. ಇಡೀ ರಾಜ್ಯದಲ್ಲಿ ಕಳ್ಳತನದಲ್ಲಿ ಈ ವ್ಯಾಪಾರ ನಡೆಯುತ್ತಿದೆ. ೬೦ ಕೋಟಿ ರೂಪಾಯಿ ಲಾಸ್ ಆಗುವುದನ್ನು ತುಂಬುವುದಕ್ಕೆ ಏನೇನು ಮಾಡಿದ್ದೇವೆಂದು ಹೇಳುತ್ತಿದ್ದೀರಿ. ನಾನು ಇದನ್ನೇ ಪ್ರಾರಂಭದಲ್ಲಿ ಹೇಳಿದ್ದನ್ನು ನೋಡಿ ನಿಮಗೆ ವಾಟಾಳ್ ನಾಗರಾಜ್ ಅಬ್ಕಾರಿ ಬಗ್ಗೆ ಇಷ್ಟೊಂದು ಮಾತನಾಡುತ್ತಾರೆಯೋ ಎಂದು ಆಶ್ಚರ್ಯವಾಗಬಹುದು. ನಾನು ನನ್ನ ಜೀವನದಲ್ಲಿ ಎಂದೂ ಕುಡಿದಿಲ್ಲ. ನಮ್ಮ ಸ್ನೇಹಿತರು ಅನೇಕರು ಕಾಂಗ್ರೆಸ್ಸಿನಲ್ಲಿದ್ದಾರೆ, ಅವರಿಗೆ ನನ್ನ ಬಗ್ಗೆ ಗೊತ್ತು.

ಒಬ್ಬ ಮಾನ್ಯ ಸದಸ್ಯರು.—ಕುಡಿದಿಲ್ಲವೆಂದು ಹೇಳುತ್ತೀರಿ. ಆದರೆ ಕುಡಿದ ಹಾಗೆ ಮಾತನಾಡುತ್ತೀರಲ್ಲ, ಏನು ಸಮಾಚಾರ ?

ಶ್ರೀ ವಾಟಾಳ್ ನಾಗರಾಜ್,—ತಮಗೆ ಗೊತ್ತಿದೆ, ನಾನು ನನ್ನ ಜೀವನದಲ್ಲಿ ಎಂದೂ ಕುಡಿಯಲಿಲ್ಲ. ತತ್ವ ನೀತಿ ಎಂದು ಏನೂ ಇಲ್ಲ. ಬೀಡಿ ಸಿಗರೇಟ್ ಕೂಡ ಸೇದಿಲ್ಲ. ಕಾಫಿ. ಟೀ ಕೂಡ ಕುಡಿಯುವುದಿಲ್ಲ. ನೀತಿ ನಿಯಮ ಯಾರಿಗೋಸ್ಕರ ಅಲ್ಲ, ನನಗೋಸ್ಕರ ಮಾಡಿಕೊಂಡಿದ್ದುದು.

ಅಧ್ಯಕ್ಷರು.—ನೀವು ನಿಮ್ಮ ಭಾಷಣವನ್ನು ನಾಳೆ ಮುಂದುವರಿಸಬಹುದು.

ಪ್ರ ಕ ಟ ಣೆ

ಅಧ್ಯಕ್ಷರು.—ಸ್ಪೀಕರ್ ಗ್ಯಾಲರಿಯಿಂದ ಶ್ರೀ ಕೆ. ಎಸ್ ಸುರೇಶ್ ಎಂಬುವರು ಪಾಕಿಸ್ಥಾನದ ವಿರುದ್ಧ ಘೋಷಣೆ ಕೂಗಿ ಕರಪತ್ರವನ್ನು ವಿಧಾನಸಭೆಯ ಸಭಾಂಗಣಕ್ಕೆ ಹಾಕಿರುತ್ತಾರೆ. ಈ ರೀತಿ ವರ್ತಿಸುವುದು ಸಭೆಯ ಗೌರವಕ್ಕೆ ಕುಂದು ತಂದಿರುವುದರಿಂದ ಇನ್ನು ಮುಂದೆ ಈ ರೀತಿ ವರ್ತಿಸದಂತೆ ಸದರಿ ಶ್ರೀ ಕೆ. ಎಸ್. ಸುರೇಶ್ ಎಂಬುವರಿಗೆ ಎಚ್ಚರಿಕೆ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಈಗ ಸಭೆಯು ಮುಂದುವರಿದು ನಾಳೆ ಬೆಳಿಗ್ಗೆ ೧೧ ಗಂಟೆಗೆ ಮತ್ತೆ ಸೇರುತ್ತದೆ.

(ಸದನವು ಸಂಜೆ ೫ ಗಂಟೆ ೪ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ೨೦ನೇ ಮಾರ್ಚ್ ೧೯೭೦ರ ಮಂಗಳವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)